1

**ಕೃಷ್ಣಂ ವಂದೇ ಮಂಥಪಾಶಧರಂ ದಿವ್ಯಾರ್ಭಕಾಕೃತಿಂ । ಶಿಖಾಬಂಧತ್ರಯೋಪೇತಂ ಭೈಷ್ಮೀ ಮಧ್ವಕರಾರ್ಚಿತಂ ॥**

ಗತಶಾಲಿವಾಹನ ಶಕವರ್ಷ : ೧೯೨೬
ವಿಕ್ರಮ ಶಕವರ್ಷ : ೨೦೬೦-೨೦೬೧
ಕೊಲ್ಲಂ ಶಕವರ್ಷ : ೧೧೭೯ - ೧೧೮೦
ವರ್ತಮಾನ ಫಸಲಿ : ೧೪೧೩-೧೪೧೪



ಗತ ಕಲಿವರ್ಷ : ೫೧೦೫
ವರ್ತಮಾನ ಇಸವಿ : ೨೦೦೪-೨೦೦೫
ಉಡುಪಿ ಅಕ್ಷಾಂಶ : 13-20 ಉ
ಉಡುಪಿ ರೇಖಾಂಶ : 74-45ಪೂ
ರೇಖಾಂತರ ವಿಘಟಿ : (೦-೧೯)

# ಉಡುಪಿ ಶ್ರೀ ಕೃಷ್ಣ ಮುಖ್ಯಪ್ರಾಣ ಪಂಚಾಂಗಂ

**ಸಂಪಾದಕ ಮಂಡಳಿ**

ಶ್ರೀ ಯರ್ಮುಂಜೆ ಶಂಕರ ಜೋಯಿಸ
ಶ್ರೀ ಬೈಲೂರು ಅನಂತ ಪದ್ಮನಾಭ ತಂತ್ರಿ
ಶ್ರೀ ಬನ್ನಂಜೆ ಗೋವಿಂದಾಚಾರ್ಯ
ಶ್ರೀ ಕೊರಂಗ್ರಪಾಡಿ ಸೀತಾರಾಮ ಆಚಾರ್ಯ
ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ
ಶ್ರೀ ಸಾಲಿಗ್ರಾಮ ಶ್ರೀನಿವಾಸ ಅಡಿಗ
ಶ್ರೀ ಶಿಬಿರೂರು ಹಯಗ್ರೀವ ತಂತ್ರಿ
ಶ್ರೀ ಬನ್ನಂಜೆ ರಾಮಾಚಾರ್ಯ
ಶ್ರೀ ಪ್ರಸನ್ನಾಚಾರ್ಯ
ಶ್ರೀ ಉಳ್ಳೂರು ಮಾಧವ ಅಡಿಗ

2

## ಭಗವದ್ಭಕ್ತರಲ್ಲೊಂದು ಮನವಿ

ಫಲಿಮಾರು, ಪೇಜಾವರ, ಅದಮಾರು, ಸುಬ್ರಹ್ಮಣ್ಯ ಮತ್ತು ಶ್ರೀಪುತ್ತಿಗೆ ಶ್ರೀಗಳವರು ನಿರ್ಧರಿಸಿದಂತೆ ಮತ್ತು ತದನುಸಾರ ಪ್ರಕಟಗೊಳ್ಳುವ ಉಡುಪಿ ಶ್ರೀಕೃಷ್ಣ ಮುಖ್ಯಪ್ರಾಣ ಪಂಚಾಂಗದಂತೆ ಇನ್ನು ಮುಂದೆ ಏಕಾದಶಿ ವ್ರತ ಮೊದಲಾದ ಸಕಲ ಧಾರ್ಮಿಕ ಕಾರ್ಯಗಳನ್ನೂ ನವೀನ ದೃಗ್ಗಣಿತ ರೀತ್ಯಾ ನಡೆಸಬೇಕೆಂದು ಈ ಮೂಲಕ ನಾವು ಒಪ್ಪಿರುತ್ತೇವೆ ಮತ್ತು ಅದರಂತೆ ನಮ್ಮ ಶಿಷ್ಯವೃಂದದವರೂ ಆಚರಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇವೆ.

**ಕೆ. ಕೃಷ್ಣಮೂರ್ತಿ ಭಟ್**, ಎಲ್ಲೂರು
**ಎಲ್. ಗೋಪಾಲ ಭಟ್**, ಎಲ್ಲೂರು
**ಎ. ಗಣಪತಿ ಉಡುಪ**, ಶ್ರೀ ಮಹಾಗಣಪತಿ ಮಂದಿರ ಹಳೆಯಂಗಡಿ
**ಎ. ಆರ್. ಉಡುಪ**, ಉಡುಪಿ ಪಂಚಾಂಗ, ಅತ್ತೂರು
**ಚಿಪ್ಪಿಗಿರಿ ನಾಗೇಂದ್ರ ಆಚಾರ್ಯ**, ಉಡುಪಿ
**ಲಕ್ಷ್ಮೀನಾರಾಯಣ ಭಟ್**, ಮಂಗಳೂರು
**ಗೋಪಾಲಕೃಷ್ಣ ಸಾಮಗ**, ಕುಂಜಿಬೆಟ್ಟು - ಸಗ್ರಿ
**ಕೆ. ಶ್ರೀನಿವಾಸ ಉಡುಪ**, ಕುಂಜೂರು
**ಕೆ. ವಿ. ಗೋಪಾಲ ಭಟ್**, ಕಲ್ಯ ಕಾಪು
**ಡಿ. ಕೆ. ಕೃಷ್ಣ ಭಟ್**, ಬೆಳ್ಮಣ್
**ಕೆ. ಎಸ್. ಎ. ಅಸ್ರಣ್ಣ**, ಕಟೀಲು
**ಕೆ. ಶ್ರೀಶ ಉಪಾಧ್ಯಾಯ**, ಉಡುಪಿ
**ಸು. ಸೀತಾರಾಮ ಭಟ್**, ಕಲ್ಲಮುಂಡ್ಕೂರು
**ಕೇಂಜ ಶ್ರೀಧರ ತಂತ್ರಿ**
**ಶ್ರೀಪತಿ ಆಚಾರ್ಯ**, ಹೈದರಾಬಾದ್
**ಶ್ರೀಪತಿ ಭಟ್**, ಎಲ್ಲೂರು
**ರಾಘವೇಂದ್ರ ಭಟ್**, ಎಲ್ಲೂರು
**ವಾಸುದೇವ ಅಸ್ರಣ್ಣ**, ಕಟೀಲು
**ಪದ್ಮನಾಭ ತಂತ್ರಿ**, ಕಟೀಲು
**ಶ್ರೀನಿವಾಸ ತಂತ್ರಿ**, ಕಟೀಲು
**ರಘುರಾಮಾಚಾರ್ಯ**, ಬಾಳೆಕುದ್ರು
**ಅನಂತರಾಮ ಭಟ್**, ನಂದಿಕೂರು
**ಕಡೇಕಾರು ಶ್ರೀಶ ಭಟ್**
**ಜೆ. ಪಿ. ನಾಗರಾಜಾಚಾರ್ಯ**, ಟಿ. ನಗರ ಮದ್ರಾಸ್
**ಟಿ. ರಾಮಕೃಷ್ಣ ಕೇಕುಡ**, ಬೆಂಗಳೂರು
**ಶ್ರೀಧರ ಉಪಾಧ್ಯಾಯ**, ಕುಂಭಾಶಿ
**ಸುಬ್ರಹ್ಮಣ್ಯ ಉಪಾಧ್ಯಾಯ**, ಕುಂಭಾಶಿ
**ಕಾಪು ರಾಘವೇಂದ್ರ ಭಟ್**
**ಕೆ. ವಿ. ಕೃಷ್ಣ ಭಟ್**, ಪ್ರಧಾನ ಅರ್ಚಕರು ಶ್ರೀಸುಬ್ರಹ್ಮಣ್ಯ ದೇವಸ್ಥಾನ, ಕಡಂದಲೆ
**ಬಾಲಕೃಷ್ಣ ಪಾಂಗಣ್ಣಾಯ**, ಓಮದಪದವು
**ಈಶ್ವರ ಭಟ್**, ಅಲಂಗಾರು ಮಹಾಲಿಂಗೇಶ್ವರ ದೇವಸ್ಥಾನ, ಮೂಡುಬಿದ್ರಿ
**ಶ್ರೀನಿವಾಸ ಮಯ್ಯ**, ಕುಮಾರಮಂಗಳ, ಕಿಲ್ಪಾಡಿ
**ಉಡುಪಿ ರಾಮನಾಥಾಚಾರ್ಯ**
**ವೇದವ್ಯಾಸ ಐತಾಳ್**, ಉಡುಪಿ



## ಪರ್ಯಾಯ ಶ್ರೀಪಾದರ ಸಂದೇಶ

**ಶ್ರೀ ವಿಶ್ವಪ್ರಿಯ ತೀರ್ಥ ಸ್ವಾಮೀಜಿ**
ಜಗದ್ಗುರು ಶ್ರೀಮಧ್ವಾಚಾರ್ಯ ಮೂಲ ಮಹಾಸಂಸ್ಥಾನ
ಶ್ರೀ ಅದಮಾರು ಮಠ, ಉಡುಪಿ

ಪರ್ವಗಳ ಪೈಕಿ ಹರಿದಿನತ್ರಯಗಳು ಬಹಳ ಪ್ರಶಸ್ತವಾದವುಗಳು. ಬೇರೆ ಹಬ್ಬಗಳ ದಿನಗಳು ಸ್ವಲ್ಪ ವ್ಯತ್ಯಸ್ತವಾದರೂ ಅಷ್ಟು ಬಾಧಕವಾಗುವುದಿಲ್ಲ. ಆದರೆ ಏಕಾದಶಿಯ ಆಚರಣೆಯ ಬಗ್ಗೆ ಬಹಳ ಹುಷಾರ್ ಆಗಿರಬೇಕು. ಏಕಾದಶೀ ಅಲ್ಲದ ದಿವಸ ಉಪವಾಸ ಮಾಡಿ ಗಾಂಧಾರಿ ತನ್ನ 100 ಮಕ್ಕಳನ್ನು ಕಳೆದುಕೊಂಡಳು ಎಂದು ಪುರಾಣಗಳು ಹೇಳುತ್ತಿವೆ. ನಮ್ಮಲ್ಲಿ ಪಂಚಾಂಗಗಳು ಬಹಳ ಇವೆ. ಯಾವುದು ಸರಿ ಯಾವುದು ತಪ್ಪು ಎಂದು ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ಈಗಿನ ಯಂತ್ರಗಳಿಂದ ಸೂರ್ಯಚಂದ್ರರ ಅಂತರವನ್ನು ತಿಳಿದುಕೊಂಡು ಏಕಾದಶೀ ತಿಥಿಯನ್ನು ಪ್ರತ್ಯಕ್ಷವಾಗಿ ತಿಳಿಯುವುದು ಉತ್ತಮ. ಈ ನಿಟ್ಟಿನಲ್ಲಿ ಉಡುಪಿಯ ಶ್ರೀಪುತ್ತಿಗೆ ಶ್ರೀಪಾದರು ನವೀನ ದೃಗ್ಗಣಿತ ಪಂಚಾಂಗವನ್ನು ಮಾಡಲು ಪ್ರವೃತ್ತರಾದದ್ದು ಬಹಳ ಶ್ಲಾಘನೀಯ. ಬ್ರಾಹ್ಮಣರಲ್ಲಿ ಅದರಲ್ಲೂ ಮಾಧ್ವರಲ್ಲಿ ಇರುವ ಈ ವಿಷಯದಲ್ಲಿ ಭಿನ್ನಾಭಿಪ್ರಾಯವನ್ನು ಪರಿಹರಿಸುವಲ್ಲಿ ಶ್ರೀಕೃಷ್ಣನ ಅನುಗ್ರಹ ಶ್ರೀಗಳವರಿಗೆ ಇರಲಿ ಎಂದು ಆಶಿಸುತ್ತೇವೆ. ★





## ಶ್ರೀ ನುಡಿ

**ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು**
ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲಮಹಾಸಂಸ್ಥಾನಮ್
ಶ್ರೀ ಪುತ್ತಿಗೆ ಮಠ, ಉಡುಪಿ

ಉಡುಪಿ ಶ್ರೀ ಕೃಷ್ಣ ಮುಖ್ಯಪ್ರಾಣ ಪಂಚಾಂಗವು ಹನ್ನೊಂದನೆಯ ವರುಷಕ್ಕೆ ಪಾದಾರ್ಪಣೆ ಮಾಡುವ ಮೂಲಕ ಚತುರ್ದಿಕ್ಕುಗಳಲ್ಲೂ ಹರಡಿದ್ದು ಬಹಳ ಸಂತಸದ ಸಂಗತಿ. ಈ ನೂತನ ಪಂಚಾಂಗಕ್ಕೆ ಜನರು ನೀಡಿದ ತುಂಬು ಬೆಂಬಲ ಕಂಡು ಬಹಳ ಅಚ್ಚರಿಯೆನಿಸಿದೆ.

ದೃಕ್‌ಧೃತವಾದ ಗಣಿತಗುಣಿತವನ್ನು ಪ್ರತಿಯೊಬ್ಬ ಪಂಡಿತರೂ ಪುರಸ್ಕರಿಸಿದ್ದಾರೆ. ಕಂಡವರ ಕಾಣ್ಕೆ ದೃಗ್ಗಣಿತ. ಅದು ತಪ್ಪು ಎನ್ನುವವರನ್ನು ನಾವು ಕಂಡಿಲ್ಲ. ಧರ್ಮಶಾಸ್ತ್ರಕಾರರೂ ದೃಗೈಕ್ಯ ಬರುವ ಗಣಿತವನ್ನು ಆಧರಿಸಿಯೆ ಧರ್ಮ - ಕರ್ಮಾನುಷ್ಠಾನಗಳ, ವ್ರತನಿಯಮಾದಿಗಳ ವಿಧಿನಿಬಂಧನೆಗಳನ್ನು ಸೂಚಿಸಿದ್ದಾರೆ. ಎನ್ನುವುದೇ ತೌಲನಿಕ ಮತ್ತು ಸಮತೋಲನದ ವಸ್ತುನಿಷ್ಠ ವಿಚಾರವುಳ್ಳ ಎಲ್ಲ ವಿದ್ವಜ್ಜನರ ಅಭಿಪ್ರಾಯವಾಗಿದೆ.

ಇದನ್ನು ಮನಗಂಡು ಅತ್ತೂರು ಉಡುಪರು ತಮ್ಮ ಹಿರಿಯರ ಇಂಗಿತವನ್ನು ಗುರುತಿಸಿ ತಮ್ಮ ಪಂಚಾಂಗವನ್ನು ದೃಗ್ಗಣಿತದಂತೆ ಆರಂಭಿಸಿರುವುದು ಅತ್ಯಂತ ಸಮುಚಿತ. ಅವರ ಮೇಲೆ ವಿಶೇಷ ನಂಬಿಕೆಯಿರಿಸಿದ ಸಕಲ ಆಸ್ತಿಕರು ಅವರ ಪಂಚಾಂಗವನ್ನು ಆಧರಿಸಿ ನಡೆಸುವ ಪ್ರತಿಯೊಂದು ನೇಮನಿಷ್ಠೆಗಳ ಫಲದ ಭಾಗ ಅವರಿಗೆ ಲಭಿಸುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ. ಸತ್ಯದ ವಿಷಯದಲ್ಲಿ ಅವರಿಗಿರುವ ವಿವೇಕ - ಶ್ರದ್ಧೆ ಎಲ್ಲರಿಗೂ ಅನುಕರಣೀಯವಾಗಿದೆಯೆಂದೆ ನಾವು ಭಾವಿಸುತ್ತೇವೆ.

ಈ ನಿಟ್ಟಿನಲ್ಲಿ ಸತ್ಯದ ಆವಿಷ್ಕಾರಕ್ಕೆ ಇಂಬು ನೀಡಿರುವ ಮತ್ತು ಉಡುಪಿ ಶ್ರೀಕೃಷ್ಣ ಮುಖ್ಯಪ್ರಾಣ ಪಂಚಾಂಗಕ್ಕೆ ಮೂಲಪ್ರವರ್ತಕರಾದ ನಮ್ಮ ಗುರುಗಳಾದ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀ ಪಾದರಿಗೂ, ಪೇಜಾವರ, ಅದಮಾರು ಶ್ರೀಪಾದರಿಗೂ ಸಕಲ ಸದ್‌ಭಕ್ತರೂ ಚಿರಋಣಿಗಳು.

**ಪುಣ್ಯಸ್ಮರಣೆ**

# ಗಣಿತಕ್ಕೆ ಬೀಜಸಂಸ್ಕಾರ ಅತ್ಯವಶ್ಯ



**ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು**
ಭಂಡಾರಕೇರಿ ಮತ್ತು ಫಲಿಮಾರು ಮಠಾಧೀಶರು, ಉಡುಪಿ

ತಿಥ್ಯಾದಿಗಳ ನಿರ್ಣಯಕ್ಕೆ ಶುದ್ಧ ಆರ್ಯಭಟ ಗಣಿತವನ್ನೇ ಅವಲಂಬಿಸಬೇಕು; ಬೀಜ ಸಂಸ್ಕಾರಕ್ಕೊಳಪಡುವ ಗಣಿತವನ್ನು ಬಳಸಿಕೊಳ್ಳಬಾರದು - ಎಂದು ಕೆಲವರ ವಾದ.

ಆದರೆ ಶಾಸ್ತ್ರೀಯ ದೃಷ್ಟಿಯಿಂದಾಗಲೀ ಸಂಪ್ರದಾಯದ ದೃಷ್ಟಿಯಿಂದಾಗಲೀ ಇದು ಉಚಿತವೆನಿಸುವುದಿಲ್ಲ.

ಗಣಿತಕ್ಕೆ ಸಂಬಂಧಿಸಿರುವ ಪ್ರತಿಯೊಂದು ಸಿದ್ಧಾಂತವೂ ಆಯಾ ಕಾಲಕ್ಕೆ ದೃಕ್ ಪ್ರತ್ಯಕ್ಷಕ್ಕೆ ತುಲ್ಯವಾದ ಗ್ರಹಸ್ಥಿತಿಯನ್ನು ನೀಡುವುದು. ಆದರೆ ಕಾಲಾಂತರದಲ್ಲಿ ಚಲನಶೀಲರಾದ ಗ್ರಹಗಳ ಗತಿಸ್ಥಿತಿಯಲ್ಲಿ ಆಗುವ ಬದಲಾವಣೆಯನ್ನನುಸರಿಸಿ ಸಂಸ್ಕಾರ ಭೇದಗಳುಂಟಾಗುವುವು. ಇಂತಹ ಕಾಲಾಂತರ ಸಂಸ್ಕಾರ ಸಂಸ್ಕೃತಗಳಾದ ಗ್ರಹಗಳು ಸ್ಫುಟವಾಗುವುವು. ಗತಿಭೇದದಿಂದ ಸಂಸ್ಕಾರ ಭೇದಗಳುಂಟಾದಾಗ ಅದನ್ನು ಸರಿಪಡಿಸಿಕೊಳ್ಳುವುದನ್ನು ಎಲ್ಲ ಸಿದ್ಧಾಂತಕಾರರೂ ಒಪ್ಪಿರುತ್ತಾರೆ.

ಆರ್ಯಭಟ ಗಣಿತಕ್ಕೂ ಪರಹಿತ ಗ್ರಂಥಕಾರರು ಶತಾಬ್ದ ಎಂಬ ಬೀಜ ಸಂಸ್ಕಾರ ಮಾಡಿದ್ದರು. ಆದ್ದರಿಂದ ಆ ಕಾಲದಲ್ಲಿ ಆ ಗಣಿತದಿಂದ ಗ್ರಹಣಾದಿಗಳು ಸರಿಯಾಗಿ ಬರುತ್ತಿದ್ದವು. ಶ್ರೀ ಮಧ್ವಾಚಾರ್ಯರ ಕಾಲದಲ್ಲಿಯೂ ಪರಿಷ್ಕೃತವಾದ ಗಣಿತದಿಂದಲೇ ತಿಥಿಗಳಿಗೆ, ಗ್ರಹಣಾದಿಗಳನ್ನು ತೀರ್ಮಾನಿಸುತ್ತಿದ್ದರು. ಬೀಜಸಂಸ್ಕಾರವನ್ನು ತಿಥ್ಯಾದಿಗಳಿಗೆ ಅಲ್ಲಗಳೆಯುವವರು ಲಂಬನಾದಿ ಸಂಸ್ಕಾರಗಳನ್ನು ಬೇಡವೆಂದದ್ದೇ ವಿನಾ ಈ ಬೀಜ ಸಂಸ್ಕಾರವನ್ನಲ್ಲ.



ಆರ್ಯಭಟ ಗಣಿತಕ್ಕೆ ಬಹಳ ಹಿಂದೆಯೇ ಸಂಸ್ಕಾರವಾಗಿರುವುದರಿಂದ ತಾತ್ಕಾಲಿಕ ಸ್ಫುಟದಲ್ಲಿ ಭೇದ ಕಂಡು ಬರುವ ಪ್ರಯುಕ್ತ ಇದರಿಂದ ಉಂಟಾಗತಕ್ಕ ತಿಥ್ಯಾದಿಗಳು ಸ್ಫುಟತರವಾಗಲಾರವು. ಇಂತಹ ಅಪರಿಷ್ಕೃತವಾದ ಗಣಿತದಿಂದ ತಪ್ಪಾಗಿ ತಿಥ್ಯಾದಿಗಳನ್ನು ತೀರ್ಮಾನಿಸಿ ಏಕಾದಶ್ಯಾದಿ ವೈಷ್ಣವ ವ್ರತವನ್ನು ಆಚರಿಸಿದಲ್ಲಿ ಅನರ್ಥವೇ ಸಂಭವಿಸೀತು.

**ದೃಗ್ಗಣಿತ ಆ ದಿಸೆಯಲ್ಲಿ ಸೂಕ್ತವೆನಿಸುತ್ತದೆ.**

ಶ್ರೀ ಮಧ್ವಾಚಾರ್ಯರು ಬೀಜ ಸಂಸ್ಕೃತವಾದ ಆರ್ಯಗಣಿತವನ್ನು ಮಾನ್ಯ ಮಾಡಿದ್ದಾರೆಂದ ಮೇಲೆ ದೃಕ್ತುಲ್ಯ ರವಿಚಂದ್ರರಿಂದ ಸಾಧಿತ ತಿಥಿಯೇ ಸರ್ವಕಾಲಕ್ಕೂ ಯೋಗ್ಯವೆಂಬ ಅಭಿಪ್ರಾಯ ಅವರದ್ದಾಗಿತ್ತು ಎನ್ನ ಬಹುದಾಗಿದೆ. ಒಂದು ವೇಳೆ ಪ್ರಾಚೀನ ಗಣಿತವೆಂಬ ಕಾರಣಕ್ಕಾಗಿಯೇ ಆರ್ಯಭಟವನ್ನು ಆಚಾರ್ಯರು ಅಂಗೀಕರಿಸಿದ್ದಾಗಿದ್ದರೆ ಅದಕ್ಕಿಂತ ಪ್ರಾಚೀನ ಹಾಗೂ ಆರ್ಷವೆಂದೆನಿಸುವ ಸೂರ್ಯ ಸಿದ್ಧಾಂತಾದಿ ಗಣಿತವನ್ನು ಏಕೆ ಕೈ ಬಿಟ್ಟಿರುವರು ? ಇದರಿಂದ ಆರ್ಯಭಟೀಯ ಗಣಿತವನ್ನು ಆಚಾರ್ಯರು ಒಪ್ಪಿದುದು ತತ್ಕಾಲದಲ್ಲಿ ಗ್ರಹಣಾದಿಗಳಿಗೆ ಸಂವಾದಿಯಾದ ಸೂಕ್ಷ್ಮ ಗಣಿತ ಪದ್ಧತಿ ಆದಾಗಿತ್ತೆಂಬ ದೃಷ್ಟಿಯಿಂದಲೇ ಎಂಬುದು ಸ್ಪಷ್ಟ. ಪ್ರಕೃತ ದೃಗ್ಗಣಿತ ಗ್ರಹಣಾದಿಗಳಿಗೆ ಸಂವಾದಿಯಾಗಿರುವ ಗಣಿತವಾಗಿರುವುದರಿಂದ ಅದು ಆಚಾರ್ಯರಿಗೆ ಸಮ್ಮತ ಎಂದು ಸಿದ್ಧವಾಗಬಲ್ಲದು.

ಸಂಸ್ಕಾರಕ್ಕೊಳಪಟ್ಟ ಗಣಿತದಿಂದ ತಿಥ್ಯಾದಿಗಳನ್ನು ತೀರ್ಮಾನಿಸಬಾರದೆಂದು ನಿಷೇಧಿಸುತ್ತಿರುವ ಸ್ಕಾಂದಾದಿ ಪುರಾಣಗಳ ಮಾತುಗಳು ತಾಮಸ ಪುರಾಣಗಳ ಮಾತಾಗಿರುವುದರಿಂದ ಸಾತ್ತ್ವಿಕ ಪುರಾಣ ಎನಿಸಿರುವ ವರಾಹ ಪುರಾಣದ ಮಾತಿಗೆ ವಿರುದ್ಧವಾದ ಅವುಗಳು ಅಪ್ರಮಾಣಗಳೆಂದೇ ತೀರ್ಮಾನಿಸಬಹುದಾಗಿದೆ. ಅಲ್ಲದೆ, ಇತ್ತೀಚೆಗೆ ಬಳಸಲ್ಪಡುವ ದೃಕ್‌ಸಿದ್ಧ ಎಂಬ ಶಬ್ದ ಪ್ರಯೋಗ ಸ್ಕಾಂದ ಪುರಾಣದ್ದೆನ್ನಲಾದ ಆ ಮಾತಿನಲ್ಲಿ ಇದೆ ಎಂದರೆ ಅದು ಯಾರೋ ದೃಗ್ಗಣಿತದ ವಿರೋಧಿಗಳಿಂದ ಪ್ರಕ್ಷಿಪ್ತವಾದ ಮಾತು ಎಂದೂ ಸಿದ್ಧಿಸುವುದು.

ದೃಗ್ಗಣಿತದ ಆಧಾರದಲ್ಲಿ ತಿಥ್ಯಾದಿಗಳನ್ನು ಗಣಿಸಿದಲ್ಲಿ ಕೆಲವೊಮ್ಮೆ ಅಪರಾಹ್ನ ವ್ಯಾಪಿಸಿಯಾದ ತಿಥಿ ದೊರಕುವುದಿಲ್ಲ. ಶ್ರಾದ್ಧಾದಿಗಳಿಗೆ ಅಪರಾಹ್ನ ವ್ಯಾಪಿನಿ ತಿಥಿ ಅವಶ್ಯವಾದುದರಿಂದ ದೃಗ್ಗಣಿತವನ್ನು ಹೇಗೆ ಆಧರಿಸುವುದು ? - ಎಂದು ಕೆಲವರು ಸಂದೇಹ ಪಡುವುದುಂಟು. ಆದರೆ ಅಪರಾಹ್ನ ವ್ಯಾಪಿನಿಯಾದ ತಿಥಿ ಬೇಕು - ಎಂದು ತಿಳಿಸುವ ಶಾಸ್ತ್ರದಲ್ಲಿ ಅಪರಾಹ್ನವ್ಯಾಪಿನಿ ತಿಥಿ ಸಿಗದಿದ್ದರೆ ಉದಯದಲ್ಲಿ ಇರುವ ತಿಥಿಯನ್ನು ಇಟ್ಟುಕೊಳ್ಳಬಹುದೆಂದೂ ತಿಳಿಸಿರುವುದರಿಂದ ಅಪರಾಹ್ನ ವ್ಯಾಪಿನಿ ತಿಥಿ ದೊರಕದಿರುವುದು ಧರ್ಮಶಾಸ್ತ್ರಕ್ಕೆ ಅಸಮ್ಮತವಾದುದಲ್ಲ ಎಂದು ಸಿದ್ಧಿಸುವುದು ತಾನೇ?

ಆದ್ದರಿಂದ ಗ್ರಹಣಾದಿಗಳಿಗೆ ಸಂವಾದಿಯಾಗಿರುವ ದೃಗ್ಗಣಿತದ ಆಧಾರದಲ್ಲಿಯೇ ಏಕಾದಶ್ಯಾದಿ ತಿಥಿಗಳನ್ನು ನಿರ್ಣಯಿಸಿ, ಆ ತಿಥಿಗಳಲ್ಲಿ ಏಕಾದಶೀವ್ರತಾದಿಗಳನ್ನು ಆಚರಿಸುವುದೇ ಸಮುಚಿತವೆನಿಸಿದೆ.



**ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿ**
ಜಗದ್ಗುರು ಶ್ರೀ ಮಧ್ವಾಚಾರ್ಯ ಸಂಸ್ಥಾನ
ಶ್ರೀ ಪೇಜಾವರ ಅಧೋಕ್ಷಜ ಮಠ
ಉಡುಪಿ

ನವೀನ ದೃಗ್ಗಣಿತವನ್ನು ಆಧರಿಸಿದ ಮುಖ್ಯಪ್ರಾಣ ಪಂಚಾಂಗವು ಉಡುಪಿಯಿಂದ ಹೊರಡುತ್ತಿರುವುದು ಸಂತೋಷದ ವಿಷಯವಾಗಿದೆ. ಪ್ರಾಚೀನ ಆರ್ಯಭಟ ಪಂಚಾಂಗವು ಆಗಿನ ಕಾಲದಲ್ಲಿ ಪ್ರತ್ಯಕ್ಷಕ್ಕೆ ಅನುಗುಣವಾಗಿದ್ದರೂ ಇಂದು ಸರಿಯಾದ ಸಂಸ್ಕಾರವು ನಡೆಯದಿರುವುದರಿಂದ ಪ್ರತ್ಯಕ್ಷಕ್ಕೆ ಈಗ ಅನುಗುಣವಾಗಿರುವುದಿಲ್ಲ. ದೃಕ್ಕಿಗೆ ಅನುಗುಣವಾಗಿಯೇ ಏಕಾದಶಿ ಮುಂತಾದವುಗಳನ್ನು ಆಚರಿಸಬೇಕೆಂದು ವರಾಹ ಪುರಾಣವು ಸುಸ್ಪಷ್ಟವಾಗಿ ತಿಳಿಸಿದೆ. ಆದುದರಿಂದ ಪ್ರತ್ಯಕ್ಷವನ್ನು ಗೌರವಿಸಿ, ದೃಗ್ಗಣಿತಕ್ಕೆ ಅನುಗುಣವಾಗಿ ನಾವು ಧರ್ಮಾಚರಣೆಯನ್ನು ಮಾಡುವುದು ಶಾಸ್ತ್ರೀಯವೂ, ವೈಜ್ಞಾನಿಕವೂ ಎಂದು ನಮ್ಮ ಅಭಿಪ್ರಾಯವಾಗಿದೆ. ವಿದ್ವಾಂಸರು ಈ ವಿಷಯದಲ್ಲಿ ಇನ್ನೂ ಹೆಚ್ಚಿನ ವಿಮರ್ಶೆಯನ್ನು ಮಾಡುವುದನ್ನು ನಾವು ಸ್ವಾಗತಿಸುತ್ತೇವೆ. ನಮ್ಮ ಅಷ್ಟಮಠಗಳ ಶಿಷ್ಯರು ಈ ದೃಗ್ಗಣಿತ ಪಂಚಾಂಗದಂತೆ ಏಕಾದಶೀ ಉಪವಾಸ ದಂತಹ ಧಾರ್ಮಿಕ ಆಚರಣೆಯನ್ನು ನಡೆಸಬೇಕಾಗಿ ಅಪೇಕ್ಷಿಸುತ್ತೇವೆ.



**ಶ್ರೀ ವಿಬುಧೇಶ ತೀರ್ಥರು**
ಶ್ರೀ ಅದಮಾರು ಮಠ,
ಉಡುಪಿ

ದೃಶ್ಯ ವಿಷಯದಲ್ಲಿ ಆಗಮಕ್ಕಿಂತ ಪ್ರತ್ಯಕ್ಷವೇ ಪ್ರಬಲ. ಸೂರ್ಯಚಂದ್ರರ ಗ್ರಹಣವು ವೇಧ ಶಾಲೆಗಳ ಮೂಲಕ ದರ್ಶನದಿಂದ ತಿಳಿಯಲು ಬರುವುದರಿಂದ ಅಲ್ಲಿ ಸಿದ್ಧಾಂತ ಧೃತ ಸಿದ್ಧಾಂತಗಳಿಗೆ ಸ್ಥಾನವಿಲ್ಲ. ವರಾಹ ಪುರಾಣದಲ್ಲಿ ಚಂದ್ರ ಸೂರ್ಯಗ್ರಹಣವನ್ನು ಯಾವ ವಿಧಾನದ ಮೂಲಕ ನಿರ್ಧರಿಸುವೆವೋ ಆ ದರ್ಶನದ ಮೂಲಕವೇ ದಶವ್ಯಾದಿತ್ರಯದ ಅನುಷ್ಠಾನವನ್ನು ಮಾಡಬೇಕೆಂದು ಸ್ಪಷ್ಟವಾಗಿ ತಿಳಿಸಿರುವುದರಿಂದ ಗ್ರಹಣ ಕಾಲವನ್ನು ನಿರ್ಧರಿಸಿರುವ ಸಿದ್ಧಾಂತದ ಮೂಲಕವೇ ದಶವ್ಯಾದಿ ಮೂರು ತಿಥಿಗಳ ಕಾಲವನ್ನು ನಿರ್ಧರಿಸಿಕೊಳ್ಳಬೇಕು ಎಂಬುದು ಸ್ಪಷ್ಟವಿದೆ.

ಈ ದೃಷ್ಟಿಯಲ್ಲಿ ನವೀನ ದೃಗ್ಗಣಿತರೀತ್ಯಾ ಹೊರಬರುತ್ತಿರುವ ಈ ಮುಖ್ಯಪ್ರಾಣ ಪಂಚಾಂಗವು ಸರ್ವರಿಂದಲೂ ಅನುಸರಣೀಯವಾಗಿದೆ. ★





**ಶ್ರೀ ರಘುಮಾನ್ಯತೀರ್ಥ ಸ್ವಾಮೀಜಿ**
**ಶ್ರೀ ಭೀಮಸೇತು ಮುನಿವೃಂದಮಠ**
**ಭೀಮನಕಟ್ಟೆ**
**ದೂರ್ವಾಸಪುರಂ ಅಂಚೆ - 577 432**
**ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ**

ಹಿಂದುಗಳ ಎಲ್ಲಾ ಕರ್ಮಗಳು ಗ್ರಹಸ್ಥಿತಿಗಳನ್ನನುಸರಿಸಿ ನಡೆಯಬೇಕಾದ್ದರಿಂದ ಭವಿಷ್ಯತ್ಕಾಲದ ಗ್ರಹಸ್ಥಿತಿಗಳನ್ನು ಸ್ಥೂಲವಾಗಿಯಾದರೂ ತಿಳಿಯುದಕ್ಕೊಸ್ಕರ ಪ್ರಾಚೀನರು ಸೂರ್ಯಸಿದ್ಧಾಂತ ಮೊದಲಾದ ಗ್ರಂಥಗಳನ್ನು ರಚಿಸಿದಂತೆ ಭಾವಿಸಬಹುದು. ಪ್ರತಿನಿತ್ಯದಲ್ಲಿ ನಳಿಕಾಯಂತ್ರ (ಟೆಲಿಸ್ಕೋಪ್) ದಿಂದ ಗ್ರಹಗಳ ಸ್ಥಾನವನ್ನು ಸೂಕ್ಷ್ಮವಾಗಿ ನಿರ್ಣೈಸಿ ಈ ದೃಕ್ ಸಿದ್ಧವಾದವುಗಳನ್ನು ಜಾತಕ, ಮುಹೂರ್ತಾದಿಗಳಲ್ಲಿ ಉಪಯೋಗಿಸುತ್ತಿದ್ದರು.

ಸಿದ್ಧಾಂತಾನುಸಾರಿ ನಿರ್ಣಯಗಳಿಗೂ, ದೃಕ್ಸಿದ್ಧ ನಿರ್ಣಯಕ್ಕೂ ಬಹಳ ಅಂತರವಿದೆಯೆಂದು ತಿಳಿದವರಾಗಿ ತಮ್ಮ ವಿಚಾರ ಮಂಥನದಿಂದ ಪ್ರಾಚೀನರು ವಾಸ್ತವವಾಗಿ ತೋರಿದ ಸಂಗತಿಗಳನ್ನೆಲ್ಲಾ ಸಂಗ್ರಹಿಸಿ ಹೊರಾಶಾಸ್ತ್ರ ರಚಿಸಿದ್ದಾಗಿ ತಿಳಿಯಬಹುದು. ಅಸತ್ಯವನ್ನು ದೂರಮಾಡಿದ ಮಹರ್ಷಿಗಳು ಕಾರಣವಿಲ್ಲದೆ ಶಾಸ್ತ್ರದಲ್ಲಿ ಸುಳ್ಳು ವಿಷಯಗಳನ್ನು ಸೇರಿಸಿದ್ದಾರೆಂದು ಯೋಚಿಸಬಹುದೇ?

ಹಾಗೆಯೇ ಏಕಾದಶೀ ವ್ರತಾಚರಣೆಗೆ ಪ್ರತಿಯೊಬ್ಬರೂ ಮಹತ್ತ್ವಕೊಡಬೇಕಾದ್ದರಿಂದ ಗೊಂದಲ ನಿವಾರಿಸಲು ಪುತ್ತಿಗೆ ಶ್ರೀಪಾದರು ದೃಗ್ಗಣಿತ ರೀತ್ಯಾ ಪಂಚಾಂಗ ಪ್ರಕಟಿಸುತ್ತಿರುವುದು ಅಭಿನಂದನೀಯ. ಶ್ರೀಮುಖ್ಯಪ್ರಾಣ ಶ್ರೀಕೃಷ್ಣರು ಅವರ ಕಾರ್ಯದಿಂದ ಪ್ರೀತರಾಗಲಿ. ★



**ಶ್ರೀ ವಿದ್ಯಾಧೀಶ ತೀರ್ಥರು**
ಶ್ರೀಹೃಷೀಕೇಶತೀರ್ಥ ಸಂಸ್ಥಾನಮ್
ಶ್ರೀ ಫಲಿಮಾರು ಮಠ, ಉಡುಪಿ

ಸಕಲವನ್ನೂ ಕಲೆಹಾಕುವ ಕಲೆ ಕಾಲದ್ದು.
ಜೀವನದಲ್ಲಿ ಕೆಡುಕಾದಾಗಲೆಲ್ಲ ಕಾಲವನ್ನು ಸ್ಮರಿಸದವರಿಲ್ಲ.

**'ಕಾಲಾಯ ತಸ್ಮೈ ನಮಃ'** ಎಂಬ ನಾಣ್ಣುಡಿಯೂ ಈ ಕಾರಣದಿಂದಲೇ ಹುಟ್ಟಿಕೊಂಡಿತೆಂದು ಕಾಣುತ್ತದೆ. ಆದರೆ ಜಡವಾದ ಕಾಲಕ್ಕೆ ಇಷ್ಟು ಮಹತ್ವವೆ? ಈ ಜಗತ್ತು ಜಡವಾದ ಕಾಲದ ಅಧೀನವೆ? ಖಂಡಿತ ಅಲ್ಲ. ಶ್ರೀಮದಾಚಾರ್ಯರು ದ್ವಾದಶ ಸ್ತೋತ್ರದಲ್ಲಿ

**ನಚ ಕರ್ಮವಿಮಾಮಲ ಕಾಲಗುಣ ಪ್ರಭೃತೀಶಮಚಿತ್ತನು ತದ್ಧಿಯತಃ।**
**ಚಿದಚಿತ್ತನು ಸರ್ವಮಸೌ ತು ಹರಿರ್ಯಮಯೇದಿತಿ ವೈದಿಕಮಸ್ತಿ ವಚಃ॥**

ಕರ್ಮ, ಕಾಲ, ಗುಣ ಮುಂತಾದವುಗಳು ಸ್ವತಂತ್ರವಾಗಿ ಯಾವುದನ್ನೂ ನಿಯಂತ್ರಿಸುತ್ತಿಲ್ಲ. ಏಕೆಂದರೆ ಅವು ಜಡವಷ್ಟೆ. ಈ ಜಡ-ಚೇತನಾತ್ಮಕವಾದ ಪ್ರಪಂಚವೆಲ್ಲವನ್ನೂ ಕಾಲನಾಮಕನಾದ ಹರಿಯೇ ಸ್ವತಂತ್ರವಾಗಿ ನಿಯಂತ್ರಿಸುತ್ತಿದ್ದಾನೆಂದು ವೇದವಾಣಿಯು ಸಾರುತ್ತಿದೆಯೆಂದು ಉಪದೇಶಿಸಿದ್ದಾರೆ.

ಶ್ರೀ ಕೃಷ್ಣ ಪರಮಾತ್ಮನೂ ಗೀತೆಯಲ್ಲಿ **'ಕಾಲೋಽಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ'** **'ಕಾಲಃ ಕಲಯತಾಮಹಮ್ಃ'** ಕಾಲನಾಮಕನಾಗಿದ್ದು ಎಲ್ಲವನ್ನೂ ನಾಶಪಡಿಸುವವ ನಾನೇ ಎಂದು ತಿಳಿಸಿದ್ದಾನೆ.

ಆ ಕಾಲನ ಅಧೀನವೇ ಈ ಜಗತ್ತು
ಆ ಕಾಲನ ಅರಿವಿಗಾಗಿಯೇ ಈ ಪಂಚಾಂಗ

ಸಕಲ ಲೌಕಿಕ - ಅಲೌಕಿಕ ಕರ್ಮಗಳ ಭವ್ಯ ಭವನದ ಬುನಾದಿ ಈ ಪಂಚಾಂಗ.
ಜನನದಿಂದ ಮರಣದವರೆಗೂ ಪಂಚಾಂಗ ಅತ್ಯಾವಶ್ಯಕ.
ದೇಶ - ಕಾಲಗಳನ್ನು ಸ್ಮರಿಸದೆ ಯಾವುದೇ ಸಂಕಲ್ಪವಿಲ್ಲ, ಸಂಕಲ್ಪವಿಲ್ಲದೇ ಯಾವುದೇ ಕರ್ಮವಿಲ್ಲ.
ದೇಶದ ಬಗ್ಗೆ ಯಾವತ್ತೂ ತಕರಾರಿಲ್ಲ; ಕಾಲದ ಬಗ್ಗೆಯೇ ತಕರಾರು.
ಹಾಗಾಗಿಯೇ ಈ ಪಂಚಾಂಗ ಅತ್ಯಗತ್ಯ.
ಪಂಚಾಂಗದ ಪಂಚ - ಅಂಗಗಳ ಅರಿವು ಪಂಚ - ಫಲದಾಯಕ.

ತಿಥಿಯ ಜ್ಞಾನ ಐಶ್ವರ್ಯದಾಯಕ
ವಾರದ ಅರಿವು ಆಯುಷ್ಯದಾಯಕ
ನಕ್ಷತ್ರದ ತಿಳಿವು ಪಾಪ ಪರಿಹಾರಕ
ಯೋಗದ ಅರಿವು ರೋಗ ನಿವಾರಕ
ಕರಣದ ಜ್ಞಾನ ಸಿದ್ಧಿಪ್ರದಾಯಕ

ಇದು ಪಂಚಾಂಗದ ಅರಿವಿನ ಫಲ. ಪಂಚಾಂಗದ ಪಠನದಿಂದ ಗಂಗಾಸ್ನಾನದ ಫಲ. ಅಗ್ನಿಷ್ಟೋಮದ ಫಲ. ವ್ರತ, ಉಪವಾಸ - ಗ್ರಹಣ - ಜಾತಕಗಳಿಗೂ ಜ್ಯೋತಿಃಶಾಸ್ತ್ರ ಅತ್ಯಗತ್ಯ. ಕಾಲದ ಅಜ್ಞಾನ-ವಿಪರೀತಜ್ಞಾನ ಗ್ರಹಣ - ಜಾತಕಗಳಿಗೆ ಹೇಗೆ ಮಾರಕವೋ ಹಾಗೆಯೇ ಏಕಾದಶೀ ಮುಂತಾದ ಶ್ರೇಷ್ಠ ವ್ರತಗಳಿಗೂ ವಿಪರೀತ ಫಲಪ್ರದ.

ಆದ್ದರಿಂದಲೇ ಪರಮಪೂಜ್ಯರಾದ, ಮಹಾತಪಸ್ವಿಗಳಾದ ನಮ್ಮ ಗುರುಗಳು ಇಳಿವಯಸ್ಸಿನಲ್ಲೂ ಜ್ಯೋತಿಷ್ಯ ಗ್ರಂಥಗಳ ಕೂಲಂಕುಷ ಅಧ್ಯಯನ ನಡೆಸಿದ್ದರು. ಈ ನಿಟ್ಟಿನಲ್ಲಿ ಅನೇಕ ಪೀಠಾಧಿಪತಿಗಳೊಂದಿಗೆ - ಜ್ಯೋತಿರ್ವಿದರೊಂದಿಗೆ ಚರ್ಚಿಸಿದ್ದರು. ಎಲ್ಲರ ದೃಷ್ಟಿ ಸೆಳೆದಿದ್ದರು. ಒಂದೇ ಬಗೆಯ ಪಂಚಾಂಗಕ್ಕಾಗಿ ಸೆಣೆಸಾಟ ನಡೆಸಿದ್ದರು. ಧರ್ಮಶಾಸ್ತ್ರಗಳ ಪೂರ್ವಾಚಾರ್ಯರ ವಾಕ್ಯಗಳಿಗೆ ಅಪಚಾರವಾಗದಂತೆ ವಿಚಾರ ಮಂಡಿಸಿದ್ದರು. ಪೀಠಾಧಿಪತಿಗಳ - ವಿದ್ವಾಂಸರ - ವಿಚಾರಪ್ರಿಯರ ಮನೋಭೂಮಿಕೆಯಲ್ಲಿ ಬೀಜ ಬಿತ್ತಿದ್ದರು. ಅದಕ್ಕೆ ನೀರು - ಗೊಬ್ಬರ ಹಾಕಬೇಕು. ಅದು ಮೊಳಕೆಯೊಡೆಯಬೇಕು. ಅದಕ್ಕಾಗಿ ಕಾಲವನ್ನು ಪ್ರತೀಕ್ಷಿಸೋಣ. ಜ್ಯೋತಿಃಶಾಸ್ತ್ರವನ್ನೇ ಅಲ್ಲಗಳೆಯುವ ಈ ಕಾಲದಲ್ಲಿ ಎಲ್ಲ ಪಕ್ಷ ಭೇದಗಳನ್ನು ಮರೆತು ಒಂದೇ ಗಣಿತದ ಪಂಚಾಂಗ ನಿರ್ಮಾಣವಾಗಬೇಕು. ಹಾಗಾಗಲೆಂದು ಹರಿ - ವಾಯು-ಗುರುಗಳಲ್ಲಿ ಪ್ರಾರ್ಥಿಸೋಣ.

ಈ ದಿಸೆಯಲ್ಲಿ ಪುತ್ತಿಗೆ ಶ್ರೀಪಾದರು ಕಳೆದ ಹತ್ತು ವರ್ಷಗಳಿಂದ ದೃಗ್ಗಣಿತ ಆಧಾರಿತ ಪಂಚಾಂಗವನ್ನು ನಡೆಸಿಕೊಂಡು ಬಂದಿದ್ದು ಸಾರ್ಥಕ ಕೆಲಸ ಮಾಡಿದ್ದಾರೆ. ಇದರ ಸದುಪಯೋಗವನ್ನು ಸಜ್ಜನರು ಪಡೆಯಲೆಂದು ಆಶಿಸುತ್ತೇವೆ.





**ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ**
ಶ್ರೀ ಪೇಜಾವರ ಅಧೋಕ್ಷಜ ಮಠ,
ಜಗದ್ಗುರು ಮಧ್ವಾಚಾರ್ಯ ಸಂಸ್ಥಾನಂ, ಉಡುಪಿ.

**'ನ ಹಿ ಪ್ರತ್ಯಕ್ಷಂ ಕೇನಾಪಿ ಬಾಧ್ಯಂ ದೃಷ್ಟಂ'**

ಶ್ರೀ ಮಧ್ವಾಚಾರ್ಯರ ಸಿದ್ಧಾಂತದಂತೆ ಪ್ರಮಾಣತಮವಾದ ಪರೀಕ್ಷಿತ ಪ್ರತ್ಯಕ್ಷದಿಂದ ಸಿದ್ಧವಾದ ದೃಗ್ಗಣಿತವನ್ನನುಸರಿಸಿ ಶ್ರೀ ಶ್ರೀಗಳು ಪಂಚಾಂಗವನ್ನು ಹೊರತರುತ್ತಿರುವುದು ಸಂತಸದ ವಿಚಾರ. ಆಸ್ತಿಕರೆಲ್ಲ ಇಂತಹ ಪಂಚಾಂಗವನ್ನು ಅನುಸರಿಸಿ ಕರ್ಮಾನುಷ್ಠಾನಗಳನ್ನು ಮಾಡಿ ಹರಿ ಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಬಯಸುತ್ತೇವೆ.



**ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ**
ಜಗದ್ಗುರು ಮಧ್ವಾಚಾರ್ಯ ಮಹಾಸಂಸ್ಥಾನ
ಶ್ರೀ ಸಂಪುಟ ನರಸಿಂಹ ಸ್ವಾಮಿ, ಶ್ರೀಸುಬ್ರಹ್ಮಣ್ಯ ಮಠ,
ಸುಬ್ರಹ್ಮಣ್ಯ - 574 238

ವೈಷ್ಣವ ಸಂಪ್ರದಾಯದಲ್ಲಿ ದಿನತ್ರಯಗಳಿಗೆ ಭಾರೀ ಮಹತ್ವದ ಸ್ಥಾನವಿದೆ. ಈ ದಿನತ್ರಯಗಳನ್ನು ವ್ರತವಾಗಿ ಆಚರಿಸಬೇಕು. ಇದಕ್ಕೆ ನಿರ್ಣಾಯಕವಾಗಿ ಪಂಚಾಂಗದ ಆವಶ್ಯಕತೆ ಇದೆ. ಪರೀಕ್ಷಿತ ಪ್ರತ್ಯಕ್ಷವನ್ನೂ ಶ್ರೀಮಧ್ವಾಚಾರ್ಯರು ಪ್ರಬಲವಾದ ಪ್ರಮಾಣವೆಂದು ಕರೆದಿದ್ದಾರೆ. ಅಂತಹ ಶ್ರೇಷ್ಠ ಪ್ರಮಾಣವಾದ ದೃಗ್ಗಣಿತವನ್ನು ಅನುಸರಿಸಿ ಪುತ್ತಿಗೆ ಶ್ರೀಪಾದರು ಪಂಚಾಂಗವನ್ನು ಬಹಳ ವರ್ಷಗಳಿಂದ ಸಿದ್ಧಪಡಿಸುತ್ತಿದ್ದಾರೆ. ಇದು ನಮಗೆಲ್ಲ ಆದರಣೀಯವಾಗಿದೆ.

॥ ಸರ್ವಶ್ರೀ ಹರಿವಾಯುಭ್ಯಾಂ ನಮಃ ॥

## ಗುರುಮೌಢ್ಯ

ಗುರುವು ನಿಜ ಶ್ರಾವಣ ಕೃಷ್ಣ ೧೨ ಶನಿವಾರ
(ತಾ. 11-9-2004)
ಪಶ್ಚಿಮ ದಿಕ್ಕಿನಲ್ಲಿ ಅಸ್ತನಾಗಿ
ಭಾದ್ರಪದ ಶುಕ್ಲ ೭ ಕುಜವಾರದಂದು
(ತಾ. 5-10-2004)
ಪೂರ್ವ ದಿಕ್ಕಿನಲ್ಲಿ ಉದಯಿಸುವನು.



## ಶುಕ್ರಮೌಢ್ಯ

ಶುಕ್ರನು ಜ್ಯೇಷ್ಠ ಕೃಷ್ಣ ೪ ಆದಿತ್ಯವಾರ (ತಾ. 6-6-2004)
ಪಶ್ಚಿಮ ದಿಕ್ಕಿನಲ್ಲಿ ಅಸ್ತನಾಗಿ ಜ್ಯೇಷ್ಠ ಕೃಷ್ಣ ೧೨ ಸೋಮವಾರದಂದು
(ತಾ. 14-6-2004) ಪೂರ್ವ ದಿಕ್ಕಿನಲ್ಲಿ ಉದಯಿಸುವನು.

ಪುನಃ ಮಾಘ ಕೃಷ್ಣ ೩ ರವಿವಾರ (ತಾ. 27-2-2005)
ಪೂರ್ವದಿಕ್ಕಿನಲ್ಲಿ ಅಸ್ತನಾಗಿ ಪಾರ್ಥಿವ ಸಂವತ್ಸರದ ಚೈತ್ರ ಕೃಷ್ಣ ೧
ಚಂದ್ರವಾರ (ತಾ. 25-4-2005) ದಂದು ಪಶ್ಚಿಮ ದಿಕ್ಕಿನಲ್ಲಿ
ಉದಯಿಸುವನು.

**॥ ಶ್ರೀ ಉಮಾಮಹೇಶ್ವರಾಭ್ಯಾಂ ನಮಃ ॥**

**॥ ಶ್ರೀ ಗಣೇಶಾಯ ನಮಃ ॥**

ಸಜಯತಿ ಸಿಂಧರವದನೋ ದೇವೋ ಯತ್ಪಾದಪಂಕಜಸ್ಮರಣಂ ॥ ವಾಸರಮಣಿರಿವತಮಸಾಂ ರಾಶೀನ್ನಾಶಯತಿ ವಿಘ್ನಾನಾಂ ॥೧॥ ಅಚಿಂತ್ಯಾಽವ್ಯಕ್ತರೂಪಾಯ ನಿರ್ಗುಣಾಯ ಗುಣಾತ್ಮನೆ ॥ ಸಮಸ್ತ ಜಗದಾಧಾರಮೂರ್ತಯೇ ಬ್ರಹ್ಮಣೇ ನಮಃ ॥೨॥ ಪ್ರಾಪ್ತೇ ನೂತನ ವತ್ಸರೇ ಪ್ರತಿಗೃಹಂ ಕುರ್ಯಾಧ್ವಜಾರೋಪಣಂ ಸ್ನಾನಂ ಮಂಗಲಮಾಚರೇದ್ವಿಜವರೈಃ ಸಾರ್ಧಂ ಸುಪೂಜೋತ್ಸವಂ ॥ ದೇವಾನಾಂ ಗುರುಯೋಷಿತಾಂಚ ಶಿಶವೋಲಂಕಾರ ವಸ್ತ್ರಾದಿಭಿಃ ಸಂಪೂಜ್ಯೋಗಣಕಃ ಫಲಂಚ ಶೃಣುಯಾತ್ತಸ್ಮಾಚ್ಚ ಲಾಭಪ್ರದಂ ॥ ಪಾರಿ ಭದ್ರಸ್ಯ ಪತ್ರಾಣಿ ಕೋಮಲಾನಿ ವಿಶೇಷತಃ ॥ ಸುಪುಷ್ಪಾಣಿ ಸಮಾನೀಯ ಚೂರ್ಣಂ ಕೃತ್ವಾ ವಿಧಾನತಃ ॥೪॥

**॥ ಶ್ರೀ ಶಾರದಾಂಬಾಯೈ ನಮಃ ॥**

ಮರೀಚಿಹಿಂಗುಲವಣಜೀರಕೇಣ ಚ ಸಂಯುತಂ ॥ ಅಜವೋದಾ ಯುತಂಕೃತ್ವಾ ಭಕ್ಷಯೇದ್ರೋಗ ಶಾಂತಯೇ ॥ ಪಂಚಾಂಗಸ್ಥಂ ಗಣೇಶಂದ್ವಿಜಗಣಕಯುತಂ ಪೂಜಯಿತ್ವಾರ್ಥಿವೃಂದಂ ಸಂತೋಷ್ಯಾನೇಕದಾನೈಃ ಪರಮ ಸುಖಯುತೋ ಭೋಜಯಿತ್ವಾನ್ನಮಿಷ್ಟಂ ॥ ಶೃಣ್ವನ್ಗೀತಾನಿ ವಾದ್ಯಾನಿಚ ವಿವಿಧ ಕಥಾಸ್ತದ್ದಿನಂ ಸಂಕ್ರಮೇತ ಕ್ರೀಡನ್ ಸ್ತ್ರೀಭಿಶ್ಚಸಾರ್ಧಂ ನಿಶಿರಹಸಿ ನರೊ ಯಾವದಬ್ದಂ ಸುಖೀಸ್ಯಾತ್ ॥೬॥ ನತ್ವಾ ಗಣಪತಿಂ ಖೇಟಾನ್ ಬ್ರಹ್ಮವಿಷ್ಣುಮಹೇಶ್ವರಾನ್ ॥ ಸಂವತ್ಸರ ಫಲಂ ವಕ್ಷ್ಯೇ ಸರ್ವಕಾಮಾರ್ಥ ಸಿದ್ಧಯೇ॥೭॥

**ತಾರಣ ಸಂವತ್ಸರೇ ರಾಜಾದ್ಯಧಿಪತಯಃ ॥ ರಾಜಾರ್ಕಃ ಕ್ಷಿತಿಸೂನು ರತ್ರ ಸಚಿವಃ ಸೈನ್ಯಾರ್ಘಮೇಘಾಧಿಪಶ್ಚಂದ್ರೋ ನೀರಸ ಚೈವ ರಸಪೋ ಮಂದೋಕವಿಸ್ಸಸ್ಯಪಃ ॥**
**ಧಾನ್ಯೇಶಶ್ಶಶಿನಂದನೋಂಗ ನವಲೋಸಂದೇಂದುಶಾಕೇ ತಥಾ ಸ್ಯಾದಸ್ಮಿನ್ನ ವನಾಯಕಾಶ್ಚ ಗದಿತಾ ಚಾಖ್ಯಾಯಿಕೇ ತಾರಣೇ ॥**



# ಅಥ ಸಂವತ್ಸರಾದಿ ಫಲಂ

**ಆದೌ ಸಂವತ್ಸರಫಲಂ ॥** ನಕ್ಷತ್ರ ವಿದ್ಯಾ ನಿರತಾ ದ್ವಿಜೇಂದ್ರಾಃ ಕ್ಷಿತೀಶ್ಚರಾಶ್ಚಾರ್ಥಪರಾ ರುಜಾರ್ತಾಃ ॥ ಜನಾ ಧನಾಢ್ಯಾಃ ಸುಲಭಂ ಜಲಂ ಚ ಸುಭಿಕ್ಷಮಸ್ಮಿನ್ನಪಿ ತಾರಣಾಽಬ್ದೇ ॥೧॥

**ಅಥರಾಜ ಫಲಂ ॥** ಸೂರ್ಯಸ್ಯ ರಾಜ್ಯೇ ಜಲಹೀನತಾಸ್ಯಾತ್ಪಯೋಧರಾಣಾಂ ಮಹತೀಚಪೀಡಾ॥ ಜನಸ್ಯ ಚೌರಾ ಫಲಪುಷ್ಪಮಲ್ಪಂ ಭವೇತ್ತರೂಣಾಂ ಕಲಹೋ ನೃಪಾಣಾಂ ॥೨॥

**ಅಥ ಮಂತ್ರಿಫಲಂ ॥** ಭೌಮೇ ಪ್ರಧಾನೇ ಕ್ವಚಿದೇವವೃಷ್ಟಿರ್ಧಾನ್ಯಂ ಮಹರ್ಘಂ ಜ್ವಲನ ಪ್ರಕೋಪಃ ॥ ಸ್ಯಾತ್ತಸ್ಕರಾಣಾಮನಯೋಽತಿಘೋರಃ ಪ್ರಜೇಶ್ವರಾ ಯುದ್ಧ ವಿಧಾಯಿನಃ ಸ್ಯುಃ ॥೩॥

**ಅಥ ಸೈನ್ಯೇಶಫಲಂ ॥** ಅತ್ಯಂತವೃಷ್ಟಿರ್ಬಹುಸಸ್ಯಸಂಪತ್ಸೌಖ್ಯಂ ಜನೋ ವಿಂದತಿ ರೋಗಹೀನಃ॥ ಗಾವೊ ಬಹುಕ್ಷೀರಯುತಾ ಮಹಿಷ್ಯಃ ಸೇನಾಧಿನಾಥೇ ರಜನೀಕರೇಸ್ಯುಃ॥೪॥

**ಅಥ ಸಸ್ಯೇಶ ಫಲಂ॥** ರೋಗೈರ್ಮುಕ್ತಾ ನಿರ್ಭಯಾಃ ಸರ್ವಲೋಕಾಃ ಪಚ್ಯಂತೇವಾ ಸರ್ವಧಾನ್ಯಾನಿ ನೂನಂ ॥ ವೃಕ್ಷಾಃ ಶಶ್ವತ್ಪುಷ್ಪಿತಾ ಭೂರಿವೃಷ್ಟಿಃ ಸಸ್ಯಾಧೀಶೋ ಯತ್ರ ದೈತ್ಯೇಜ್ಯಮಂತ್ರೀ ॥೫॥

**ಅಥ ಧಾನ್ಯೇಶ ಫಲಂ ॥** ಯವವ್ರೀಹಿಗೋಧೂಮಮುದ್ಗೇಕ್ಷುಕಾಣಾಂ ಪ್ರವೃದ್ಧಿಃ ಸುಖಂ ಸರ್ವವಿದ್ವಜ್ಜನಾನಾಂ ॥ ಪಯೊ ಗೋಮಹಿಷ್ಯಾದಿಕಾನಾಂ ಸಸಾರಂ ಬುಧೇ ಪ್ರಾಂತ್ಯ ಧಾನ್ಯಾಧಿಪೇ ಭೂರಿ ನೀರಂ ॥೬॥

**ಅಥ ಅರ್ಘೇಶ ಫಲಂ॥** ಸುವೃಷ್ಟಿಃ ಸರ್ವಸಸ್ಯಾನಾಮಭಿವೃದ್ಧಿಸ್ತು ಜಾಯತೇ ॥ ಮಹತೀ ಚಾರ್ಘ ವೃದ್ಧಿಃ ಸ್ಯಾಚ್ಚಂದ್ರೇತ್ವರ್ಘಾಧಿಪೇ ಸತಿ ॥೭॥

**ಅಥ ಮೇಘಾಧಿಪ ಫಲಂ ॥** ಗವಾಂ ಯಾದಸಾಂ ಸಸ್ಯಪುಷ್ಪಾದಿಕಾನಾಂ ಪ್ರವೃದ್ಧಿಃ ಸುಖಂ ಭೂರಿ ವಿದ್ವಜ್ಜನಾನಾಂ ॥ ನದೀಕೂಪವಾಪೀ ತಡಾಗೇಷುಪಾಥಃ ಪ್ರಭೂತಂ ಯದಾ ಚಂದ್ರಮಾ ಮೇಘನಾಥಃ ॥೮॥

**ಅಥ ರಸೇಶ ಫಲಂ ॥** ನೀಲಿಗಜೋರ್ಣಾಪಟಲೋಹ ಜಾತಂ ಸಮರ್ಘತಾಮೇತಿ ರಸಾಮಹರ್ಘಾಃ ॥ ಬಲಾರಿರಲ್ಪಂ ಸಲಿಲಂ ದದಾತಿ ರಸಾಧಿನಾಥೋಽರ್ಕಸುತೋ ಯದಾಸ್ಯಾತ್ ॥೯॥

**ಅಥ ನೀರಸೇಶಫಲಂ ॥** ಪೂಗೀಫಲಾನ್ಯಖಿಲರತ್ನ ಸುವರ್ಣಧಾನ್ಯಂ ಕಾರ್ಪಾಸ ಚರ್ಮಕುಸುಮಾನಿ ಚ ಚಂದನಂಚ ॥ ವೃದ್ಧಿಂ ಪ್ರಯಾಂತಿ ವನದೇವಗಣಃ ಸುಖೀ ಸ್ಯಾದ್ಭೂಮೌಚ ನೀರಸಪತೌ ಸುರರಾಜಪೂಜ್ಯೇ ॥೧೦॥

**ಅಥಾ ಆದ್ರಾಪ್ರವೇಶ ಕಾಲಃ ॥** ಆಷಾಢಸ್ಯ ಸಿತೇಪಕ್ಷೇ ಚತುರ್ಥ್ಯಾಂ ಇಂದುವಾಸರೆ॥ ರಾತ್ರೌ ಷಷ್ಟಘಟೀ ಕಾಲೆ ರೌದ್ರಭಂ ಯಾತಿ ಭಾಸ್ಕರಃ ॥ ತತ್ಫಲಂ ॥ ಕ್ಷೇಮಂ ಸುಭಿಕ್ಷಂ ನಿಶಿ ಸಸ್ಯವೃದ್ಧಿಂ ಸುವೃಷ್ಟಿಮತ್ಯಂತ ಜನಾನುರಾಗಮ್ ॥೧೨॥ ತಮೇನಾಮಕೊಮೇಘಃ ॥ ತ್ರ್ಯಾಢಕಂ ಜಲಂ ॥ ಮಹಾವರ್ಷಂ ಮಹಾಮೇಘರಾಜಿತಂ ಮೇಘ ಮಂಡಲಂ ॥ ಏಕಾರ್ಣವಂ ತವೋ ಮೇಘಃ ಸಾಗರಾಂತಂ ಪ್ರವರ್ಷತಿ ॥೧೩॥ ಷಷ್ಠಿಯೋಜನ ವಿಸ್ತೀರ್ಣಂ ಶತಯೋಜನಮುನ್ನತಂ ॥ ಆಢಕಸ್ಯ ಪ್ರಮಾಣಂತು ದೇವಮಾನೇನ ಗಣ್ಯತೇ ॥೧೪॥ ದಶಭಾಗಾಃ ಸಮುದ್ರೇಷು ಷಡ್ಭಾಗಾಃ ಪರ್ವತೇಷು ಚ ॥ ಚತ್ವಾರೊ ಭುವಿಪರ್ಜನ್ಯೋಹ್ಯೇವಂ ವರ್ಷತಿ ಚತ್ರಿಧಾ ॥೧೫॥

**ಅಥ ಮೇಷ ಸಂಕ್ರಾಂತಿಃ ॥** ಚೈತ್ರೇ ಮಾಸ್ಯಸಿತೇ ಪಕ್ಷೇ ನವಮ್ಯಾಂ ಕುಜವಾಸರೇ॥ ದಿವಾಧರ ಘಟೀಕಾಲೆ ಮೇಷಂ ಸಂಕ್ರಮತೇ ರವಿಃ ॥ ತತ್ಫಲಂ ॥ ದಿವಾಚೇನ್ಮೇಷ ಸಂಕ್ರಾಂತಿರನರ್ಥ ಕಲಹ ಪ್ರದಾ ॥೧೬॥

**ಅಥ ಮಕರ ಸಂಕ್ರಾಂತಿಃ ॥** ಪೌಷಮಾಸಿ ಸಿತೇ ಪಕ್ಷೇ ಚತುರ್ಥ್ಯಾಂ ಗುರುವಾಸರೇ॥ ರಾತ್ರೌಹರಘಟೀಕಾಲೆ ಮಕರಂ ಯಾತಿ ಭಾಸ್ಕರಃ ॥೧೭॥ ತತ್ಫಲಂ ॥ ನಂದಾಭಿದಾ ಚ

ಸಂಕ್ರಾಂತಿರ್ವೇದ ಪಾರಂಗತಾನ್ದ್ವಿಜಾನ್ ॥ ಮೀಮಾಂಸಾತರ್ಕ ಭಾಷ್ಯಜ್ಞಾನ್ಯುಖಯೇಚ್ಛಂ ವಿಶೇಷತಃ ॥೧೮ ॥ ಅಸ್ಯವಾಹನಾದಿಕ್ರಮಃ ॥ ಭವೇ ಸಿಂಹಗಾ ಶ್ವೇತವಸ್ತ್ರಾ ಚ ಬಾಲಾಭುಶುಂಡೀಧರಾ ಚಾನ್ನ ಭುಕ ಚಂಪಕಾಢ್ಯಾ॥ ಸಕಸ್ತೂರಿ ಕಾಲೇಪನಾ ದೇವಜಾತಿಃ ಪ್ರವಾಲೋತ್ಥ ಭೂಷಾರ್ಕಸಂಕ್ರಾಂತಿರುಕ್ತಾ ॥೧೯ ॥ ನಂದಾ ನಾಮ್ನೀತು ಸಂಕ್ರಾಂತಿಃ ಪೂರ್ವದಿಶೆ ಮುಖೀತಥಾ ॥ ಆಗ್ನೇಯಾಂ ದಿಶಮಾಲೋಕ್ಯ ಉತ್ತರಾ ಶಾಂಹಿ ಗಚ್ಛತಿ ॥ ೨೦ ॥ ಷಷ್ಠಿಯೋಜನ ವಿಸ್ತೀರ್ಣಾ ಸಂಕ್ರಾಂತಿಃ ಪುರುಷಾಕೃತಿಃ॥ ಏಕವಕ್ತ್ರಾ ನವಭುಜಾ ಲಂಭೋಷ್ಠೀ ದೀರ್ಘನಾಸಿಕಾ ॥ ೨೧ ॥ ಪೃಷ್ಠಾಲೋಕಾಭ್ರಮತ್ಯತ್ರ ಗೃಹೀತ್ವಾ ಖರ್ಪರಂ ಕರೇ ॥ ಏವಂ ಸಂ ಕ್ರಮಣೇತ್ವಸ್ಯಾಃ ಫಲಂ ಪ್ರೋಕ್ತಂ ಮನೀಷಿಭಿಃ ॥ ೨೨ ॥ ಯಾನಿ ಯಾನಿ ಚ ವಸ್ತೂನಿ ಸಂಕ್ರಾಂತಿಃ ಸ್ವೀಕರೋತಿ ಚ ॥ ತತ್ತನ್ಮಹರ್ಘಂ ನಾಶಸ್ಸ್ಯಾತ್ ಕ್ರಯವಿಕ್ರಯ ಭೀತಿದಾ ॥೨೩ ॥

**ಅಥ ಗುರುಚಾರ ಫಲಂ ॥** ಸಿಂಹರಾಶಿ ಸ್ಥಿತೇ ಜೀವೇ ನಿಸ್ವಾ ಭೂಸುರ ಸಜ್ಜನಾಃ॥ ಅತಿವೃಷ್ಟಿರ್ವ್ಯಾಧಿ ಭಯಂ ನೃಪಾಯುದ್ಧೇ ಲಯಂಗತಾಃ ॥೨೪ ॥ ಜೀವೇ ಕನ್ಯಾಗತೇ ಪುಷ್ಟಾವೃಷ್ಟಿಃ ಸ್ವಸ್ಥಾಃ ಕ್ಷಿತೀಶ್ವರಾಃ ॥ ಮಖೋತ್ಸುಕಾಃ ಕ್ಷಿತಿಸುರಾಃ ಸ್ವಸ್ಥಾಃ ಸ್ಯುರ್ನಿಖಿಲಾ ಜನಾಃ ॥೨೫ ॥

**ಅಥ ಶನಿಚಾರಫಲಂ ॥** ಯುಗ್ಮಸ್ಥಿತೇರ್ಕ ತನಯೇ ಪ್ರಮುದೊ ನೃಪಾಣಾಂ ಜಾಯತೇ ಸಸ್ಯಬಹುಲಾ ವಸುಧಾ ಸುವೃಷ್ಟಿಃ ॥ ನಷ್ಟಾಶ್ಚ ತೌಲಿಕಯುತಾ ರಜಕಾಶ್ಚ ಚೋರಾಃ ಸ್ಯುಃ ಪಾರದಾಶ್ಚ ವರದಾಶ್ಚ ಸುರಾಷ್ಟ್ರದೇಶಾಃ ॥ ೨೬ ॥ ಕುಲೀರಗೇ ಭಾನುಸುತೇ ಧರಿತ್ರೀ ಸುವೃಷ್ಟಿ ಸಸ್ಯಾರ್ಘಫಲಾನ್ವಿತಾ ಸ್ಯಾತ್ ॥ ವೈದ್ಯೋತ್ತಮಾಃ ಪಂಚನದಾಂತಿಕಾಶ್ಚ ಸರ್ಪಾದಯೋ ಜಾತಿ ವಿನಾಶ ಮಾಯುಃ ॥೨೭ ॥

**ಅಥ ವಾರ್ಷೀಯ ಶ್ರವಣ ಫಲಂ ॥** ಯೇ ಚೈತ್ರ ಶುಕ್ಲ ಪ್ರತಿಪತ್ತಿಥೌ ಫಲಂ ಶೃಣ್ವಂತಿ ಭಕ್ತ್ಯಾ ಪ್ರತಿವಾರ್ಷಿಕಂ ನರಾಃ ॥ ತೇ ದುಃಖ ದಾರಿದ್ರ್ಯಕುರೋಗವರ್ಜಿತಾ ನಂದಂತಿ ಲೋಕಾ ಧನಧಾನ್ಯ ಸಂಕುಲಾಃ ॥೨೮॥

**ನಿತ್ಯ ಪಂಚಾಂಗ ಶ್ರವಣ ಫಲಂ ॥** ತಿಥೇಶ್ಚ ಶ್ರಿಯಮಾಪ್ನೋತಿ ವಾರಾದಾಯುಷ್ಯ ವರ್ಧನಂ ॥ ನಕ್ಷತ್ರಾದ್ಧರತೇ ಪಾಪಂ ಯೋಗಾದ್ರೋಗ ನಿವಾರಣಂ ॥ ಕರಣಾಚ್ಚಿಂತಿಕಂಕಾರ್ಯಂ ಪಂಚಾಂಗಂ ಫಲಮುತ್ತಮಂ॥ ಏತೇಷಾಂ ಶ್ರವಣಾನ್ನಿತ್ಯಂ ಗಂಗಾಸ್ನಾನಂ ಫಲಂ ಲಭೇತ್॥೨೯॥

ಸ್ವಸ್ತಿಃ ಪ್ರಜಾಭ್ಯಃ ಪರಿಪಾಲಯಂತಾಂ ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ॥ ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ ಲೋಕಾಸ್ಸಮಸ್ತಾಸ್ಸುಖಿನೋ ಭವಂತು ॥೩೦॥ **ಸಮಸ್ತ ಸನ್ಮಂಗಲಾನಿ ಭವಂತು॥**

## ॥ ವಚನರೂಪ ಸಂವತ್ಸರ ರಾಜಾದಿಫಲಂ ॥

**ಸರಸ್ವತೀಂ ಚ ದೈವಜ್ಞಂ ಪೂಜಯಿತ್ವಾ ವಿನಾಯಕಂ ॥**

**ದೈವಜ್ಞಮುಖತೋ ಭಕ್ತ್ಯಾ ಶೃಣು ವರ್ಷಫಲಂ ಮುದಾ॥**

ಚೈತ್ರ ಶುಕ್ಲ ಪ್ರತಿಪದೆಯ ದಿನ ಹೊಸಸಂವತ್ಸರವು ಪ್ರಾರಂಭವಾಗುವುದರಿಂದ ಅಂದು ಪ್ರತಿಮನೆಯಲ್ಲಿಯೂ ಗುಡಿತೋರಣಾದಿಗಳನ್ನೇರಿಸಿ ಬ್ರಾಹ್ಮಣರೊಡನೆ ಮಂಗಲಸ್ನಾನವನ್ನು ಮಾಡಿ ದೇವರಿಗೆ ಪೂಜೋತ್ಸವಗಳನ್ನಾಚರಿಸಬೇಕು. ಮಕ್ಕಳಿಗೆ ವಸ್ತ್ರಾಲಂಕಾರಗಳನ್ನು ತೊಡಿಸಬೇಕು; ಜೋಯಿಸರನ್ನುಪಚರಿಸಿ ಅವರಿಂದ ಲಾಭಪ್ರದವಾದ ಸಂವತ್ಸರ ರಾಜಾಧಿಫಲಗಳನ್ನು ಕೇಳಬೇಕು ಎಂಬಿತ್ಯಾದಿ ಧರ್ಮನಿಬಂಧ ವಚನಾಭಿಪ್ರಾಯವಿರುವುದರಿಂದ ಈ ತಾರಣ ನಾಮ ಸಂವತ್ಸರಾರಂಭದಲ್ಲಿ ಕೇಳತಕ್ಕ ಸಂವತ್ಸರ ರಾಜಾಧಿಫಲವು ಈ ಮುಂದೆ ವಚನರೂಪವಾಗಿ ಬರೆಯಲ್ಪಡುವುದು.

ಸ್ವಸ್ತಿ ಶ್ರೀಮನ್ನಾರಾಯಣನ ನಾಭಿಕಮಲ ಸಂಭವನಾದ ವಿರಿಂಚಿ ಬ್ರಹ್ಮನ ದ್ವಿತೀಯಪರಾರ್ಧವಾದ ಶ್ವೇತವರಾಹಕಲ್ಪವೆಂಬ ಹಗಲಿನ ಏಳನೆಯ ವೈವಸ್ವತ ಮನ್ವಂತರದ ಇಪ್ಪತ್ತೆಂಟನೆ ಮಹಾಯುಗದ ನಾಲ್ಕನೆ ಪಾದವಾದ ಕಲಿಯುಗದಲ್ಲಿ ಈ ಸಂವತ್ಸರಾರಂಭಕ್ಕೆ ೫೧೦೫ ವರ್ಷಗಳಾದವು. ಈ ಪೈಕಿ ೩೧೭೯ ವರ್ಷಗಳಲ್ಲಿ ಯುಧಿಷ್ಠಿರ



ವಿಕ್ರಮಗಳೆಂಬೆರಡು ಶಕಗಳು ಕಳೆದು ಮೂರನೆ ಶಾಲಿವಾಹನ ಶಕದಲ್ಲಿ ಈ ಸಂವತ್ಸರಾರಂಭಕ್ಕೆ ೧೯೨೬ ವರ್ಷಗಳಾದವು. ಗತಶಕ ೧೯೨೬ಕ್ಕೆ ಸರಿಯಾದ ಈ ತಾರಣ ಸಂವತ್ಸರದಲ್ಲಿ ರವಿಯು ರಾಜನೂ ಕುಜನು ಮಂತ್ರಿಯೂ, ಚಂದ್ರನು ಸೈನ್ಯಾಧಿಪತಿಯೂ, ಶುಕ್ರನು ಸಸ್ಯಾಧಿಪತಿಯೂ, ಬುಧನು ಧಾನ್ಯಾಧಿಪತಿಯೂ, ಚಂದ್ರನು ಮೇಘಾಧಿಪತಿ ಮತ್ತು ಅಘಾಧಿಪತಿಯೂ, ಶನಿಯು ರಸಾಧಿಪತಿಯೂ ಗುರುವು ನೀರಸಾಧಿಪತಿಯೂ ಆಗುವರು.

ಈ ತಾರಣ ಸಂವತ್ಸರದಲ್ಲಿ ಬ್ರಾಹ್ಮಣರು ಜ್ಯೋತಿಷ ವಿದ್ಯಾನಿರತರಾಗಿ, ರಾಜರು ಧನಪ್ರಿಯರಾಗಿ, ಜನರು ರೋಗ ರಹಿತರಾಗಿ - ಧನವಂತರಾಗಿ, ಮಳೆ ಬೆಳೆಗಳು ಉತ್ತಮವಾಗಿ ಲೋಕವು ಸುಭಿಕ್ಷಗೊಳ್ಳುವುದು. ಸೂರ್ಯನು ಅರಸನಾದ್ದರಿಂದ ರಾಜರೊಳಗೆ ಕಲಹವೂ, ಜನರಿಗೆ ಅತ್ಯಂತ ಕಳ್ಳರ ಪೀಡೆಯೂ ಉಂಟಾಗುವುದಲ್ಲದೆ ಮಳೆಯು ಕಮ್ಮಿಯಾಗಿ, ವೃಕ್ಷಗಳಲ್ಲಿ ಫಲ ಪುಷ್ಪಗಳು ಕಮ್ಮಿಯಾಗುವವು. ಕುಜನು ಮಂತ್ರಿಯಾದುದರಿಂದ ಕೆಲವೆಡೆ ಆ ಮಾತ್ರ ಮಳೆಯೂ, ಧಾನ್ಯಗಳಿಗೆ ಹೆಚ್ಚು ಬೆಲೆಯೂ, ಅಗ್ನಿಭಯ, ಕಳ್ಳರ ಬಾಧೆಯೂ, ರಾಜರೊಳಗೆ ಭಯಂಕರವಾದ ಯುದ್ಧವೂ ಆಗುವುದು. ಚಂದ್ರನು ಸೈನ್ಯಾಧಿಪತಿಯಾದ್ದರಿಂದ ಅತ್ಯಂತ ಮಳೆಯಾಗಿ, ಸಸ್ಯಗಳು ಸಮೃದ್ಧಿಯಾಗಿ; ದನಗಳು ಮತ್ತು ಎಮ್ಮೆಗಳು ಹೆಚ್ಚು ಹಾಲುಳ್ಳವುಗಳಾಗಿ; ಜನರು ಆರೋಗ್ಯವಂತರಾಗಿ ಸುಖಹೊಂದುವರು. ಶುಕ್ರನು ಸಸ್ಯಾಧಿಪತಿಯಾದ್ದರಿಂದ ಹೆಚ್ಚು ಮಳೆ ಬಂದು ವೃಕ್ಷಗಳು ಸದಾ ಹೂಗಳಿಂದ ಕೂಡಿದ್ದಾಗಿ; ಎಲ್ಲಾ ತರದ ಧಾನ್ಯಗಳು ಸಮೃದ್ಧಿಯಾಗಿ; ಜನರು ಆರೋಗ್ಯವಂತರಾಗಿ ಭಯವಿಲ್ಲದವರಾಗುವರು. ಧಾನ್ಯಾಧಿಪತಿಯು ಬುಧನಾದ್ದರಿಂದ ಯವೆ, ಭತ್ತ, ಗೋಧಿ, ಹೆಸರು, ಕಬ್ಬು ಇವುಗಳ ಅಭಿವೃದ್ಧಿಯೂ ಎಲ್ಲ ವಿದ್ವಜ್ಜನರಿಗೆ ಸುಖವೂ, ದನ, ಎಮ್ಮೆ ಮೊದಲಾದುವುಗಳಿಗೆ ಸಾರವತ್ತಾದ ಹಾಲೂ; ಮಳೆಯು ಸರಿಯಾಗಿ ಬಂದು ಭೂಮಿಯಲ್ಲಿ ನೀರು ಹೆಚ್ಚಾಗುವುದು.

ಚಂದ್ರನು ಅರ್ಘಾಧಿಪತಿ ಯಾದ್ದರಿಂದ ಒಳ್ಳೆ ಮಳೆಯಾಗಿ ಎಲ್ಲಾ ತರದ ಸಸ್ಯಗಳೂ ಅಭಿವೃದ್ಧಿ ಹೊಂದುವುದಲ್ಲದೆ ಎಲ್ಲಾ ವಸ್ತುಗಳಿಗೆ ಅತ್ಯಂತ ಬೆಲೆಯಾಗುವುದು. ಮೇಘಾಧಿಪತಿಯೂ ಚಂದ್ರನಾದ್ದರಿಂದ ನದಿ, ಕೆರೆ, ಬಾವಿ, ಸರೋವರ ಮುಂತಾದುವುಗಳಲ್ಲಿ ಹೆಚ್ಚು ನೀರು ತುಂಬುವುದಲ್ಲದೆ ಗೋವುಗಳ ಮತ್ತು ಸಸ್ಯಪುಷ್ಪಾದಿಗಳ ಅಭಿವೃದ್ಧಿಯೂ; ವಿದ್ವಾಂಸರು ಹೆಚ್ಚು ಸುಖ ಹೊಂದುವರು. ಶನಿಯು ರಸಾಧಿಪತಿಯಾದ್ದರಿಂದ ನೀಲಿ, ಆನೆ, ಉಣ್ಣೆ, ವಸ್ತ್ರ, ಲೋಹವಸ್ತು ಇತ್ಯಾದಿಗಳಿಗೆ ಸರಿಯಾದ ಬೆಲೆಯಾಗುವುದು; ಮಳೆಯು ಕಮ್ಮಿಯಾಗಿ ರಸಪದಾರ್ಥಗಳಿಗೆ ಅತ್ಯಂತ ಬೆಲೆಯಾಗುವುದು. ಗುರುವು ನೀರಸಾಧಿಪತಿಯಾದ್ದರಿಂದ ಅಡಿಕೆ, ಎಲ್ಲ ತರದ ರತ್ನಗಳೂ ಸುವರ್ಣ, ಧಾನ್ಯ, ಹತ್ತಿ, ಚರ್ಮ, ಪುಷ್ಪಗಳು, ಚಂದನ ಇವುಗಳು ವೃದ್ಧಿಯಾಗಿ ಭೂಮಿಯಲ್ಲಿ ವನದೇವತೆಗಳ ಸಮೂಹವು ಸುಖಹೊಂದುವವು.

ಆಷಾಢಮಾಸ ಶುಕ್ಲಪಕ್ಷ ಚತುರ್ಥಿ ಸೋಮವಾರದಂದು ರಾತ್ರಿ ಆರನೇ ಗಳಿಗೆಯಲ್ಲಿ ಸೂರ್ಯನು ಆರ್ದ್ರಾ ನಕ್ಷತ್ರವನ್ನು ಪ್ರವೇಶಿಸುವನು. ಆರ್ದ್ರಾ ಪ್ರವೇಶವು ರಾತ್ರಿಯಾದುದರಿಂದ ಮಳೆಯು ಅತ್ಯಂತ ಸುರಿಯುವುದು; ದನಗಳು ಸುಖಹೊಂದುವವು; ಎಲ್ಲ ತರದ ಧಾನ್ಯಗಳೂ ಉತ್ತಮವಾಗಿ ಬೆಳೆಯುವವು; ಲೋಕದಲ್ಲಿ ರಾಜರು ಯುದ್ಧ ಮಾಡದೆ ಸುಖ ಹೊಂದುವರು; ಲೋಕಕ್ಕೆ ಮಂಗಳವುಂಟಾಗುವುದು. ಈ ವರ್ಷ ತಮಸ್ ಎಂಬ ಮೋಡವು ಮೂರು ಕೊಳಗ ನೀರನ್ನು ಸುರಿಸುವುದು. ಭಾರೀ ಘರ್ಜನೆಯಿಂದ ಕೂಡಿದ ಈ ಮೇಘ ಮಂಡಲವು ಹಿಮಾಲಯದ ಕನ್ಯಾಕುಮಾರಿ ತನಕವೂ ಅತ್ಯಂತ ಮಳೆಯನ್ನು ಸುರಿಸುವುದು. ಕೊಳಗವೆಂದರೆ ಹವಾಮಾನ ಪ್ರಕಾರ ನೂರು ಯೋಜನ ಎತ್ತರವೂ, ಅರುವತ್ತು ಯೋಜನ ವಿಸ್ತಾರವೂ ಇರುವ ಪಾತ್ರವು. ಹತ್ತು ಪಾಲು ಸಮುದ್ರದ ಮೇಲೂ, ಆರು ಪಾಲು ಪರ್ವತಗಳ ಮೇಲೂ ನಾಲ್ಕು ಪಾಲು ಭೂಮಿಯ ಮೇಲೂ ಮಳೆ ಬೀಳುವುದು.

ಚೈತ್ರ ಮಾಸ ಕೃಷ್ಣ ಪಕ್ಷ ನವಮಿ ಕುಜವಾರ ಹಗಲು ಇಪ್ಪತ್ತೊಂಬತ್ತನೆಗಳಿಗೆಯಲ್ಲಿ ಸೂರ್ಯನು ಮೇಷರಾಶಿಯನ್ನು ಪ್ರವೇಶಿಸುವನು. ಮೇಷಸಂಕ್ರಮವು ಹಗಲಾದ್ದರಿಂದ ಭಾರೀ ಅನಾಹುತಗಳು ಅಲ್ಲದೆ ಲೋಕದಲ್ಲಿ ಕಲಹಗಳು ಹೆಚ್ಚಾಗುವವು.

ಪೌಷ ಮಾಸ ಶುಕ್ಲ ಪಕ್ಷ, ಚತುರ್ಥೀ ಗುರುವಾರದಂದ ರಾತ್ರಿ ಇಪ್ಪತ್ತೆಂಟನೆ

ಗಳಿಗೆಯಲ್ಲಿ ಸೂರ್ಯನು ಮಕರರಾಶಿಯನ್ನು ಪ್ರವೇಶಿಸುವನು. ನಂದಾ ಎಂಬ ಹೆಸರಿನ ಸಂಕ್ರಾಂತಿಯಿಂದ ಬ್ರಾಹ್ಮಣ ಸಮೂಹವು ವೇದ ಪಾರಂಗತರಾಗಿರುವರು. ಅಲ್ಲದೆ ವಿಶೇಷವಾಗಿ ಮೀಮಾಂಸಾ, ತರ್ಕ ಮುಂತಾದವುಗಳನ್ನು ತಿಳಿದ ಪಂಡಿತರು (ವಿದ್ವಾಂಸರು) ಅತ್ಯಂತ ಸುಖ ಹೊಂದುವರು. ನಂದಾ ಎಂಬ ದೇವಜಾತಿಯ ಬಾಲ್ಯ ವಯಸ್ಸಿನ ಈ ಸಂಕ್ರಾಂತಿಯು ಬಿಳಿವಸ್ತ್ರವನ್ನುಟ್ಟು ಕಸ್ತೂರಿಯನ್ನು ಲೇಪಿಸಿ ಬಣ್ಣ ಬಣ್ಣದ ರವಿಕೆ ತೊಟ್ಟು ಹಿತ್ತಾಳೆಯ ಆಭರಣ ಧರಿಸಿ ಚಂಪಕಪುಷ್ಪ ಮುಡಿದು ಬಂಗಾರದ ಪಾತ್ರೆಯಲ್ಲಿ ಅನ್ನವನ್ನುಣ್ಣುತ್ತಾ ಭುಶುಂಡೀ ಎಂಬ ಆಯುಧವನ್ನು ಧರಿಸಿ ಸಿಂಹದ ಮೇಲೆ ಕುಳಿತುಕೊಂಡು ಪೂರ್ವಾಭಿಮುಖವಾಗಿ ಆಗ್ನೇಯ ದಿಕ್ಕನ್ನು ನೋಡುತ್ತಾ ಉತ್ತರದಿಕ್ಕಿಗೆ ಹೋಗುವುದು. ಹಿಂದೆ ನೋಡುತ್ತಿರುವ ಪುರುಷಾಕೃತಿಯ ಈ ಸಂಕ್ರಾಂತಿಯು ಅರುವತ್ತು ಯೋಜನ ವಿಸ್ತಾರವುಳ್ಳದ್ದಾಗಿ, ಒಂಭತ್ತು ಭುಜ, ಒಂದೇ ಮುಖ, ಜೋಲುವ ತುಟಿ, ದೀರ್ಘನಾಸಿಕವೂ ಇರುವಂಥದ್ದು ಆಗಿರುತ್ತದೆ. ಸಂಕ್ರಾಂತಿ ಧರಿಸಿದ ವಸ್ತುಗಳಿಗೆ ಅತ್ಯಂತ ಬೆಲೆಯಾಗಲಿ ನಾಶವಾಗಲಿ ಉಂಟಾಗುವುದು.

ಗುರುವು ಸಿಂಹರಾಶಿಯಲ್ಲಿರುವಾಗ ಅತಿವೃಷ್ಟಿ, ಅನಾರೋಗ್ಯ, ರಾಜರೊಳಗೆ ಯುದ್ಧ ಉಂಟಾಗುವುದಲ್ಲದೆ ಸಜ್ಜನರು ಬ್ರಾಹ್ಮಣರು ದಾರಿದ್ರ್ಯವನ್ನು ಹೊಂದುವರು. ಕನ್ಯಾರಾಶಿ ಪ್ರವೇಶಿಸಿದ ನಂತರ ಉತ್ತಮ ಮಳೆಯಾಗುವುದು; ಬ್ರಾಹ್ಮಣರು ಯಜ್ಞಕರ್ಮ ನಿರತರಾಗಿದ್ದು ರಾಜರು ಮತ್ತು ಲೋಕದ ಎಲ್ಲಾ ಜನರೂ ಸುಖದಿಂದಿರುವರು.

ಶನಿಯು ಮಿಥುನರಾಶಿಯಲ್ಲಿರುವಾಗ ರಾಜರು ಆನಂದ ಹೊಂದುವರು. ಉತ್ತಮ ಮಳೆಯಾಗಿ ಭೂಮಿಯಲ್ಲಿ ಸಸ್ಯ - ಧಾನ್ಯಾದಿಗಳು ಉತ್ತಮವಾಗಿ ಬೆಳೆಯುವವು; ವ್ಯಾಪಾರಿಗಳು, ಮಡಿವಾಳರು ಹಾಗೂ ಕಳ್ಳರು ಹಾನಿಗೊಳಗಾಗುವರು. ಸೌರಾಷ್ಟ್ರ ದೇಶಕ್ಕೆ ಮತ್ತು ಪಾದರಸವೇ ಮೊದಲಾದ ವಿಷಗಳಿಗೆ ಹಾನಿಯುಂಟಾಗುವುದು. ಕರ್ಕಟಕ ರಾಶಿ ಪ್ರವೇಶಿಸಿದ ನಂತರ ಸುವೃಷ್ಟಿಯಾಗಿ ಭೂಮಿಯು ಸಸ್ಯ ಫಲಗಳಿಂದ ಕೂಡಿದ್ದಾಗುವುದು; ವೈದ್ಯೋತ್ತಮರೂ, ಪಂಜಾಬ ದೇಶದವರೂ, ಸರ್ಪ ಮೊದಲಾದ ವಿಷ ಜಂತುಗಳೂ ನಾಶ ಹೊಂದುವರು.

ಚೈತ್ರ ಶುಕ್ಲ ಪ್ರತಿಪದೆಯ (ಯುಗಾದಿ) ದಿನ ಸಂವತ್ಸರ ರಾಜಾಧಿಫಲಗಳನ್ನು ಯಾರು ಭಕ್ತಿಯಿಂದ ಕೇಳುವರೊ, ಅವರ ದುಃಖ ದಾರಿದ್ರ್ಯಗಳು ನಿವಾರಣೆಗೊಂಡು ಸಕಲೈಶ್ವರ್ಯಯುಕ್ತರಾಗಿ ಸುಖಹೊಂದುವರು. ಹಾಗೆಯೇ ತಿಥಿ ಶ್ರವಣದಿಂದ ಸಂಪತ್ತು ಹೆಚ್ಚಾಗಿ ವಾರ ಶ್ರವಣದಿಂದ ಆಯುಷ್ಯ ಹೆಚ್ಚಾಗಿ, ನಕ್ಷತ್ರ ಶ್ರವಣದಿಂದ ಪಾಪ ನಿವಾರಣೆಯಾಗಿ, ಯೋಗ ಶ್ರವಣದಿಂದ ರೋಗ ನಿವಾರಣೆಗೊಂಡು, ಕರಣ ಶ್ರವಣದಿಂದ ಗಂಗಾನದಿಯಲ್ಲಿ ಸ್ನಾದ ಫಲವು ದೊರೆಯುವುದು.

ಭಗವದ್ಗಿತೆಯ ವಿಚಾರಗಳಿಗಾಗಿ ಮನೆ ಮಂದಿಯೆಲ್ಲ
ಓದಲೇಬೇಕಾದ ಮಾಸ ಪತ್ರಿಕೆ

**ಸುಗುಣಮಾಲಾ**

**ವಾರ್ಷಿಕ ಚಂದಾ ರೂ. 80-00** **ಬಿಡಿ ಪ್ರತಿ ರೂ. 6-50**

*ಹಾರ್ದಿಕ ಶುಭಾಶಯಗಳೊಂದಿಗೆ :*

Ph.: 0820- 2536236 (S)
2557042 (R)
2530818 (R)

**ಪೂರ್ಣಪ್ರಜ್ಞ ಗ್ರಂಥಭಂಡಾರ**

**ಮತ್ತು ಶ್ರೀ ವಿದ್ಯಾ ಏಜನ್ಸೀಸ್**

ಶ್ರೀ ಆನಂದತೀರ್ಥ ಸಂಕೀರ್ಣ, ಶ್ರೀ ಭಂಡಾರಕೇರಿ ಮಠ, ರಥಬೀದಿ, ಉಡುಪಿ

ಧಾರ್ಮಿಕ ಪುಸ್ತಕಗಳು, ಲೇಖನ ಸಾಮಗ್ರಿಗಳು, ಜೆರಾಕ್ಸ್
ಹಾಗೂ ಲ್ಯಾಮಿನೇಶನ್.

ಧಾರ್ಮಿಕ ಪುಸ್ತಕಗಳಿಗಾಗಿ ಸಂದರ್ಶಿಸಿರಿ.

## ಸಕಲ ಕಾರ್ಯಗಳಿಗೆ ಅತ್ಯುಪಯುಕ್ತವಾದ ಗೌರೀ ಪಂಚಾಂಗ

### ಹಗಲು ಸಮಯದ ವಿವರಗಳು

| ಘಂಟೆ | ರವಿ | ಚಂದ್ರ | ಕುಜ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|---|
| 6.7 ॥ | ಉದ್ಯೋಗ | ಅಮೃತ | ರೋಗ | ಸುಖ | ಉದ್ಯೋಗ | ರೋಗ | ವಿಷ |
| 7॥ - 9 | ಲಾಭ | ವಿಷ | ಉದ್ಯೋಗ | ವಿಷ | ವಿಷ | ಚೋರ | ಅಮೃತ |
| 9 - 10॥ | ವಿಷ | ಉದ್ಯೋಗ | ಚೋರ | ಅಮೃತ | ಚೋರ | ಅಮೃತ | ರೋಗ |
| 10॥ - 12 | ಅಮೃತ | ಲಾಭ | ಲಾಭ | ಉದ್ಯೋಗ | ಲಾಭ | ವಿಷ | ಉದ್ಯೋಗ |
| 12 - 1 ॥ | ಶುಭ | ಚೋರ | ಅಮೃತ | ಚೋರ | ಅಮೃತ | ಲಾಭ | ಸುಖ |
| 1॥ - 3 | ಧನ | ಸುಖ | ಉದ್ಯೋಗ | ಲಾಭ | ದುಃಖ | ಸುಖ | ಲಾಭ |
| 3 -4॥ | ಅಮೃತ | ಲಾಭ | ವಿಷ | ಧನ | ಕಲಹ | ಧನ | ಐಶ್ವರ್ಯ |
| 4॥ -6 | ರೋಗ | ಧನ | ಧನ | ಶಾಂತಿ | ಚೋರ | ಆನಂದ | ಲಾಭ |

### ರಾತ್ರಿ ಸಮಯದ ವಿವರಗಳು

| ಘಂಟೆ | ರವಿ | ಚಂದ್ರ | ಕುಜ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|---|
| 6-7 ॥ | ಧನ | ರೋಗ | ಚೋರ | ಲಾಭ | ಸುಖ | ಅಮೃತ | ವಿಷ |
| 7॥-9 | ಶುಭ | ಲಾಭ | ಉದ್ಯೋಗ | ರೋಗ | ರೋಗ | ಚೋರ | ಉದ್ಯೋಗ |
| 9-10 ॥ | ಚೊರ | ಉದ್ಯೋಗ | ದುಃಖ | ವಿಷ | ಕಲಹ | ವಿಷ | ಸುಖ |
| 10॥ - 12 | ವಿಷ | ಧನ | ಲಾಭ | ಉದ್ಯೋಗ | ಲಾಭ | ಲಾಭ | ಅಮೃತ |
| 12 - 1॥ | ಕಲಹ | ರೋಗ | ನಷ್ಟ | ಸೌಖ್ಯ | ಉದ್ಯೋಗ | ಸುಖ | ಕಲಹ |
| 1॥ - 3 | ಅಮೃತ | ಅಮೃತ | ಧನ | ಅಮೃತ | ಚೋರ | ಧನ | ರೋಗ |
| 3-4॥ | ಲಾಭ | ವಿಷ | ಸುಖ | ಐಶ್ವರ್ಯ | ಧನ | ಉದ್ಯೋಗ | ಅಮೃತ |
| 4॥ - 6 | ರೋಗ | ಚೋರ | ಅಮೃತ | ಲಾಭ | ಅಮೃತ | ವ್ಯಾಧಿ | ಲಾಭ |

ದಿವಾ ರಾತ್ರಿಮಾನಗಳನ್ನು ೮ ಪಾಲು ಮಾಡಿ ಫಲಗಳನ್ನು ತಿಳಿಯತಕ್ಕದ್ದು

## ಕುಕ್ಕುಟ (ಕೋಳಿ) ಪಂಚಾಗ

| ಶುಕ್ಲ ಪಕ್ಷದ ತಿಥಿ | | | ಹುಟ್ಟು | ಬಾಲ್ಯ | ಯೌವನ | ಮುಪ್ಪು | ಮರಣ | ಕೃಷ್ಣಪಕ್ಷದತಿಥಿ | | |
|---|---|---|---|---|---|---|---|---|---|---|
| ೧ | ೬ | ೧೧ | ಬಿಳಿ | ಪಂಚ | ಕೆಂಪು | ಕಪ್ಪು | ಹಳದಿ | ೫ | ೧೦ | ೧೫ |
| ೨ | ೭ | ೧೨ | ಹಳದಿ | ಬಿಳಿ | ಪಂಚ | ಕೆಂಪು | ಕಪ್ಪು | ೧ | ೬ | ೧೧ |
| ೩ | ೮ | ೧೩ | ಕಪ್ಪು | ಹಳದಿ | ಬಿಳಿ | ಪಂಚ | ಕೆಂಪು | ೨ | ೭ | ೧೨ |
| ೪ | ೯ | ೧೪ | ಕೆಂಪು | ಕಪ್ಪು | ಹಳದಿ | ಬಿಳಿ | ಪಂಚ | ೩ | ೮ | ೧೩ |
| ೫ | ೧೦ | ೧೫ | ಪಂಚ | ಕೆಂಪು | ಕಪ್ಪು | ಹಳದಿ | ಬಿಳಿ | ೪ | ೯ | ೧೪ |

| ವಾರ | ರವಿ | ಚಂದ್ರ | ಕುಜ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|---|
| ಜಯ | ಪಂಚ | ಬಿಳಿ | ಕೆಂಪು | ಹಳದಿ | ಹಳದಿ | ಕೆಂಪು | ಕಪ್ಪು |
| ನಾಶ | ಬಿಳಿ | ಕೆಂಪು | ಕಪ್ಪು | ಕಪ್ಪು | ಪಂಚ | ಬಿಳಿ | ಹಳದಿ |

ಇಲ್ಲಿ ಬರೆದಿರುವ ಕೋಷ್ಟಕದ ಮೂಲಕ ಆಯಾ ತಿಥಿ ವಾರಗಳ ದಿನದಂದು ಆಯಾ ವರ್ಣದ ಕುಕ್ಕುಟಕ್ಕೆ ಜನನಾದಿ ಅವಸ್ಥೆ ಹಾಗೂ ಜಯಾಪಜಯಾದಿಗಳೆಂದು ತಿಳಿಯಬೇಕು.



## ಸ್ಕಂದಾಯ - ಫಲ

| ನಕ್ಷತ್ರ | ಆದಿ | ಮಧ್ಯ | ಅಂತ್ಯ | ನಕ್ಷತ್ರ | ಆದಿ | ಮಧ್ಯ | ಅಂತ್ಯ | ನಕ್ಷತ್ರ | ಆದಿ | ಮಧ್ಯ | ಅಂತ್ಯ | ಫಲವಿವರ |
|---|---|---|---|---|---|---|---|---|---|---|---|---|
| ಅ್ವ | ೦ | ೧ | ೩ | ಮ | ೩ | ೧ | ೧ | ಮೂ | ೬ | ೧ | ೪ | ಆದಿಯಲ್ಲಿ |
| ಭ | ೩ | ೨ | ೦ | ಪೂ | ೬ | ೨ | ೩ | ಪೂ್ಷ | ೧ | ೨ | ೧ | ಶೂನ್ಯವಾದರೆ ಆ |
| ಕೃ | ೬ | ೦ | ೨ | ಉ್ತ | ೧ | ೦ | ೦ | ಉ್ಷ | ೪ | ೦ | ೩ | ನಕ್ಷತ್ರದವರಿಗೆ |
| ರೊ | ೧ | ೧ | ೪ | ಹ | ೪ | ೧ | ೨ | ಶ್ರ | ೭ | ೧ | ೦ | ವ್ಯಾಧಿ, ಮಧ್ಯದಲ್ಲಿ |
| ಮೃ | ೪ | ೨ | ೧ | ಚಿ | ೭ | ೨ | ೪ | ಧ | ೨ | ೨ | ೨ | ಮಹಾಭಯ, |
| ಆರ್ | ೭ | ೦ | ೩ | ಸ್ವಾ | ೨ | ೦ | ೧ | ಶ್ತ | ೫ | ೦ | ೪ | ಅಂತ್ಯದಲ್ಲಿ ಹಾನಿ |
| ಪು | ೨ | ೧ | ೦ | ವಿ | ೫ | ೧ | ೩ | ಪೂ್ಭ | ೦ | ೧ | ೧ | ಮೂರು ಸ್ಥಾನ |
| ಪ್ಯ | ೫ | ೨ | ೨ | ಅ್ನ | ೦ | ೨ | ೦ | ಉ್ಭ | ೩ | ೨ | ೩ | ಗಳಲ್ಲೂ ಸಂಖ್ಯೆ |
| ಆ್ಲ | ೦ | ೦ | ೪ | ಜ್ಯೆ | ೩ | ೦ | ೨ | ರೇ | ೬ | ೦ | ೦ | ಗಳಿದ್ದರೆ ಜಯ. |

| ನಕ್ಷತ್ರ | | | ಆಯ। ವ್ಯಯ |
|---|---|---|---|
| ಅ್ವ | ಮ | ಮೂ | ೧೪।೧೧ |
| ಭ | ಪೂ | ಪೂ್ಷ | ೮।೫ |
| ಕೃ | ಉ್ತ | ಉ್ಷ | ೧೧।೧೧ |
| ರೊ | ಹ | ಶ್ರ | ೮।೧೪ |
| ಮೃ | ಚಿ | ಧ | ೧೪।೧೧ |
| ಆರ್ | ಸ್ವಾ | ಶ್ತ | ೨।೫ |
| ಪು | ವಿ | ಪೂ್ಭ | ೧೧।೨ |
| ಪ್ಯ | ಅ್ನ | ಉ್ಭ | ೫।೫ |
| ಆ್ಲ | ಜ್ಯೆ | ರೆ | ೧೪।೨ |

| ರಾಶಿ | ಆಯ। ವ್ಯಯ |
|---|---|
| ಮೇಷ | ೧೪।೧೧ |
| ವೃಷಭ | ೮।೫ |
| ಮಿಥುನ | ೧೪।೨ |
| ಕರ್ಕಟ | ೮।೧೪ |
| ಸಿಂಹ | ೧೧।೧೧ |
| ಕನ್ಯಾ | ೧೪।೨ |
| ತುಲಾ | ೮।೫ |
| ವೃಶ್ಚಿಕ | ೧೪।೧೧ |
| ಧನು | ೧೧।೨ |
| ಮಕರ | ೫।೫ |
| ಕುಂಭ | ೫।೫ |
| ಮೀನ | ೧೧।೨ |

**ರಾಹುವಿರುವ ದಿಕ್ಕು**

| ವಾರ ಮತ್ತು ಲಗ್ನ | ದಿಕ್ಕು |
|---|---|
| ರವಿ ಗುರು | ಪೂರ್ವ |
| ಚಂದ್ರ ಶುಕ್ರ | ದಕ್ಷಿಣ |
| ಕುಜ | ಪಶ್ಚಿಮ |
| ಬುಧ ಶನಿ | ಉತ್ತರ |
| ಮೇಷ ಸಿಂಹ ಧನು | ಪೂರ್ವ |
| ವೃಷ ಕನ್ಯಾ ಮಕರ | ದಕ್ಷಿಣ |
| ಮಿಥುನ ತುಲಾ ಕುಂಭ | ಪಶ್ಚಿಮ |
| ಕರ್ಕಟ ವೃಶ್ಚಿಕ ಮೀನ | ಉತ್ತರ |

## ಅಥ ವರ್ಷಾದಯೋ ಧಾತವಃ

ಈ ಕೆಳಗೆ ಬರೆದ ವಿಷಯಗಳು ಈ ವರ್ಷದಲ್ಲಿ ಮಾತ್ರ ಆಗತಕ್ಕವುಗಳು, ಎಂದರೆ ವೃಷ್ಟಿಯು ೧೧/೨೦ ಎಂಬರ್ಥ. ಇದರಂತೆ ಎಲ್ಲಾ ವಿಷಯಗಳೂ ಇದರಂತೆ ಇಪ್ಪತ್ತರಂಶವು

| | | | | | | | | | |
|---|---|---|---|---|---|---|---|---|---|
| ವೃಷ್ಟಿ | ೧೧ | ಉತ್ಸಾಹ | ೯ | ಬೆಳ್ಳಿ | ೧೭ | ಅಗ್ನಿನಾಶ | ೧೭ | ವಾತಪ್ರಕೃತಿ | ೯ |
| ಧಾನ್ಯ | ೧೩ | ಶಲಭ | ೩ | ಕಬ್ಬಿಣ | ೧೧ | ವಿಷಭಯ | ೧೯ | ಪಿತ್ತಪ್ರಕೃತಿ | ೧೫ |
| ತೃಣ | ೯ | ಶುಕ | ೫ | ಕಪ್ಪರಸುತ್ತು | ೧೯ | ವಿಷಶಮನ | ೧೩ | ಕಫಪ್ರಕೃತಿ | ೩ |
| ಶೀತ | ೧೫ | ಮೂಷಕ | ೫ | ಹಿತ್ತಾಳಿ | ೯ | ಸೇವಕತ್ವ | ೧೭ | ದ್ವಂದ್ವಜ | ೭ |
| ಉಷ್ಣ | ೧೧ | ಅತಿವೃಷ್ಟಿ | ೧೫ | ಸೀಸ | ೧೩ | ಸ್ವಾಮಿತ್ವ | ೧೫ | ಸನ್ನಿಪಾತ | ೧೧ |
| ವಾಯು | ೧೩ | ಅನಾವೃಷ್ಟಿ | ೧೩ | ಕಂಚು | ೧೭ | ನಿಜಧನ | ೭ | ಕೀರ್ತಿ | ೧೫ |
| ವೃದ್ಧಿ | ೧೫ | ಸ್ವಚಕ್ರ | ೧೧ | ಉಗ್ರಪ್ರಕೃತಿ | ೩ | ಪರಧನ | ೧೧ | ಅಪಕೀರ್ತಿ | ೧೯ |
| ವಿನಾಶ | ೧೫ | ಪರಚಕ್ರ | ೧೩ | ಸೌಮ್ಯಪ್ರಕೃತಿ | ೧೭ | ದ್ಯೂತ | ೧೧ | ಗರ್ವ | ೫ |
| ವಿಗ್ರಹ | ೧೧ | ತನ್ನಾಶ | ೧೫ | ಪಾಪಪ್ರಕೃತಿ | ೩ | ವ್ಯಭಿಚಾರ | ೭ | ಉಗ್ರತೆ | ೭ |
| ಕ್ಷುಧೆ | ೯ | ರತ್ನ | ೫ | ಪುಣ್ಯಪ್ರಕೃತಿ | ೧೭ | ಜಾರಣ | ೧೭ | ಪ್ರಪಂಚ | ೯ |
| ತೃಷೆ | ೯ | ವಸ್ತ್ರ | ೧೭ | ವ್ಯಾಧಿ | ೧೩ | ತನ್ನಾಶ | ೭ | ಭೂತಬಾಧೆ | ೧೧ |
| ನಿದ್ರೆ | ೧೩ | ಘೃತ | ೧೭ | ಬೈಷಜ್ಯ | ೧೧ | ಮಾರಣ | ೧೧ | ಭೂತನಾಶ | ೧೩ |
| ಆಲಸ್ಯ | ೯ | ತೈಲ | ೧೩ | ಆಚಾರ | ೧೫ | ಮಾರಣನಾಶ | ೧೩ | ಗ್ರಹದೋಷ | ೧೫ |
| ಉದ್ಯಮ | ೯ | ದುಕೂಲ | ೧೩ | ಅನಾಚಾರ | ೧೧ | ಸ್ತಂಭನ | ೧೩ | ತಚ್ಛಮನ | ೧೭ |
| ಶಾಂತಿ | ೫ | ಉಣ್ಣೆವಸ್ತ್ರ | ೭ | ಮರಣ | ೧೯ | ತನ್ನಾಶ | ೧೧ | ಅಂಡಜ | ೫ |
| ಕ್ರೋಧ | ೧೧ | ವಲ್ಕಲ | ೧೭ | ಜನನ | ೭ | ಮೋಹನ | ೭ | ಜಾರಜ | ೫ |
| ದಂಭ | ೩ | ರೇಷ್ಮೆ | ೧೫ | ದೇಶೋಪದ್ರವ | ೧೧ | ತನ್ನಾಶ | ೧೯ | ಸ್ವೇದಜ | ೭ |
| ಭೇದ | ೧ | ಭೂರ್ಜಪತ್ರ | ೧೯ | ದೇಶಸ್ವಾಸ್ಥ್ಯ | ೧೭ | ಉಚ್ಚಾಟನೆ | ೧೩ | ಉದ್ಭಿಜ್ಜ | ೧೩ |
| ಮೈತ್ರಿ | ೧೩ | ಸುವರ್ಣ | ೧೫ | ಚೋರಭಯ | ೯ | ತನ್ನಾಶ | ೫ | ಪುಣ್ಯ | ೩ |
| ರಸನಿಷ್ಪತ್ತಿ | ೭ | ತಾಮ್ರ | ೩ | ಚೋರನಾಶ | ೫ | ವಶೀಕರಣ | ೧೩ | ಪಾಪ | ೧೫ |
| ಫಲನಿಷ್ಪತ್ತಿ | ೧೧ | ತವರ | ೧೯ | ಅಗ್ನಿಭಯ | ೭ | ತನ್ನಾಶ | ೩ | ಸರ್ವನಿಷ್ಪತ್ತಿ | ೮ |

ಮುಹೂರ್ತ ನಕ್ಷತ್ರಗಳು

| | | |
|---|---|---|
| ಗರ್ಭಾದಾನಕ್ಕೆ | - | ಅ ರೋ ಮೃ ಪು ಉ ಹ ಚಿ ಸ್ವಾ ಅ ಉಷಾ ಶ್ರ ಧ ಶ್ತ ಉಭಾ ರೇ; ಪುಂಸವನಕ್ಕೆ - ಮೃ ಪು ಪ್ಯ ಶ್ರ ಹ ಮೂ |
| ನಾಮಕರಣಕ್ಕೆ | - | ಅ ರೋ ಮೃ ಪು ಪ್ಯ ಉ ಹ ಚಿ ಸ್ವಾ ಅ ಉಷಾ ಶ್ರ ಧ ಶ್ತ ಉಭಾ ರೇ |
| ಅನ್ನಪ್ರಾಶನಕ್ಕೆ | - | ಅ ರೋ ಮೃ ಪು ಪ್ಯ ಮ ಉ ಹ ಚಿ ಸ್ವಾ ಅ ಉಷಾ ಶ್ರ ಧ ಶ್ತ ಉಭಾ ರೇವತಿ |
| ಚೌಲಕ್ಕೆ | - | ಅ ಮೃ ಪು ಪ್ಯ ಹ ಚಿ ಅ ಶ್ರ ಧ ರೇ ಉತ್ತಮ; ರೋ ಉ ಸ್ವಾ ಉಷಾ ಶ್ತ ಉಭಾ ಇವು ಮಧ್ಯಮ |
| ವಿದ್ಯಾರಂಭಕ್ಕೆ | - | ಅ ಮೃ ಪು ಪ್ಯ ಹ ಚಿ ಸ್ವಾ ಅ ಶ್ರ ಧ ಉಭಾ ರೇ ಇವು ಉತ್ತಮ; ರೋ ಉ ಉಷಾ ಶ್ತ ಇವು ಮಧ್ಯಮ |
| ಕರ್ಣವೇಧಕ್ಕೆ | - | ಮೃ ಆರ ಪು ಪ್ಯ ಉ ಹ ಚಿ ಉಷಾ ಶ್ರ ಧ ಉಭಾ ರೇ ಇವು ಉತ್ತಮ; ಅ ಸ್ವಾ ಅ ಇವು ಮಧ್ಯಮ |
| ಸೀಮಂತಕ್ಕೆ | - | ರೋ ಮೃ ಪು ಪ್ಯ ಉ ಹ ಉಷಾ ಶ್ರವಣ ಉಭಾ ರೇ ಇವು ಉತ್ತಮ |
| ಉಪನಯನಕ್ಕೆ | - | ರೋ ಮೃ ಪು ಉ ಹ ಚಿ ಅ ಉಷಾ ಧ ಉಭಾ ಇವು ಉತ್ತಮ; ಅ ಪ್ಯ ಸ್ವಾ ಶ್ರ ಶ್ತ ರೇ ಇವು ಮಧ್ಯಮ |
| ವಿವಾಹಕ್ಕೆ | - | ರೋ ಮೃ ಪು ಉ ಹ ಸ್ವಾ ಅ ಮೂ ಉಷಾ ಉಭಾ ರೇ ಇವು ಉತ್ತಮ ಅ ಚಿ ಶ್ರ ಧ ಮಧ್ಯಮ |
| ನೂತನವಧೂಪ್ರವೇಶಕ್ಕೆ | - | ಅ ರೋ ಮೃ ಪು ಪ್ಯ ಉ ಹ ಚಿ ಸ್ವಾ ಅ ಉಷಾ ಶ್ರ ಧ ಶ್ತ ಉಭಾ ರೇ ಇವು ಉತ್ತಮ |
| ಹಲಕರ್ಷಣಕ್ಕೆ | - | ರೋ ಪು ಪ್ಯ ಉ ಹ ಅ ಮೂ ಉಷಾ ಉಭಾ ರೇ ಇವು ಉತ್ತಮ; ಅ ಮೃ ಸ್ವಾ ಶ್ರ ಧ ಶ್ತ ಇವು ಮಧ್ಯಮ |
| ಬೀಜಹಾಕುವುದಕ್ಕೆ | - | ಅ ರೋ ಮ ಉ ಹ ಸ್ವಾ ಅ ಮೂ ಉಷಾ ಶ್ರ ಶ್ತ ಉಭಾ ರೇ ಇವು ಉತ್ತಮ; ಮೃ ಪು ಧ ಇವು ಮಧ್ಯಮ |
| ಕದಿರು ಕಟ್ಟುವುದಕ್ಕೆ | - | ರೋ ಆದ್ರಾ ಭರಣಿ ಹ ಮಖಾ ಶ್ರ ಸ್ವಾತಿ ಇವು ೭ ನಕ್ಷತ್ರಗಳು ಉತ್ತಮ |
| ಪ್ರಯಾಣಕ್ಕೆ | - | ಅ ಮೃ ಪು ಪ್ಯ ಹ ಅ ಮೂ ಶ್ರ ಧ ರೇ ಇವು ೧೦ ನಕ್ಷತ್ರಗಳು ಉತ್ತಮ |
| ಗೃಹಾರಂಭಕ್ಕೆ | - | ರೋ ಮೃ ಪ್ಯ ಉ ಹ ಅನು ಉಷಾ ಉಭಾ ರೇ ಇವು ೯ ನಕ್ಷತ್ರಗಳು ಉತ್ತಮ; ಚಿ ಮೂ ಸ್ವಾ ಧ ಪು ಶ್ತ ಇವು ಮಧ್ಯಮ |
| ಗೃಹಪ್ರವೇಶಕ್ಕೆ | - | ರೋ ಚಿ ಅ ಮೃ ಉ ಉಷಾ ಉಭಾ ರೇ ಇವು ೮ ನಕ್ಷತ್ರಗಳು ಉತ್ತಮ; ಹಳೆ ಮನೆಯ ಪ್ರವೇಶಕ್ಕೆ ಧ ಶ್ತ ಪ್ಯ ಹ |
| ದೇವತಾ ಪ್ರತಿಷ್ಠೆಗೆ | - | ಪು ಪ್ಯ ರೋ ಹ ಉ ಉಷಾ ಉಭಾ ರೇ ವಿಷ್ಣುವಿಗೆ- ಶ್ರ ಶ್ತ ಗಣಪತಿಗೆ - ಚಿ ಜ್ಯೇ, ದುರ್ಗಾ-ಚಿ ಕೃ, ರುದ್ರಗೆ-ಆರ್ |
| ಪಟ್ಟಾಭಿಷೇಕಕ್ಕೆ | - | ಅಶ್ವಿನಿ ರೋ ಮೃ ಪ್ಯ ಉ ಹ ಅನು ಜ್ಯೇ ಉಷಾ ಶ್ರ ಉಭಾ ರೇ ಇವು ಉತ್ತಮ |
| ಬಾವಿತೋಡುವುದಕ್ಕೆ | - | ರೋ ಹ ಅನು ಉಷಾ ಉಭಾ ಧ ಶ್ತ ಪೂಷಾ ಮರೇ ಉಭಾ ಚಿ |
| ರೋಗಸ್ನಾನಕ್ಕೆ | - | ಅ ಧ ಉ ಉ ರೇ ಸ್ವಾ ಹ ಇವು ಉತ್ತಮ |
| ಔಷಧಿತೆಗೆದುಕೊಳ್ಳುವುದಕ್ಕೆ- | | ಅ ಮೃ ಆರ್ ಪು ಪ್ಯ ಮ ಹು ಹ ಚಿ ಸ್ವಾ ಅ ಪೂಷಾ ಶ್ರ ಧ ಶ್ತ ಪೂಭಾ ರೇ |
| ವ್ಯಾಪಾರಕ್ಕೆ | - | ಅನು ರೊ ಪ್ಯ ಉ ರೇ ಮೃ ಚಿ ಅ ಹ |
| ವಸ್ತ್ರಧಾರಣಕ್ಕೆ | - | ಅನು ಅ ಪು ಪ್ಯ ಚಿ ರೋ ಸ್ವಾ ಹ ಉ ಉಭಾ ಉ ರೇ ಇವು ೧೨ ನಕ್ಷತ್ರಗಳು ಉತ್ತಮ. |

ಇತರ ಸಾಮಾನ್ಯ ಎಲ್ಲಾ ಕಾರ್ಯಗಳಿಗೆ ಅ್ವ, ರೋ, ಮೃ, ಪು, ಉ್ತ, ಹ, ಚಿ, ಸ್ವಾ, ಅ್ನ, ಉ್ಷ, ಶ್ರ, ಧ, ಶ್ತ, ಉ್ಬ, ರೇ, ಉತ್ತಮ. ಮ, ವಿ, ಮೂ ಮಧ್ಯಮ.

## ಉಡುಪಿ ಪ್ರದೇಶದ ಪ್ರತಿ ದಿನದ ಸೂರ್ಯೋದಯಾಸ್ತ ಕಾಲಗಳ ಕೋಷ್ಠಕ (ಘಂಟೆ - ನಿಮಿಷಗಳಲ್ಲಿ)

| ತಿಂ. | ಜನವರಿ | | ಫೆಬ್ರವರಿ | | ಮಾರ್ಚ್ | | ಎಪ್ರಿಲ್ | | ಮೇ | | ಜೂನ್ | | ಜುಲೈ | | ಅಗೋಸ್ತು | | ಸಪ್ಟಂಬರ | | ಅಕ್ಟೋಬರ | | ನವಂಬರ | | ದಶಂಬರ | | ತಿಂ. |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| ತಾ. | ಉ. | ಅ. | ಉ. | ಅ. | ಉ. | ಅ. | ಉ. | ಅ. | ಉ. | ಅ. | ಉ. | ಅ. | ಉ. | ಅ. | ಉ. | ಅ. | ಉ. | ಅ. | ಉ. | ಅ. | ಉ. | ಅ. | ಉ. | ಅ. | ತಾ. |
| 1 | 6-56 | 6-13 | 7-00 | 6-30 | 6-49 | 6-37 | 6-28 | 6-40 | 6-11 | 6-44 | 6-04 | 6-52 | 6-08 | 6-59 | 6-17 | 6-57 | 6-21 | 6-42 | 6-22 | 6-21 | 6-26 | 6-03 | 6-39 | 6-00 | 1 |
| 2 | 56 | 14 | 7-00 | 30 | 49 | 38 | 28 | 40 | 10 | 44 | 04 | 52 | 09 | 7-00 | 17 | 57 | 21 | 41 | 22 | 20 | 27 | 03 | 40 | 00 | 2 |
| 3 | 56 | 14 | 6-59 | 30 | 48 | 38 | 27 | 40 | 10 | 44 | 04 | 53 | 09 | 00 | 17 | 56 | 21 | 40 | 22 | 19 | 27 | 02 | 41 | 01 | 3 |
| 4 | 56 | 15 | 59 | 31 | 47 | 38 | 26 | 40 | 10 | 45 | 04 | 53 | 09 | 00 | 17 | 56 | 21 | 39 | 22 | 18 | 27 | 02 | 42 | 01 | 4 |
| 5 | 57 | 15 | 59 | 31 | 47 | 38 | 26 | 41 | 09 | 45 | 04 | 53 | 10 | 00 | 17 | 56 | 21 | 38 | 22 | 18 | 27 | 02 | 42 | 01 | 5 |
| 6 | 6-58 | 6-16 | 6-59 | 6-32 | 6-46 | 6-38 | 6-25 | 6-41 | 6-09 | 6-46 | 6-04 | 6-54 | 6-10 | 7-00 | 6-18 | 6-55 | 6-21 | 6-38 | 6-22 | 6-17 | 6-28 | 6-01 | 6-43 | 6-02 | 6 |
| 7 | 58 | 17 | 58 | 32 | 45 | 38 | 24 | 41 | 08 | 46 | 04 | 54 | 10 | 00 | 18 | 55 | 21 | 37 | 22 | 17 | 28 | 01 | 43 | 02 | 7 |
| 8 | 58 | 17 | 58 | 32 | 45 | 38 | 23 | 41 | 08 | 46 | 05 | 54 | 10 | 00 | 18 | 55 | 21 | 36 | 22 | 16 | 28 | 01 | 43 | 02 | 8 |
| 9 | 58 | 18 | 58 | 33 | 44 | 38 | 23 | 41 | 08 | 46 | 05 | 55 | 11 | 00 | 18 | 54 | 21 | 36 | 22 | 15 | 29 | 00 | 44 | 02 | 9 |
| 10 | 58 | 18 | 58 | 33 | 44 | 6-38 | 22 | 41 | 08 | 46 | 05 | 55 | 11 | 00 | 18 | 54 | 21 | 35 | 22 | 14 | 30 | 00 | 45 | 03 | 10 |
| 11 | 6-59 | 6-19 | 6-58 | 6-33 | 6-43 | 38 | 6-22 | 6-41 | 6-08 | 6-46 | 6-05 | 6-56 | 6-11 | 7-00 | 6-19 | 6-53 | 6-21 | 6-34 | 6-23 | 6-14 | 6-30 | 6-00 | 6-45 | 6-03 | 11 |
| 12 | 59 | 19 | 58 | 34 | 42 | 38 | 21 | 41 | 07 | 46 | 05 | 56 | 11 | 00 | 19 | 52 | 21 | 34 | 23 | 13 | 30 | 00 | 46 | 03 | 12 |
| 13 | 59 | 20 | 57 | 34 | 42 | 39 | 20 | 41 | 07 | 47 | 05 | 56 | 12 | 00 | 19 | 52 | 21 | 33 | 23 | 13 | 30 | 00 | 46 | 04 | 13 |
| 14 | 6-59 | 21 | 57 | 34 | 41 | 39 | 20 | 42 | 07 | 47 | 05 | 56 | 12 | 00 | 19 | 52 | 21 | 32 | 23 | 12 | 31 | 6-00 | 47 | 04 | 14 |
| 15 | 7-00 | 21 | 57 | 34 | 40 | 39 | 19 | 42 | 06 | 47 | 05 | 56 | 12 | 00 | 20 | 51 | 21 | 31 | 23 | 12 | 31 | 5-59 | 47 | 04 | 15 |
| 16 | 7-00 | 6-22 | 6-57 | 6-34 | 6-40 | 6-39 | 6-19 | 6-42 | 6-06 | 6-47 | 6-06 | 6-57 | 6-12 | 7-00 | 6-20 | 6-51 | 6-21 | 6-30 | 6-23 | 6-11 | 6-32 | 5-59 | 6-48 | 6-05 | 16 |
| 17 | 00 | 22 | 56 | 34 | 40 | 39 | 18 | 42 | 06 | 48 | 06 | 57 | 13 | 00 | 20 | 50 | 21 | 30 | 23 | 10 | 32 | 59 | 48 | 05 | 17 |
| 18 | 00 | 23 | 56 | 35 | 39 | 40 | 18 | 42 | 06 | 48 | 06 | 57 | 13 | 00 | 20 | 50 | 21 | 29 | 24 | 10 | 32 | 59 | 49 | 06 | 18 |
| 19 | 00 | 23 | 56 | 35 | 38 | 40 | 17 | 42 | 06 | 48 | 06 | 58 | 13 | 00 | 20 | 49 | 22 | 28 | 24 | 09 | 33 | 59 | 49 | 06 | 19 |
| 20 | 00 | 24 | 55 | 35 | 37 | 40 | 16 | 42 | 06 | 48 | 06 | 58 | 13 | 00 | 20 | 48 | 22 | 28 | 24 | 09 | 33 | 59 | 50 | 07 | 20 |
| 21 | 7-00 | 6-24 | 6-55 | 6-36 | 6-36 | 6-40 | 6-16 | 6-43 | 6-05 | 6-49 | 6-06 | 6-58 | 6-14 | 7-00 | 6-20 | 6-48 | 6-22 | 6-27 | 6-24 | 6-08 | 6-34 | 5-59 | 6-50 | 6-07 | 21 |
| 22 | 00 | 25 | 54 | 36 | 35 | 40 | 15 | 43 | 05 | 49 | 07 | 58 | 14 | 7-00 | 20 | 48 | 22 | 26 | 24 | 08 | 34 | 59 | 51 | 08 | 22 |
| 23 | 00 | 26 | 53 | 36 | 34 | 40 | 14 | 43 | 05 | 50 | 07 | 58 | 14 | 6-59 | 20 | 47 | 22 | 26 | 24 | 07 | 35 | 59 | 51 | 08 | 23 |
| 24 | 00 | 26 | 52 | 36 | 34 | 40 | 14 | 43 | 05 | 50 | 07 | 58 | 15 | 59 | 20 | 46 | 22 | 25 | 25 | 06 | 35 | 59 | 52 | 09 | 24 |
| 25 | 00 | 27 | 52 | 36 | 33 | 40 | 14 | 43 | 05 | 50 | 07 | 58 | 15 | 59 | 20 | 46 | 22 | 24 | 25 | 06 | 36 | 59 | 52 | 09 | 25 |
| 26 | 7-00 | 6-28 | 6-51 | 6-37 | 6-32 | 6-40 | 6-13 | 6-43 | 6-04 | 6-51 | 6-07 | 6-58 | 6-15 | 6-58 | 6-20 | 6-45 | 6-22 | 6-24 | 6-25 | 6-05 | 6-36 | 5-59 | 6-53 | 6-10 | 26 |
| 27 | 00 | 28 | 50 | 37 | 31 | 40 | 13 | 43 | 04 | 51 | 07 | 58 | 16 | 58 | 20 | 44 | 22 | 23 | 25 | 05 | 37 | 59 | 53 | 10 | 27 |
| 28 | 00 | 28 | 50 | 37 | 31 | 40 | 12 | 44 | 04 | 51 | 08 | 59 | 16 | 58 | 21 | 44 | 22 | 23 | 26 | 05 | 37 | 59 | 54 | 11 | 28 |
| 29 | 00 | 29 | 6-50 | 6-37 | 30 | 40 | 12 | 44 | 04 | 52 | 08 | 59 | 16 | 58 | 21 | 43 | 22 | 22 | 26 | 04 | 38 | 5-59 | 54 | 11 | 29 |
| 30 | 00 | 29 | - | - | 29 | 40 | 6-11 | 6-44 | 04 | 52 | 6-08 | 6-59 | 16 | 57 | 21 | 43 | 22 | 22 | 26 | 04 | 38 | 6-00 | 55 | 12 | 30 |
| 31 | 7-00 | 6-30 | - | - | 6-29 | 6-40 | - | - | 6-04 | 6-52 | - | - | 6-16 | 6-57 | 6-21 | 6-42 | - | - | 6-26 | 6-04 | - | - | 6-55 | 6-13 | 31 |



## ಕೆಲವು ಮುಖ್ಯ ಪಟ್ಟಣಗಳ ನಿರಯನ ಲಗ್ನಮಾನಗಳು

| ಪಟ್ಟಣಗಳ ಹೆಸರು<br>ಅಕ್ಷಾಂಶ ರೇಖಾಂಶ | ಮೇಷ | ವೃಷ | ಮಿಥುನ | ಕರ್ಕಾಟ | ಸಿಂಹ | ಕನ್ಯಾ | ತುಲಾ | ವೃಶ್ಚಿಕ | ಧನು | ಮಕರ | ಕುಂಭ | ಮೀನ |
|---|---|---|---|---|---|---|---|---|---|---|---|---|
| ಹಾಸನ<br>೧೩-೦೧ : ೭೬-೧೦ | 4-30 | 5-06 | 5-30 | 5-24 | 5-08 | 5-05 | 5-17 | 5-30 | 5-19 | 4-45 | 4-16 | 4-10 |
| ಶಿವಮೊಗ್ಗ<br>೧೩-೫೬ : ೭೫-೩೮ | 4-28 | 5-05 | 5-30 | 5-26 | 5-10 | 5-07 | 5-19 | 5-31 | 5-19 | 4-43 | 4-14 | 4-08 |
| ಸಾಗರ<br>೧೪-೧೦ : ೭೫-೦೦ | 4-28 | 5-04 | 5-31 | 5-26 | 5-10 | 5-07 | 5-20 | 5-31 | 5-19 | 4-43 | 4-13 | 4-08 |
| ಮಂಡ್ಯ<br>೧೨-೩೧ : ೭೬-೫೧ | 4-31 | 5-07 | 5-29 | 5-23 | 5-07 | 5-04 | 5-16 | 5-30 | 5-20 | 4-45 | 4-17 | 4-11 |
| ಬೀದರ್<br>೧೭-೫೭ : ೭೭-೩೪ | 4-21 | 5-01 | 5-32 | 5-32 | 5-19 | 5-16 | 5-27 | 5-35 | 5-17 | 4-36 | 4-05 | 3-59 |
| ಕಾರವಾರ<br>೧೪-೪೯ : ೭೫-೧೨ | 4-27 | 5-04 | 5-30 | 5-28 | 5-11 | 5-09 | 5-20 | 5-32 | 5-18 | 4-42 | 4-12 | 4-07 |
| ಗೋಕರ್ಣ<br>೧೪-೩೨ : ೭೪-೨೦ | 4-27 | 5-05 | 5-30 | 5-27 | 5-11 | 5-08 | 5-20 | 5-31 | 5-19 | 4-43 | 4-12 | 4-07 |
| ಯಲ್ಲಾಪುರ<br>೧೫-೦೦ : ೭೫-೪೫ | 4-27 | 5-04 | 5-30 | 5-28 | 5-12 | 5-09 | 5-21 | 5-32 | 5-18 | 4-42 | 4-11 | 4-06 |
| ರಾಮೇಶ್ವರ<br>೯-೧೮ : ೭೯-೨೦ | 4-38 | 5-10 | 5-28 | 5-19 | 5-00 | 4-57 | 5-11 | 5-27 | 5-20 | 4-50 | 4-23 | 4-17 |
| ತಿರುಪತಿ<br>೧೩-೪೦ : ೭೬-೨೦ | 4-29 | 5-05 | 5-31 | 5-25 | 5-09 | 5-06 | 5-19 | 5-31 | 5-19 | 4-44 | 4-13 | 4-09 |
| ಬಿಜಾಪುರ<br>೧೬-೪೮ : ೭೫-೪೪ | 4-23 | 5-03 | 5-31 | 5-31 | 5-16 | 5-12 | 5-24 | 5-33 | 5-18 | 4-39 | 4-08 | 4-02 |
| ಧಾರವಾಡ<br>೧೫-೨೭ : ೭೫-೦೫ | 4-26 | 5-04 | 5-30 | 5-28 | 5-14 | 5-10 | 5-22 | 5-32 | 5-18 | 4-41 | 4-10 | 4-05 |
| ಗುಲ್ಬರ್ಗ<br>೧೭-೨೩ : ೭೬-೪೬ | 4-22 | 5-01 | 5-32 | 5-31 | 5-18 | 5-15 | 5-26 | 5-34 | 5-18 | 4-37 | 4-06 | 4-00 |
| ಬಾಗಲಕೋಟೆ<br>೧೬-೧೨ : ೭೬-೪೬ | 4-25 | 5-03 | 5-31 | 5-30 | 5-16 | 5-11 | 5-23 | 5-33 | 5-18 | 4-40 | 4-08 | 4-02 |
| ಪೂನಾ<br>೧೮-೩೦ : ೭೩-೫೩ | 4-20 | 5-00 | 5-32 | 5-33 | 5-20 | 5-17 | 5-28 | 5-36 | 5-17 | 4-36 | 4-04 | 3-57 |
| ಪಾಂಡಿಚೇರಿ<br>೧೧-೫೬ : ೭೯-೫೦ | 4-32 | 5-07 | 5-29 | 5-23 | 5-06 | 5-02 | 5-16 | 5-29 | 5-20 | 4-46 | 4-18 | 4-12 |
| ಕನ್ಯಾಕುಮಾರಿ<br>೮-೦೪ : ೭೭-೩೪ | 4-40 | 5-11 | 5-27 | 5-16 | 4-58 | 5-54 | 5-08 | 5-26 | 5-21 | 4-52 | 4-26 | 4-21 |

## ಇಂಡಿಯನ್ ಸ್ಟೇಂಡರ್ಡ್ ಟೈಂ ಪ್ರಕಾರ ಸೂರ್ಯೋದಯಾಸ್ತ ಘಂಟೆ ನಿಮಿಷಗಳು

| ತಾರೀಕು | | ದೆಹಲಿ | | ಮುಂಬೈ | | ಹೈದರಾಬಾದ್ | | ಮೈಸೂರು | | ಬೆಂಗಳೂರು | | ಚೆನ್ನೈ | |
|---|---|---|---|---|---|---|---|---|---|---|---|---|---|
| ಜನವರಿ | 01 | 7.25 | 5.34 | 7.15 | 6.08 | 6.48 | 5.50 | 6.49 | 6.06 | 6.46 | 6.00 | 6.35 | 5.50 |
| ,, | 10 | 7.18 | 5.42 | 7.17 | 6.14 | 6.52 | 5.54 | 6.51 | 6.11 | 6.49 | 6.05 | 6.38 | 5.55 |
| ,, | 20 | 7.17 | 5.50 | 7.18 | 6.21 | 6.54 | 6.02 | 6.53 | 6.17 | 6.51 | 6.11 | 6.40 | 6.01 |
| ,, | 30 | 7.13 | 5.57 | 7.17 | 6.25 | 6.52 | 6.06 | 6.53 | 6.21 | 6.48 | 6.16 | 6.38 | 6.06 |
| ಫೆಬ್ರವರಿ | 10 | 7.07 | 6.05 | 7.13 | 6.32 | 6.49 | 6.12 | 6.51 | 6.25 | 6.47 | 6.20 | 6.36 | 6.10 |
| ,, | 20 | 6.58 | 6.13 | 7.07 | 6.36 | 6.44 | 6.16 | 6.47 | 6.27 | 6.44 | 6.23 | 6.33 | 6.13 |
| ಮಾರ್ಚ್ | 02 | 6.48 | 6.19 | 7.00 | 6.40 | 6.37 | 6.19 | 6.41 | 6.28 | 6.39 | 6.24 | 6.28 | 6.14 |
| ,, | 12 | 6.37 | 6.26 | 6.52 | 6.44 | 6.30 | 6.21 | 6.35 | 6.29 | 6.33 | 6.26 | 6.22 | 6.16 |
| ,, | 22 | 6.25 | 6.31 | 6.45 | 6.46 | 6.22 | 6.21 | 6.29 | 6.30 | 6.26 | 6.27 | 6.16 | 6.17 |
| ಏಪ್ರಿಲ್ | 01 | 6.13 | 6.36 | 6.36 | 6.48 | 6.14 | 6.25 | 6.23 | 6.31 | 6.19 | 6.26 | 6.08 | 6.16 |
| ,, | 11 | 6.02 | 6.42 | 6.28 | 6.50 | 6.06 | 6.27 | 6.17 | 6.31 | 6.13 | 6.27 | 6.03 | 6.17 |
| ,, | 21 | 5.52 | 6.48 | 6.20 | 6.53 | 6.00 | 6.30 | 6.11 | 6.32 | 6.07 | 6.28 | 5.56 | 6.18 |
| ಮೇ | 01 | 5.43 | 6.53 | 6.14 | 6.56 | 5.54 | 6.32 | 6.07 | 6.33 | 6.03 | 6.30 | 5.52 | 6.20 |
| ,, | 11 | 5.35 | 6.59 | 6.09 | 6.59 | 5.49 | 6.35 | 6.03 | 6.35 | 5.59 | 6.32 | 5.48 | 6.22 |
| ,, | 21 | 5.30 | 7.05 | 6.06 | 7.03 | 5.46 | 6.38 | 6.01 | 6.38 | 5.57 | 6.35 | 5.46 | 6.25 |
| ,, | 31 | 5.26 | 7.11 | 6.04 | 7.07 | 5.45 | 6.42 | 6.00 | 6.40 | 5.56 | 6.37 | 5.45 | 6.27 |
| ಜೂನ್ | 10 | 5.25 | 7.15 | 6.04 | 7.11 | 5.45 | 6.45 | 6.01 | 6.43 | 5.57 | 6.41 | 5.46 | 6.31 |
| ,, | 20 | 5.26 | 7.18 | 6.05 | 7.13 | 5.46 | 6.48 | 6.02 | 6.45 | 5.58 | 6.43 | 5.47 | 6.33 |
| ,, | 30 | 5.29 | 7.19 | 6.08 | 7.15 | 5.49 | 6.50 | 6.05 | 6.27 | 6.01 | 6.45 | 5.50 | 6.35 |
| ಜುಲೈ | 10 | 5.33 | 6.19 | 6.11 | 7.15 | 5.52 | 6.50 | 6.07 | 6.48 | 6.03 | 6.46 | 5.52 | 6.36 |
| ,, | 20 | 5.38 | 7.16 | 6.14 | 7.14 | 5.55 | 6.49 | 6.11 | 6.46 | 6.06 | 6.45 | 5.55 | 6.35 |
| ,, | 30 | 5.43 | 7.11 | 6.18 | 7.11 | 5.58 | 6.46 | 6.12 | 6.46 | 6.08 | 6.43 | 5.57 | 6.33 |
| ಆಗಸ್ಟ್ | 09 | 5.48 | 7.04 | 6.21 | 7.06 | 6.01 | 6.42 | 6.14 | 6.43 | 6.10 | 6.40 | 5.59 | 6.30 |
| ,, | 19 | 5.54 | 6.56 | 6.24 | 7.01 | 6.03 | 6.36 | 6.15 | 6.38 | 6.12 | 6.35 | 6.01 | 6.25 |
| ,, | 29 | 5.59 | 6.46 | 6.26 | 6.52 | 6.06 | 6.30 | 6.16 | 6.33 | 6.12 | 6.29 | 6.01 | 6.19 |
| ಸೆಪ್ಟಂಬರ್ | 08 | 6.04 | 6.34 | 6.28 | 6.44 | 6.06 | 6.21 | 6.16 | 6.26 | 6.13 | 6.23 | 6.02 | 6.13 |
| ,, | 18 | 6.10 | 6.22 | 6.30 | 6.35 | 6.08 | 6.13 | 6.16 | 6.19 | 6.13 | 6.15 | 6.02 | 6.05 |
| ,, | 28 | 6.15 | 6.10 | 6.32 | 6.27 | 6.10 | 6.06 | 6.16 | 6.14 | 6.14 | 6.09 | 6.03 | 5.59 |
| ಅಕ್ಟೋಬರ್ | 08 | 6.21 | 5.59 | 6.34 | 6.18 | 6.11 | 5.57 | 6.16 | 6.06 | 6.14 | 6.02 | 6.03 | 5.52 |
| ,, | 18 | 6.27 | 5.48 | 6.37 | 6.11 | 6.14 | 5.51 | 6.17 | 6.01 | 6.15 | 5.57 | 6.04 | 5.47 |
| ,, | 28 | 6.33 | 5.39 | 6.40 | 6.04 | 6.17 | 5.45 | 6.19 | 5.56 | 6.16 | 5.51 | 6.05 | 5.41 |
| ನವಂಬರ್ | 07 | 6.39 | 5.31 | 6.44 | 5.59 | 6.20 | 5.39 | 6.21 | 5.52 | 6.19 | 5.48 | 6.08 | 5.38 |
| ,, | 17 | 6.46 | 5.26 | 6.50 | 5.56 | 6.25 | 5.37 | 6.25 | 5.51 | 6.22 | 5.46 | 6.12 | 5.36 |
| ,, | 27 | 6.53 | 5.24 | 6.55 | 5.55 | 6.30 | 5.36 | 6.29 | 5.51 | 6.27 | 5.47 | 6.17 | 5.37 |
| ಡಿಸೆಂಬರ್ | 07 | 7.02 | 5.24 | 7.01 | 5.58 | 6.36 | 5.38 | 6.34 | 5.53 | 6.32 | 5.48 | 6.22 | 5.38 |
| ,, | 17 | 7.09 | 5.25 | 7.08 | 6.00 | 6.42 | 5.41 | 6.41 | 5.58 | 6.39 | 5.52 | 6.28 | 5.42 |
| .. | 27 | 7.15 | 5.31 | 7.10 | 6.03 | 6.45 | 5.44 | 6.43 | 6.00 | 6.42 | 5.55 | 6.31 | 5.45 |



## ಕೆಲವು ಮುಖ್ಯ ಪಟ್ಟಣಗಳ ನಿರಯನ ಲಗ್ನಮಾನಗಳು

| ಪಟ್ಟಣಗಳ ಹೆಸರು<br>ಅಕ್ಷಾಂಶ ರೇಖಾಂಶ | ಮೇಷ | ವೃಷ | ಮಿಥುನ | ಕರ್ಕಟ | ಸಿಂಹ | ಕನ್ಯಾ | ತುಲಾ | ವೃಶ್ಚಿಕ | ಧನು | ಮಕರ | ಕುಂಭ | ಮೀನ |
|---|---|---|---|---|---|---|---|---|---|---|---|---|
| ಉಡುಪಿ<br>೧೩-೨೦ : ೭೪-೪೫ | 4-29 | 5-06 | 5-30 | 5-25 | 5-09 | 5-06 | 5-18 | 5-30 | 5-19 | 4-44 | 4-16 | 4-09 |
| ಬೆಂಗಳೂರು<br>೧೨-೫೮ : ೭೭-೩೬ | 4-30 | 5-06 | 5-30 | 5-24 | 5-08 | 5-04 | 5-17 | 5-30 | 5-19 | 4-45 | 4-15 | 4-11 |
| ಮೈಸೂರು<br>೧೨-೧೮ : ೭೬-೩೯ | 4-32 | 5-07 | 5-29 | 5-23 | 5-06 | 5-03 | 5-16 | 5-29 | 5-20 | 4-46 | 4-17 | 4-12 |
| ಚೆನ್ನೈ<br>೧೩-೦೪ : ೮೦-೧೫ | 4-30 | 5-06 | 5-30 | 5-25 | 5-08 | 5-05 | 5-17 | 5-30 | 5-19 | 4-44 | 4-16 | 4-10 |
| ಹೈದರಾಬಾದು<br>೧೭-೨೬ : ೭೮-೨೭ | 4-22 | 5-02 | 5-31 | 5-31 | 5-18 | 5-15 | 5-26 | 5-34 | 5-17 | 4-37 | 4-06 | 4-01 |
| ಮುಂಬಯಿ<br>೧೮-೫೮ : ೭೨-೫೦ | 4-19 | 5-00 | 5-32 | 5-34 | 5-21 | 5-18 | 5-29 | 5-36 | 5-17 | 4-35 | 4-03 | 3-56 |
| ದೆಹಲಿ<br>೨೮-೩೯ : ೭೭-೧೩ | 3-58 | 4-49 | 5-37 | 5-52 | 5-44 | 5-42 | 5-50 | 5-47 | 5-11 | 4-17 | 3-39 | 3-34 |
| ಎರ್ನಾಕುಲಂ<br>೦೯-೫೯ : ೭೬-೧೮ | 4-36 | 5-09 | 5-28 | 5-20 | 5-02 | 4-58 | 5-12 | 5-27 | 5-20 | 4-50 | 4-22 | 4-16 |
| ತಿರುವಾಂಕೂರು<br>೦೯-೦೦ : ೭೭-೦೦ | 4-38 | 5-10 | 5-28 | 5-18 | 5-00 | 4-56 | 5-10 | 5-27 | 5-20 | 4-51 | 4-24 | 4-18 |
| ಕೊಯಮುತ್ತೂರು<br>೧೧-೦೦ : ೭೬-೫೬ | 4-34 | 5-08 | 5-29 | 5-21 | 5-04 | 5-00 | 5-14 | 5-28 | 5-30 | 4-48 | 4-20 | 4-14 |
| ಭೂಪಾಲ<br>೨೩-೧೬ : ೭೭-೧೮ | 4-11 | 4-56 | 5-34 | 5-42 | 5-30 | 5-28 | 5-37 | 5-41 | 5-15 | 4-28 | 3-52 | 3-46 |
| ಕೋಲ್ಕೊತ<br>೨೨-೩೪ : ೮೮-೨೩ | 4-12 | 4-56 | 5-34 | 5-40 | 5-29 | 5-26 | 5-36 | 5-41 | 5-15 | 4-29 | 3-54 | 3-48 |
| ಗಯಾ<br>೨೪-೪೮ : ೮೫-೦೧ | 4-06 | 4-54 | 5-35 | 5-44 | 5-34 | 5-32 | 5-41 | 5-42 | 5-14 | 4-25 | 3-50 | 3-43 |
| ವಿಜಯವಾಡ<br>೧೬-೩೨ : ೮೦-೩೯ | 4-24 | 5-02 | 5-31 | 5-30 | 5-16 | 5-12 | 5-24 | 5-34 | 5-18 | 4-39 | 4-08 | 4-02 |
| ಬೆಳಗಾಮ್<br>೧೫-೫೧ : ೭೪-೩೦ | 4-26 | 5-03 | 5-31 | 5-29 | 5-14 | 5-10 | 5-23 | 5-32 | 5-18 | 4-41 | 4-10 | 4-03 |
| ರಾಯಚೂರು<br>೧೬-೧೨ : ೭೭-೨೫ | 4-24 | 5-03 | 5-31 | 5-30 | 5-16 | 5-11 | 5-24 | 5-33 | 5-18 | 4-40 | 4-08 | 4-02 |
| ಬಳ್ಳಾರಿ<br>೧೫-೦೯ : ೭೬-೫೭ | 4-27 | 5-04 | 5-30 | 5-28 | 5-13 | 5-09 | 5-21 | 5-32 | 5-18 | 4-42 | 4-10 | 4-05 |

## ನಕ್ಷತ್ರ ಪ್ರಕರಣ

| ನಾಮ | ನಕ್ಷತ್ರ | ಗಣ | ಮೃಗ | ವೈರಿ | ವೇಧ | ರಜ್ಜು | ನಾಡಿ | ಪಕ್ಷಿ | ವೃಕ್ಷ | ನಾಳ | ಲಿಂಗ | ಗುಣ | ಮುಖ | ದೃಷ್ಟಿ | ದೇವತೆ |
|---|---|---|---|---|---|---|---|---|---|---|---|---|---|---|---|
| ಚು ಚೆ ಚೊ ಲ | ಅಶ್ವಿನಿ | ದೇವ | ಕುದುರೆ | ಎಮ್ಮೆ | ಜ್ಯೇ | ಪಾದ | ಆದಿ | ಭೇರುಂಡ | ಕಾಸಾರಕ | ಹೊರ | ಪು | ಕ್ಷಿಪ್ರ | ತಿರ್ಯಕ್ | ಮಂದ | ಅಶ್ವಿನಿ |
| ಲಿ ಲು ಲೆ ಲೊ | ಭರಣಿ | ಮನು | ಆನೆ | ಸಿಂಹ | ಅ್ನ | ಜಾನು | ಮಧ್ಯ | | ನೆಲ್ಲಿ | ಹೊರ | ಸ್ತ್ರೀ | ಉಗ್ರ | ಅಧೋ | ಮಧ್ಯ | ಯಮ |
| ಆ ಇ ಉ ಎ | ಕೃತ್ತಿಕೆ | ರಾಕ್ಷಸ | ಆಡು | ಕಪಿ | ವಿ | ನಾಭಿ | ಅಂತ್ಯ | | ಅತ್ತಿ | ಒಳ | ಸ್ತ್ರೀ | ತೀಕ್ಷ್ಣ | ಅಧೋ | ಸುದೃಶ | ಅಗ್ನಿ |
| ಒ ವ ವಿ ವು | ರೋಹಿಣಿ | ಮನು | ಹಾವು | ಮುಂಗುಸಿ | ಸ್ವಾ | ಕಂಠ | ಅಂತ್ಯ | | ನೇರಳೆ | ಒಳ | ಪು | ಸ್ಥಿರ | ಊರ್ಧ್ವ | ಅಂಧ | ಬ್ರಹ್ಮ |
| ವೆ ವೊ ಕ ಕಿ | ಮೃಗಶಿರೆ | ದೇವ | ಹಾವು | ಮುಂಗುಸಿ | ಚಿ ಧ | ಶಿರ | ಮಧ್ಯ | | ಕದಿರ | ಒಳ | ನ | ಮೃದು | ತಿರ್ಯಕ್ | ಮಂದ | ಚಂದ್ರ |
| ಕು ಘ ಙ ಛ | ಆರ್ದ್ರೆ | ಮನು | ನಾಯಿ | ಜಿಂಕೆ | ಶ್ರಾ | ಕಂಠ | ಆದಿ | | ಕರಿಮರ | ಒಳ | ಸ್ತ್ರೀ | ತೀಕ್ಷ್ಣ | ಊರ್ಧ್ವ | ಮಧ್ಯ | ರುದ್ರ |
| ಕೆ ಕೊ ಹ ಹಿ | ಪುನರ್ವಸು | ದೇವ | ಬೆಕ್ಕು | ಇಲಿ | ಉ್ಷ | ನಾಭಿ | ಆದಿ | ಪಿಂಗಳ | ಬಿದಿರು | ಹೊರ | ಪು | ಚರ | ತಿರ್ಯಕ್ | ಸುದೃಶ | ಅದಿತಿ |
| ಹು ಹೆ ಹೊ ಡ | ಪುಷ್ಯ | ದೇವ | ಆಡು | ಕಪಿ | ಪೂ್ಷ | ಜಾನು | ಮಧ್ಯ | | ಅಶ್ವತ್ಥ | ಹೊರ | ಪು | ಕ್ಷಿಪ್ರ | ಊರ್ಧ್ವ | ಅಂದ | ಗುರು |
| ಡಿ ಡು ಡೆ ಡೊ | ಆಶ್ಲೇಷ | ರಾಕ್ಷಸ | ಬೆಕ್ಕು | ಇಲಿ | ಮೂ | ಪಾದ | ಅಂತ್ಯ | | ನಾ.ಸಂಪಿಗೆ | ಹೊರ | ಸ್ತ್ರೀ | ತೀಕ್ಷ್ಣ | ಅಧೋ | ಮಂಧ | ಸರ್ಪ |
| ಮ ಮಿ ಮು ಮೆ | ಮಘೆ | ರಾಕ್ಷಸ | ಇಲಿ | ಬೆಕ್ಕು | ರೇ | ಪಾದ | ಅಂತ್ಯ | | ಗೋಳಿ | ಒಳ | ಸ್ತ್ರೀ | ಉಗ್ರ | ಅಧೋ | ಮಧ್ಯ | ಪಿತೃ |
| ಮೊ ಟ ಟಿ ಟು | ಪೂರ್ವೆ | ಮನು | ಇಲಿ | ಬೆಕ್ಕು | ಉ್ಬ | ಜಾನು | ಮಧ್ಯ | | ಪಾಲಾಶ | ಒಳ | ಸ್ತ್ರೀ | ಉಗ್ರ | ಅಧೋ | ಸುದೃಶ | ಆರ್ಯಮ |
| ಟೆ ಟೊ ಪ ಪಿ | ಉತ್ತರಾ | ಮನು | ಎತ್ತು | ಹುಲಿ | ಪೂ್ಬ | ನಾಭಿ | ಆದಿ | | ಪೇರಾಳ | ಒಳ | ಸ್ತ್ರೀ | ಸ್ಥಿರ | ಊರ್ಧ್ವ | ಅಂಧ | ಭಗ |
| ಪು ಷ ಣ ಠ | ಹಸ್ತ | ದೇವ | ಎಮ್ಮೆ | ಕುದುರೆ | ಶ್ತ | ಕಂಠ | ಆದಿ | ಕಾಗೆ | ಅಂಬಟೆ | ಒಳ | ಪು | ಕ್ಷಿಪ್ರ | ತಿರ್ಯಕ್ | ಮಂದ | ರವಿ |
| ಪೆ ಪೊ ರ ರಿ | ಚಿತ್ರಾ | ರಾಕ್ಷಸ | ಹುಲಿ | ಗೋವು | ಧ ಮೃ | ಶಿರ | ಮಧ್ಯ | | ಬಿಲ್ವ | ಹೊರ | ಸ್ತ್ರೀ | ಮೃದು | ತಿರ್ಯಕ್ | ಮಧ್ಯ | ತ್ವಷ್ಟ್ರ |
| ರು ರೆ ರೊ ತ | ಸ್ವಾತಿ | ದೇವ | ಎಮ್ಮೆ | ಕುದುರೆ | ರೋ | ಕಂಠ | ಅಂತ್ಯ | | ಚಲ್ಲಾಂಕ | ಹೊರ | ಸ್ತ್ರೀ | ಚರ | ತಿರ್ಯಕ್ | ಸುದೃಶ | ವಾಯು |
| ತಿ ತು ತೆ ತೊ | ವಿಶಾಖೆ | ರಾಕ್ಷಸ | ಹುಲಿ | ಗೋವು | ಕೃ | ನಾಭಿ | ಅಂತ್ಯ | | ಅಂಕೋಲೆ | ಹೊರ | ಸ್ತ್ರೀ | ಮಿಶ್ರ | ಅಧಃ | ಅಂಧ | ಇಂದ್ರಾಗ್ನಿ |
| ನ ನಿ ನು ನೆ | ಅನುರಾಧೆ | ದೇವ | ಜಿಂಕೆ | ನಾಯಿ | ಭ | ಜಾನು | ಮಧ್ಯ | | ರೆಂಜೆ | ಒಳ | ಪು | ಮೃದು | ತಿರ್ಯಕ್ | ಮಂದ | ಮಿತ್ರ |
| ನೊ ಯ ಯಿ ಯು | ಜ್ಯೇಷ್ಠೆ | ರಾಕ್ಷಸ | ಜಿಂಕೆ | ನಾಯಿ | ಅ್ವ | ಪಾದ | ಆದಿ | ಕೋಳಿ | ಸರಳೆ | ಒಳ | ಸ್ತ್ರೀ | ತೀಕ್ಷ್ಣ | ತಿರ್ಯಕ್ | ಮಧ್ಯ | ಇಂದ್ರ |
| ಯೆ ಯೊ ಬ ಬಿ | ಮೂಲ | ರಾಕ್ಷಸ | ನಾಯಿ | ಜಿಂಕೆ | ಆ್ಲ | ಪಾದ | ಆದಿ | | ದೂಪ | ಒಳ | ನ | ತೀಕ್ಷ್ಣ | ಅಧಃ | ಸುದೃಶ | ನಿರ್ಋತಿ |
| ಬು ಧ ಭ ಢ | ಪೂ.ಷಾಢ | ಮನು | ಕಪಿ | ಆಡು | ಪ್ಯೂ | ಜಾನು | ಮಧ್ಯ | | ನೇರಳೆ | ಒಳ | ಸ್ತ್ರೀ | ಉಗ್ರ | ಅಧಃ | ಅಂಧ | ಜಲ |
| ಬೆ ಬೊ ಜ ಜಿ | ಉ. ಷಾಢ | ಮನು | ಮುಂಗುಲಿ | ಸರ್ಪ | ಪ್ನೂ | ನಾಭಿ | ಅಂತ್ಯ | | ಹಲಸು | ಹೊರ | ಸ್ತ್ರೀ | ಸ್ಥಿರ | ಊರ್ಧ್ವ | ಮಂದ | ವಿಶ್ವೇದೇವ |
| ಶಿ ಶು ಶೆ ಶೊ | ಶ್ರವಣ | ದೇವ | ಕಪಿ | ಆಡು | ಆರ್ | ಕಂಠ | ಅಂತ್ಯ | | ಎಕ್ಕೆ | ಹೊರ | ಪು | ಚರ | ಊರ್ಧ್ವ | ಸುದೃಶ | ವಿಷ್ಣು |
| ಗ ಗಿ ಗು ಗೆ | ಧನಿಷ್ಠೆ | ರಾಕ್ಷಸ | ಸಿಂಹ | ಆನೆ | ಮೃ ಚಿ | ಶಿರ | ಮಧ್ಯ | | ಶಮಿ | ಒಳ | ಸ್ತ್ರೀ | ಚರ | ಊರ್ಧ್ವ | ಅಂದ | ವಸು |
| ಗೊ ಸ ಸಿ ಸು | ಶತಭಿಷೆ | ರಾಕ್ಷಸ | ಕುದುರೆ | ಎಮ್ಮೆ | ಹ್ತ | ಕಂಠ | ಆದಿ | ಮಯೂರ | ಕದಂಬ | ಒಳ | ನ | ಚರ | ಊರ್ಧ್ವ | ಮಂದ | ವರುಣ |
| ಸೆ ಸೊ ದ ದಿ | ಪೂ.ಭಾದ್ರೆ | ಮನು | ಸಿಂಹ | ಆನೆ | ಉ್ತ | ನಾಭಿ | ಆದಿ | | ಮಾವು | ಒಳ | ಪು | ಉಗ್ರ | ಅಧಃ | ಮಧ್ಯ | ಅಜೈಕಪಾತ್ |
| ದು ಜ ಝ ಥ | ಉ.ಭಾದ್ರೆ | ಮನು | ದನ | ಹುಲಿ | ಹುಬ್ಬ | ಜಾನು | ಮಧ್ಯ | | ತಾಳಿ | ಒಳ | ಪು | ಸ್ಥಿರ | ಊರ್ಧ್ವ | ಸುದೃಶ | ಅಹಿರ್ಬುಧ್ನ |
| ದೆ ದೊ ಚ ಚಿ | ರೇವತಿ | ದೇವ | ಆನೆ | ಸಿಂಹ | ಮ | ಪಾದ | ಅಂತ್ಯ | | ಇಪ್ಪೆ | ಹೊರ | ಸ್ತ್ರೀ | ಮೃದು | ತಿರ್ಯಕ್ | ಅಂಧ | ಪೂಷಾ |



## ಸುಲಭದಲ್ಲಿ ತಾರಾಬಲ ತಿಳಿಯುವ ಕೋಷ್ಠಕ

| ನಕ್ಷತ್ರ | ೧ ಜನ್ಮ | ೨ ಸಂಪತ್ತು | ೩ ವಿಪತ್ತು | ೪ ಕ್ಷೇಮ | ೫ ಪ್ರತ್ಯರ | ೬ ಸಾಧಕ | ೭ ವಧೆ | ೮ ಮೈತ್ರ | ೯ ಪರಮಮೈತ್ರ |
|---|---|---|---|---|---|---|---|---|---|
| ಅಶ್ವಿನಿ | ಅ್ವ, ಮ, ಮೂ | ಭ, ಹು, ಪೂಷಾ | ಕೃ, ಉ್ತ, ಉಷಾ | ರೋ, ಹ್ತ, ಶ್ರ | ಮೃ, ಚಿ, ಧ | ಆರ್, ಸ್ವಾ, ಶ್ತ | ಪ್ನ, ವಿ, ಪೂಭಾ | ಪ್ಯ, ಅ್ನ, ಉಭಾ | ಆ್ಲ, ಜ್ಯೇ, ರೇ |
| ಭರಣಿ | ಭ, ಹು, ಪೂಷಾ | ಕೃ, ಉ್ತ, ಉಷಾ | ರೋ, ಹ್ತ, ಶ್ರ | ಮೃ, ಚಿ, ಧ | ಆರ್, ಸ್ವಾ, ಶ್ತ | ಪ್ನ, ವಿ, ಪೂಭಾ | ಪ್ಯ, ಅ್ನ, ಉಭಾ | ಆ್ಲ, ಜ್ಯೇ, ರೇ | ಮ, ಮೂ, ಅ್ವ |
| ಕೃತ್ತಿಕಾ | ಕೃ, ಉ್ತ, ಉಷಾ | ರೋ, ಹ್ತ, ಶ್ರ | ಮೃ, ಚಿ, ಧ | ಆರ್, ಸ್ವಾ, ಶ್ತ | ಪ್ನ, ವಿ, ಪೂಭಾ | ಪ್ಯ, ಅ್ನ, ಉಭಾ | ಆ್ಲ, ಜ್ಯೇ, ರೇ | ಮ, ಮೂ, ಅ್ವ | ಹು, ಪೂಷಾ, ಭ |
| ರೋಹಿಣಿ | ರೋ, ಹ್ತ, ಶ್ರ | ಮೃ, ಚಿ, ಧ | ಆರ್, ಸ್ವಾ, ಶ್ತ | ಪ್ನ, ವಿ, ಪೂಭಾ | ಪ್ಯ, ಅ್ನ, ಉಭಾ | ಆ್ಲ, ಜ್ಯೇ, ರೇ | ಮ, ಮೂ, ಅ್ವ | ಹು, ಪೂಷಾ, ಭ | ಉ್ತ, ಉಷಾ, ಕೃ |
| ಮೃಗಶಿರಾ | ಮೃ, ಚಿ, ಧ | ಆರ್, ಸ್ವಾ, ಶ್ತ | ಪ್ನ, ವಿ, ಪೂಭಾ | ಪ್ಯ, ಅ್ನ, ಉಭಾ | ಆ್ಲ, ಜ್ಯೇ, ರೇ | ಮ, ಮೂ, ಅ್ವ | ಹು, ಪೂಷಾ, ಭ | ಉ್ತ, ಉಷಾ, ಕೃ | ಹ್ತ, ಶ್ರ, ರೋ |
| ಆರ್ದ್ರಾ | ಆರ್, ಸ್ವಾ, ಶ್ತ | ಪ್ನ, ವಿ, ಪೂಭಾ | ಪ್ಯ, ಅ್ನ, ಉಭಾ | ಆ್ಲ, ಜ್ಯೇ, ರೇ | ಮ, ಮೂ, ಅ್ವ | ಹು, ಪೂಷಾ, ಭ | ಉ್ತ, ಉಷಾ, ಕೃ | ಹ್ತ, ಶ್ರ, ರೋ | ಚಿ, ಧ, ಮೃ |
| ಪುನರ್ವಸು | ಪ್ನ, ವಿ, ಪೂಭಾ | ಪ್ಯ, ಅ್ನ, ಉಭಾ | ಆ್ಲ, ಜ್ಯೇ, ರೇ | ಮ, ಮೂ, ಅ್ವ | ಹು, ಪೂಷಾ, ಭ | ಉ್ತ, ಉಷಾ, ಕೃ | ಹ್ತ, ಶ್ರ, ರೋ | ಚಿ, ಧ, ಮೃ | ಸ್ವಾ, ಶ್ತ, ಆರ್ |
| ಪುಷ್ಯ | ಪ್ಯ, ಅ್ನ, ಉಭಾ | ಆ್ಲ, ಜ್ಯೇ, ರೇ | ಮ, ಮೂ, ಅ್ವ | ಹು, ಪೂಷಾ, ಭ | ಉ್ತ, ಉಷಾ, ಕೃ | ಹ್ತ, ಶ್ರ, ರೋ | ಚಿ, ಧ, ಮೃ | ಸ್ವಾ, ಶ್ತ, ಆರ್ | ವಿ, ಪೂಭಾ, ಪ್ನ |
| ಆಶ್ಲೇಷಾ | ಆ್ಲ, ಜ್ಯೇ, ರೇ | ಮ, ಮೂ, ಅ್ವ | ಹು, ಪೂಷಾ, ಭ | ಉ್ತ, ಉಷಾ, ಕೃ | ಹ್ತ, ಶ್ರ, ರೋ | ಚಿ, ಧ, ಮೃ | ಸ್ವಾ, ಶ್ತ, ಆರ್ | ವಿ, ಪೂಭಾ, ಪ್ನ | ಅ್ನ, ಉಭಾ, ಪ್ಯ |
| ಮಖ | ಮ, ಮೂ, ಅ್ವ | ಹು, ಪೂಷಾ, ಭ | ಉ್ತ, ಉಷಾ, ಕೃ | ಹ್ತ, ಶ್ರ, ರೋ | ಚಿ, ಧ, ಮೃ | ಸ್ವಾ, ಶ್ತ, ಆರ್ | ವಿ, ಪೂಭಾ, ಪ್ನ | ಅ್ನ, ಉಭಾ, ಪ್ಯ | ಜ್ಯೇ, ರೇ, ಆ್ಲ |
| ಹುಬ್ಬ | ಹು, ಪೂಷಾ, ಭ | ಉ್ತ, ಉಷಾ, ಕೃ | ಹ್ತ, ಶ್ರ, ರೋ | ಚಿ, ಧ, ಮೃ | ಸ್ವಾ, ಶ್ತ, ಆರ್ | ವಿ, ಪೂಭಾ, ಪ್ನ | ಅ್ನ, ಉಭಾ, ಪ್ಯ | ಜ್ಯೇ, ರೇ, ಆ್ಲ | ಮೂ, ಅ್ವ, ಮ |
| ಉತ್ತರಾ | ಉ್ತ, ಉಷಾ, ಕೃ | ಹ್ತ, ಶ್ರ, ರೋ | ಚಿ, ಧ, ಮೃ | ಸ್ವಾ, ಶ್ತ, ಆರ್ | ವಿ, ಪೂಭಾ, ಪ್ನ | ಅ್ನ, ಉಭಾ, ಪ್ಯ | ಜ್ಯೇ, ರೇ, ಆ್ಲ | ಮೂ, ಅ್ವ, ಮ | ಪೂಷಾ, ಭ, ಹು |
| ಹಸ್ತಾ | ಹ್ತ, ಶ್ರ, ರೋ | ಚಿ, ಧ, ಮೃ | ಸ್ವಾ, ಶ್ತ, ಆರ್ | ವಿ, ಪೂಭಾ, ಪ್ನ | ಅ್ನ, ಉಭಾ, ಪ್ಯ | ಜ್ಯೇ, ರೇ, ಆ್ಲ | ಮೂ, ಅ್ವ, ಮ | ಪೂಷಾ, ಭ, ಹು | ಉಷಾ, ಕೃ, ಉ್ತ |
| ಚಿತ್ರ | ಚಿ, ಧ, ಮೃ | ಸ್ವಾ, ಶ್ತ, ಆರ್ | ವಿ, ಪೂಭಾ, ಪ್ನ | ಅ್ನ, ಉಭಾ, ಪ್ಯ | ಜ್ಯೇ, ರೇ, ಆ್ಲ | ಮೂ, ಅ್ವ, ಮ | ಪೂಷಾ, ಭ, ಹು | ಉಷಾ, ಕೃ, ಉ್ತ | ಶ್ರ, ರೋ, ಹ್ತ |
| ಸ್ವಾತಿ | ಸ್ವಾ, ಶ್ತ, ಆರ್ | ವಿ, ಪೂಭಾ, ಪ್ನ | ಅ್ನ, ಉಭಾ, ಪ್ಯ | ಜ್ಯೇ, ರೇ, ಆ್ಲ | ಮೂ, ಅ್ವ, ಮ | ಪೂಷಾ, ಭ, ಹು | ಉಷಾ, ಕೃ, ಉ್ತ | ಶ್ರ, ರೋ, ಹ್ತ | ಧ, ಮೃ, ಚಿ |
| ವಿಶಾಖ | ವಿ, ಪೂಭಾ, ಪ್ನ | ಅ್ನ, ಉಭಾ, ಪ್ಯ | ಜ್ಯೇ, ರೇ, ಆ್ಲ | ಮೂ, ಅ್ವ, ಮ | ಪೂಷಾ, ಭ, ಹು | ಉಷಾ, ಕೃ, ಉ್ತ | ಶ್ರ, ರೋ, ಹ್ತ | ಧ, ಮೃ, ಚಿ | ಶ್ತ, ಆರ್, ಸ್ವಾ |
| ಅನುರಾಧ | ಅ್ನ, ಉಭಾ, ಪ್ಯ | ಜ್ಯೇ, ರೇ, ಆ್ಲ | ಮೂ, ಅ್ವ, ಮ | ಪೂಷಾ, ಭ, ಹು | ಉಷಾ, ಕೃ, ಉ್ತ | ಶ್ರ, ರೋ, ಹ್ತ | ಧ, ಮೃ, ಚಿ | ಶ್ತ, ಆರ್, ಸ್ವಾ | ಪೂಭಾ, ಪ್ನ, ವಿ |
| ಜ್ಯೇಷ್ಠಾ | ಜ್ಯೇ, ರೇ, ಆ್ಲ | ಮೂ, ಅ್ವ, ಮ | ಪೂಷಾ, ಭ, ಹು | ಉಷಾ, ಕೃ, ಉ್ತ | ಶ್ರ, ರೋ, ಹ್ತ | ಧ, ಮೃ, ಚಿ | ಶ್ತ, ಆರ್, ಸ್ವಾ | ಪೂಭಾ, ಪ್ನ, ವಿ | ಉಭಾ, ಪ್ಯ, ಅ್ನ |
| ಮೂಲ | ಮೂ, ಅ್ವ, ಮ | ಪೂಷಾ, ಭ, ಹು | ಉಷಾ, ಕೃ, ಉ್ತ | ಶ್ರ, ರೋ, ಹ್ತ | ಧ, ಮೃ, ಚಿ | ಶ್ತ, ಆರ್, ಸ್ವಾ | ಪೂಭಾ, ಪ್ನ, ವಿ | ಉಭಾ, ಪ್ಯ, ಅ್ನ | ರೇ, ಆ್ಲ, ಜ್ಯೇ |
| ಪೂರ್ವಾಷಾಢಾ | ಪೂಷಾ, ಭ, ಹು | ಉಷಾ, ಕೃ, ಉ್ತ | ಶ್ರ, ರೋ, ಹ್ತ | ಧ, ಮೃ, ಚಿ | ಶ್ತ, ಆರ್, ಸ್ವಾ | ಪೂಭಾ, ಪ್ನ, ವಿ | ಉಭಾ, ಪ್ಯ, ಅ್ನ | ರೇ, ಆ್ಲ, ಜ್ಯೇ | ಅ್ವ, ಮ, ಮೂ |
| ಉತ್ತರಾಷಾಢಾ | ಉಷಾ, ಕೃ, ಉ್ತ | ಶ್ರ, ರೋ, ಹ್ತ | ಧ, ಮೃ, ಚಿ | ಶ್ತ, ಆರ್, ಸ್ವಾ | ಪೂಭಾ, ಪ್ನ, ವಿ | ಉಭಾ, ಪ್ಯ, ಅ್ನ | ರೇ, ಆ್ಲ, ಜ್ಯೇ | ಅ್ವ, ಮ, ಮೂ | ಭ, ಹು, ಪೂಷಾ |
| ಶ್ರವಣ | ಶ್ರ, ರೋ, ಹ್ತ | ಧ, ಮೃ, ಚಿ | ಶ್ತ, ಆರ್, ಸ್ವಾ | ಪೂಭಾ, ಪ್ನ, ವಿ | ಉಭಾ, ಪ್ಯ, ಅ್ನ | ರೇ, ಆ್ಲ, ಜ್ಯೇ | ಅ್ವ, ಮ, ಮೂ | ಭ, ಹು, ಪೂಷಾ | ಕೃ, ಉ್ತ, ಉಷಾ |
| ಧನಿಷ್ಠಾ | ಧ, ಮೃ, ಚಿ | ಶ್ತ, ಆರ್, ಸ್ವಾ | ಪೂಭಾ, ಪ್ನ, ವಿ | ಉಭಾ, ಪ್ಯ, ಅ್ನ | ರೇ, ಆ್ಲ, ಜ್ಯೇ | ಅ್ವ, ಮ, ಮೂ | ಭ, ಹು, ಪೂಷಾ | ಕೃ, ಉ್ತ, ಉಷಾ | ರೋ, ಹ್ತ, ಶ್ರ |
| ಶತಭಿಷಾ | ಶ್ತ, ಆರ್, ಸ್ವಾ | ಪೂಭಾ, ಪ್ನ, ವಿ | ಉಭಾ, ಪ್ಯ, ಅ್ನ | ರೇ, ಆ್ಲ, ಜ್ಯೇ | ಅ್ವ, ಮ, ಮೂ | ಭ, ಹು, ಪೂಷಾ | ಕೃ, ಉ್ತ, ಉಷಾ | ರೋ, ಹ್ತ, ಶ್ರ | ಮೃ, ಚಿ, ಧ |
| ಪೂರ್ವಾಭಾದ್ರಾ | ಪೂಭಾ, ಪ್ನ, ವಿ | ಉಭಾ, ಪ್ಯ, ಅ್ನ | ರೇ, ಆ್ಲ, ಜ್ಯೇ | ಅ್ವ, ಮ, ಮೂ | ಭ, ಹು, ಪೂಷಾ | ಕೃ, ಉ್ತ, ಉಷಾ | ರೋ, ಹ್ತ, ಶ್ರ | ಮೃ, ಚಿ, ಧ | ಆರ್, ಸ್ವಾ, ಶ್ತ |
| ಉತ್ತರಾಭಾದ್ರಾ | ಉಭಾ, ಪ್ಯ, ಅ್ನ | ರೇ, ಆ್ಲ, ಜ್ಯೇ | ಅ್ವ, ಮ, ಮೂ | ಭ, ಹು, ಪೂಷಾ | ಕೃ, ಉ್ತ, ಉಷಾ | ರೋ, ಹ್ತ, ಶ್ರ | ಮೃ, ಚಿ, ಧ | ಆರ್, ಸ್ವಾ, ಶ್ತ | ಪ್ನ, ವಿ, ಪೂಭಾ |
| ರೇವತಿ | ರೇ, ಆ್ಲ, ಜ್ಯೇ | ಅ್ವ, ಮ, ಮೂ | ಭ, ಹು, ಪೂಷಾ | ಕೃ, ಉ್ತ, ಉಷಾ | ರೋ, ಹ್ತ, ಶ್ರ | ಮೃ, ಚಿ, ಧ | ಆರ್, ಸ್ವಾ, ಶ್ತ | ಪ್ನ, ವಿ, ಪೂಭಾ | ಪ್ಯ, ಅ್ನ, ಉಭಾ |

(ಸಮ ಸಂಖ್ಯೆಗಳ ನಕ್ಷತ್ರ ಸಾಮಾನ್ಯ ಎಲ್ಲ ಕಾರ್ಯಗಳಿಗೆ ಶುಭವೆನಿಸುವುದು)

## ವಿವಾಹೋಪಯುಕ್ತವಾದ ಅಷ್ಟ ಕೂಟಗಳು

ಗ್ರಹಮೈತ್ರ ರಾಶಿ ದಿನ ನಾಡೀ ಗಣ ಇವುಗಳನ್ನು ಎಲ್ಲಾ ವರ್ಣದವರೂ ಅವಶ್ಯವಾಗಿ ನೋಡಬೇಕು. ಬ್ರಾಹ್ಮಣರಿಗೆ ಗ್ರಹಮೈತ್ರ, ಕ್ಷತ್ರಿಯರಿಗೆ ಗಣ, ವೈಶ್ಯರಿಗೆ ಸ್ತ್ರೀದೀರ್ಘ, ಶೂದ್ರರಿಗೆ ಯೋನಿ ಕೂಟ ಇವುಗಳನ್ನು ಮುಖ್ಯವಾಗಿ ಗಮನಿಸಬೇಕು. ಕೂಟಗಳನ್ನು ನೋಡಬೇಕಾದರೆ ವಧೂವರರಿಬ್ಬರಿಗೂ ಜನ್ಮನಕ್ಷತ್ರಗಳಿರಬೇಕು. ಅಥವಾ ಇಬ್ಬರಿಗೂ ನಾಮ ನಕ್ಷತ್ರದಿಂದ ನೋಡಬೇಕು. ವರನ ಜನ್ಮನಕ್ಷತ್ರಕ್ಕೂ ಕನ್ಯೆಯ ನಾಮನಕ್ಷತ್ರಕ್ಕೂ ನೋಡಬಹುದು. ಕನ್ಯೆಯ ಜನ್ಮನಕ್ಷತ್ರಕ್ಕೂ ವರನ ನಾಮನಕ್ಷತ್ರಕ್ಕೂ ನೋಡಕೂಡದು.

**೧) ದಿನ ಕೂಟ :** ಕನ್ಯೆಯ ನಕ್ಷತ್ರ ಮೊದಲು ವರನ ನಕ್ಷತ್ರದವರೆಗೆ ( ಎರಡೂ ಸೇರಿ) ಒಂಭಂತ್ತೊಂಭತ್ತಾಗಿ ಎಣಿಸುವಾಗ ಪುರುಷನ ನಕ್ಷತ್ರವು ೨,೪,೬,೮,೯ ಆದರೆ ಉತ್ತಮ (ಗುಣ ೩), ಹಾಗೆ ಎಣಿಸಿದಾಗ ೧,೩,೫,೭, ಬರುವುದು ಅನಿಷ್ಟ. (ವರನ ನಕ್ಷತ್ರದಿಂದ ಎಣಿಸುವುದೂ ಕೆಲವರಲ್ಲಿ ರೂಢಿಯಿದೆ. ಆಗ ಒಬ್ಬರ ನಕ್ಷತ್ರದಿಂದ ಎಣಿಸುವಾಗ ಶುಭವೂ ಇನ್ನೊಬ್ಬರ ನಕ್ಷತ್ರದಿಂದ ಎಣಿಸುವಾಗ ಅಶುಭವೂ ಆಗಿದ್ದರೆ ಮಧ್ಯಮ.)

**೨) ಗಣಕೂಟ :** ಅಶ್ವಿನೀ ಮೃಗಶಿರಾ ಪುನರ್ವಸು ಪುಷ್ಯ ಹಸ್ತ ಸ್ವಾತೀ ಅನೂರಾಧಾ ಶ್ರವಣಾ ರೇವತಿ ಇವು ಒಂಭತ್ತು **ದೇವಗಣ.**

ಭರಣೀ, ರೋಹಿಣಿ, ಆರ್ದ್ರಾ, ಪೂರ್ವಫಲ್ಗುನೀ, ಉತ್ತರ ಫಲ್ಗುನೀ, ಪೂರ್ವಾಷಾಡಾ, ಉತ್ತರಾಷಾಢಾ, ಪೂರ್ವಾಭಾದ್ರ, ಉತ್ತರಾಭಾದ್ರಾ ಈ ಒಂಭತ್ತು **ಮನುಷ್ಯಗಣ.**

ಕೃತ್ತಿಕಾ, ಆಶ್ಲೇಷಾ, ಮಖಾ, ವಿಶಾಖಾ, ಜ್ಯೇಷ್ಠಾ ಮೂಲಾ ಧನಿಷ್ಠಾ ಶತಭಿಷಾ ಇವು ಒಂಭತ್ತು **ರಾಕ್ಷಸಗಣ.** ವಧೂವರರ ನಕ್ಷತ್ರಗಳು ಒಂದೇ ಗಣವಾಗಿದ್ದರೆ ಉತ್ತಮ (ಗು. ೬) ದೇವ ಮನುಷ್ಯಗಣವಾದರೆ ಮಧ್ಯಮ (ಗು. ೫) ದೇವ ರಾಕ್ಷಸ ಗಣವಾದರೆ ಅಧಮ (ಗು. ೧) ಮನುಷ್ಯ ರಾಕ್ಷಸ ಗಣವಾದರೆ ಮೃತ್ಯು (ಗು. ೦) (ಸ್ತ್ರೀ ರಾಕ್ಷಸ ಗಣವಾದರೆ ಪುರುಷ ರಾಕ್ಷಸ ಗಣವೇ ಆಗಬೇಕು. (ಗು. ೬))

**೩. ಯೋನಿ ಕೂಟ :** ಅಶ್ವಿನಿ (ಪು) - ಶತಭಿಷಾ, ಕುದುರೆ (ಸ್ತ್ರೀ); ಭರಣೀ (ಪು) - ರೇವತೀ, ಆನೆ (ಸ್ತ್ರೀ); ಕೃತ್ತಿಕಾ (ಪು) - ಪುಷ್ಯ, ಆಡು (ಸ್ತ್ರೀ) ರೋಹಿಣೀ (ಪು) - ಮೃಗಶಿರಾ, ಹಾವು (ಸ್ತ್ರೀ); ಮೂಲ (ಪು) - ಆರ್ದ್ರಾ, ನಾಯಿ (ಸ್ತ್ರೀ); ಮಖಾ (ಪು) - ಪುಷ್ಯ, ಇಲಿ(ಸ್ತ್ರೀ); ಆಶ್ಲೇಷಾ (ಪು)-ಪುನರ್ವಸು, ಬೆಕ್ಕು(ಸ್ತ್ರೀ) ಸ್ವಾತೀ (ಪು) - ಹಸ್ತಾ, ಎಮ್ಮೆ (ಸ್ತ್ರೀ); ವಿಶಾಖಾ (ಪು) - ಚಿತ್ರಾ, ಹುಲಿ (ಸ್ತ್ರೀ); ಜೇಷ್ಠಾ (ಪು) - ಅನು, ಜಿಂಕೆ (ಸ್ತ್ರೀ); ಉ.ಫ. (ಪು) - ಉ. ಭಾ., ಹಸು (ಸ್ತ್ರೀ); ಅಭಿಜಿತ್ (ಪು) - ಉ. ಷಾ., ಮುಂಗುಸಿ (ಸ್ತ್ರೀ); ಪೂ. ಷಾ. (ಪು) - ಶ್ರವಣ, ಕಪಿ (ಸ್ತ್ರೀ); ಪೂ. ಭಾ. (ಪು) - ಧನಿಷ್ಠಾ, ಸಿಂಹ.

ಇಲ್ಲಿ ಹೇಳಲ್ಪಟ್ಟ ಎರಡೆರಡು ನಕ್ಷತ್ರಗಳಲ್ಲಿ ಮೊದಲನೆಯದು ಪುರುಷನ ನಕ್ಷತ್ರವಾಗಿದ್ದರೆ ಉತ್ತಮ. ಸ್ತ್ರೀ ಪುರುಷರು ಒಂದೇ ಪ್ರಾಣಿಯಾಗಿದ್ದರೂ ಉತ್ತಮ (ಗು. ೪) ಬೇರೆ ಪ್ರಾಣಿಯಾಗಿದ್ದು ವೈರವಿಲ್ಲದಿದ್ದರೆ ಮಧ್ಯಮ. (ಗು. ೨) ವೈರ ಯೋನಿ ಎಂದಿಗೂ ಆಗದು.

**ವೈರ ಪ್ರಾಣಿಗಳು :** ಗೋವು - ಹುಲಿ; ಆನೆ - ಸಿಂಹ, ಕುದುರೆ - ಎಮ್ಮೆ, ನಾಯಿ-ಜಿಂಕೆ, ಮುಂಗಿಸಿ - ಹಾವು, ಕೋತಿ - ಮೇಕೆ, ಬೆಕ್ಕು - ಇಲಿ ಇವುಗಳಿಗೆ ಗುಣ (೧)

**೪) ರಾಶಿ ಕೂಟ :** ಸ್ತ್ರೀರಾಶಿಯಿಂದ ಪುರುಷ ರಾಶಿಯು ೨,೬,೯ ಆದರೆ ಅಶುಭವು. ಸ್ತ್ರೀ ಪುರುಷರ ರಾಶಿಗಳು ಒಂದೇ ಆಗಿದ್ದರೂ ಅಥವಾ ಪರಸ್ಪರ ಮೂರು ನಾಲ್ಕು ಏಳನೇ ರಾಶಿಗಳಾದರೂ ಉತ್ತಮವು. ಸ್ತ್ರೀ - ಪುರುಷ - ರಾಶಿಗಳ ಅಧಿಪತಿಯು ಒಬ್ಬನೇ ಆದರೂ ಅಥವಾ ರಾಶ್ಯಧಿಪತಿಗಳಿಗೆ ಪರಸ್ಪರ ಮಿತ್ರತ್ವವಿದ್ದರೂ ಶುಭವು. ಸ್ತ್ರೀ ರಾಶಿಯಿಂದ ಪುರುಷ ರಾಶಿಯು ೫ನೆಯದ್ದಾಗಿದ್ದರೂ ಶುಭವೆಂದು ಕೆಲವರ ಮತ. (ಗುಣ ೭)



**೫) ಗ್ರಹಮೈತ್ರ ಕೂಟ :** ರಾಶ್ಯಧಿಪತಿಗಳು: ಮೇಷ ವೃಶ್ಚಿಕಗಳಿಗೆ ಕುಜ, ವೃಷಭ, ತುಲಾಗಳಿಗೆ ಶುಕ್ರ, ಮಿಥುನ, ಕನ್ಯೆಗಳಿಗೆ ಬುಧ, ಕಟಕಕ್ಕೆ ಚಂದ್ರ, ಸಿಂಹಕ್ಕೆ ಸೂರ್ಯ, ಧನು ಮೀನಗಳಿಗೆ ಗುರು, ಮಕರ ಕುಂಭಗಳಿಗೆ ಶನಿ, ವಧೂವರರ ಜನ್ಮಲಗ್ನಗಳಿಂದಲೂ ಗ್ರಹಮೈತ್ರ ಕೂಟವನ್ನು ನೋಡುವ ವಾಡಿಕೆಯುಂಟು.

| ಗ್ರಹ | ಶತ್ರು | ಮಿತ್ರ |
|---|---|---|
| ರವಿ | ಶನಿ, ಶುಕ್ರ | ಚಂ. ಕು. ಗು. |
| ಚಂದ್ರ | ---- | ರವಿ, ಬುಧ. |
| ಕುಜ | ಬುಧ | ಗು. ಚಂ. ರ. |
| ಬುಧ | ಚಂದ್ರ | ರವಿ, ಶುಕ್ರ |
| ಗುರು | ಬುಧ, ಶುಕ್ರ | ರ. ಚಂ. ಕು. |
| ಶುಕ್ರ | ರವಿ, ಚಂದ್ರ | ಬು, ಶ. |
| ಶನಿ | ರ, ಚಂ, ಕು. | ಬು, ಶು. |

**ಶತ್ರು ಅಥವಾ ಮಿತ್ರರಲ್ಲದವರು ಸಮರೆನಿಸುವರು:** ಸ್ತ್ರೀ ಪುರುಷರ ರಾಶ್ಯಧಿಪತಿಗಳು ಪರಸ್ಪರ ಮಿತ್ರರಾಗಿದ್ದರೆ ಉತ್ತಮ (ಗು.೫) ಒಬ್ಬನು ಮಿತ್ರ ಇನ್ನೊಬ್ಬನು ಸಮನಾಗಿದ್ದರೆ ಮಧ್ಯಮ. (ಗು.೪). ಇಬ್ಬರೂ ಸಮರಾದರೆ (ಗು.೨). ಒಬ್ಬನು ಸಮ ಇನ್ನೊಬ್ಬನು ಶತ್ರುವಾದರೆ ಅಧಮ(ಗು. ೧) ಅನ್ಯೋನ್ಯ ಶತ್ರುಗಳಾದರೆ (ಗುಣ೦) ಏಕಾಧಿಪತ್ಯವಾದರೆ (ಗು. ೬)

**೬) ವಶ್ಯಕೂಟ :** ಮೇಷಕ್ಕೆ ಸಿಂಹ, ವೃಶ್ಚಿಕ, ವೃಷಭಕ್ಕೆ ಕಟಕ, ತುಲಾ, ಮಿಥುನಕ್ಕೆ ಕನ್ಯಾ, ಕಟಕಕ್ಕೆ ವೃಶ್ಚಿಕ, ಧನುಸ್ಸು, ಸಿಂಹಕ್ಕೆ ತುಲಾ, ಕನ್ಯೆಗೆ ಮೀನ, ಮಿಥುನ, ತುಲೆಗೆ ಮಕರ. ಕನ್ಯಾ ವೃಶ್ಚಿಕಕ್ಕೆ ಕಟಕ. ಧನುಸ್ಸಿಗೆ ಮೀನ, ಮಕರಕ್ಕೆ ಮೇಷ, ಕುಂಭಕ್ಕೆ ಮೇಷ, ಮೀನಕ್ಕೆ ಮಕರ, ಈ ರೀತಿ ವಶ್ಯಗಳು ಸ್ತ್ರೀ ಪುರುಷರ ರಾಶಿಗಳು ವಶ್ಯಗಳಾಗಿದ್ದರೆ ಉತ್ತಮ (ಗು. ೨)

**೭) ವರ್ಣಕೂಟ :** ಕಟಕ ವೃಶ್ಚಿಕ ಮೀನ ರಾಶಿಗಳು ಬ್ರಾಹ್ಮಣರಾಶಿಗಳು, ಮೇಷ ಸಿಂಹ ಧನುಸ್ಸು ರಾಶಿಗಳು ಕ್ಷತ್ರಿಯರಾಶಿಗಳು. ವೃಷಭ, ಕನ್ಯಾ ಮಕರ ರಾಶಿಗಳು. ಮಿಥುನ ತುಲಾ ಕುಂಭ ರಾಶಿಗಳು ಶೂದ್ರ ರಾಶಿಗಳು. ಕನ್ಯೆಯ ರಾಶಿಗಿಂತ ಪುರುಷನ ರಾಶಿಯು ಉತ್ತಮವಾಗಿದ್ದರೆ ಶುಭವು (ಗುಣ ೧)

**೮) ನಾಡೀ ಕೂಟ :** ಅಶ್ವಿನೀ, ಆರ್ದ್ರಾ, ಪುನರ್ವಸು, ಉತ್ತರ ಫಲ್ಗುನೀ, ಹಸ್ತ, ಜ್ಯೇಷ್ಠಾ, ಮೂಲಾ, ಶತಭಿಷಾ, ಪೂರ್ವಾಭಾದ್ರ ಇವು ಪ್ರಥಮ ಪಾರ್ಶ್ವನಾಡಿ. ಭರಣೀ, ಮೃಗಶಿರಾ, ಪುಷ್ಯ, ಪೂರ್ವಫಲ್ಗುನೀ, ಚಿತ್ರಾ, ಅನುರಾಧಾ, ಪೂರ್ವಾಷಾಡಾ, ಧನಿಷ್ಠಾ, ಉತ್ತರಾಭಾದ್ರಾ ಇವು ಮಧ್ಯಮನಾಡಿ. ಕೃತ್ತಿಕಾ, ರೋಹಿಣೀ, ಆಶ್ಲೇಷಾ, ಮಖಾ, ಸ್ವಾತೀ, ವಿಶಾಖಾ, ಉತ್ತರಾಷಾಢಾ, ಶ್ರವಣ, ರೇವತೀ ಇವು ತೃತೀಯ ಪಾರ್ಶ್ವನಾಡಿ. ದಂಪತಿಗಳ ನಕ್ಷತ್ರಗಳು ಒಂದೇ ನಾಡಿಯಲ್ಲಿರಕೂಡದು. ಒಂದೇ ನಾಡಿಯಾದರೂ ಒಂದೇ ರಾಶಿಯಾಗಿ ಬೇರೆ ನಕ್ಷತ್ರವಾಗಿದ್ದರೂ ಅಥವಾ ಒಂದೇ ನಕ್ಷತ್ರವಾಗಿ ಭಿನ್ನರಾಶಿಯಾಗಿದ್ದರೂ ನಕ್ಷತ್ರ ಒಂದೇ ಇದ್ದು ಚರಣ ಭೇದವಾದರೂ ನಾಡೀ ದೋಷವಿಲ್ಲ. ವಿವಾಹವು ಶುಭವು (ಗುಣ ೮)

**ಪಂಚಕೂಟಗಳು :** ರೇವತಿಯಿಂದ ಮೃಗಶಿರದವರೆಗೆ ಸ್ವರ್ಣಪಾದ - ಚಿಂತಾ; ಆರ್ದ್ರಾದಿಂದ ಸ್ವಾತಿವರೆಗೆ ರಜತಪಾದ, ಧನಲಾಭ; ವಿಶಾಖಾ, ಅನೂರಾಧ, ಜ್ಯೇಷ್ಠಾ ಮೂಲಾ ಲೋಹಪಾದ ದುಃಖ. ಪೂ. ಷಾ. ದಿಂದ ಉ. ಭಾ. ದವರೆಗೆ ತಾಮ್ರಪಾದ, ಶುಭಪ್ರದ.

ಶೂದ್ರಾದಿಗಳಿಗೆ ಪಾದ, ಯೋನಿ, ಗಣ, ರಾಶಿ, ನಾಡಿ ಈ ಐದು ಕೂಟಗಳನ್ನು ಮಾತ್ರ ನೋಡಬೇಕು.

**ಮಹಾನಕ್ಷತ್ರ :** ವಧೂವರರ ನಕ್ಷತ್ರಗಳಲ್ಲಿ ಯಾರೊಬ್ಬರ ನಕ್ಷತವಾದರೂ ಮೃಗಶಿರಾ ಮಖಾ ಸ್ವಾತೀ ಅನುರಾಧಾ ಇವುಗಳಲ್ಲೊಂದು ನಕ್ಷತವಾಗಿದ್ದರೆ ಅಂತಹ ವಧೂವರರಿಗೆ ಯಾವ ಕೂಟವನ್ನೂ ಪರಿಗಣಿಸದೇ ವಿವಾಹವನ್ನು ನಡೆಸಬಹುದೆಂದು ಶಾಸ್ತ್ರದಲ್ಲಿ ಉಕ್ತವಾಗಿದೆ.

**ದಂಪತಿಗಳ ಏಕನಕ್ಷತ್ರ ವಿಚಾರ :** ಮೃಗಶಿರಾ, ಚಿತ್ರಾ, ಧನಿಷ್ಠಾ ಇವುಗಳಲ್ಲೊಂದಾದರೆ ರೋಗಭಾಧೆ, ಕೃತ್ತಿಕಾ, ಪುನರ್ವಸು, ಉತ್ತರಫಲ್ಗುನೀ,

ವಿಶಾಖಾ, ಉತ್ತರಾಷಾಢಾ ಇವುಗಳಲ್ಲೊಂದಾದರೆ ಮೃತ್ಯುಭಯ. ಮಿಕ್ಕ ನಕ್ಷತ್ರಗಳಲ್ಲೊಂದಾದರೆ ಶುಭ ಎಂದು ಒಂದು ವಚನವಿದೆ. ಪೂರ್ವಾಭಾದ್ರಾ, ಸ್ವಾತೀ, ಹಸ್ತಾ, ಆಶ್ಲೇಷಾ, ಶ್ರವಣ, ಪುಷ್ಯ, ಜ್ಯೇಷ್ಠಾ ಈ ನಕ್ಷತ್ರಗಳಲ್ಲೊಂದು ವಧೂವರರ ಏಕನಕ್ಷತ್ರವಾಗಿದ್ದರೂ ದೋಷವಿಲ್ಲ. ವಿವಾಹವನ್ನು ನಡೆಸಬಹುದು ಎಂದು ಒಂದು ವಚನವಿದೆ.

**ಸ್ತ್ರೀ ಪೂರ್ವನಕ್ಷತ್ರ ವಿಚಾರ:** ರೋಹಿಣೀ ಹಸ್ತಾ ವಿಶಾಖಾ ಅನೂರಾಧಾ ಮೂಲ ಅಶ್ವಿನೀ ಮೃಗಶಿರಾ ಶತಭಿಷಾ ಪೂರ್ವಾಷಾಢಾ ಕೃತ್ತಿಕಾ ಪುನರ್ವಸು ಇವುಗಳಲ್ಲೊಂದು ವರನ ನಕ್ಷತ್ರವಾದರೆ ವಧುವಿನ ನಕ್ಷತ್ರವು ಅದರ ಮೊದಲನೆ ನಕ್ಷತ್ತವಾಗಿದ್ದರೂ ದೋಷವಿಲ್ಲ. ವಿವಾಹವನ್ನು ಮಾಡಬಹುದು.

**ಸ್ತ್ರೀಪೂರ್ವಪಾದ ವಿಚಾರ :** ಅಶ್ವಿನೀ ಕೃತ್ತಿಕಾ ಮೃಗಶಿರಾ ಮಘಾ ಹಸ್ತಾ ಸ್ವಾತೀ ಪೂರ್ವಾಷಾಢಾ ಶತಭಿಷಾ ಇವುಗಳಲ್ಲಿ ಕನ್ಯೆಯದು ಪೂರ್ವಪಾದವಾಗಿಯೂ ವರನದು ಅದರ ಮುಂದಿನ ಪಾದವಾಗಿಯೂ ಇದ್ದರೂ ವಧೂವರರ ರಾಶಿಗಳು ಒಂದೇ ಆದ ಪಕ್ಷದಲ್ಲಿ ದೋಷವಿಲ್ಲ. ವಿವಾಹವನ್ನು ಮಾಡಬಹುದು.

**ದುಷ್ಟ ನಕ್ಷತ್ರ ಜನನ ವಿಚಾರ :** ಅಶ್ವಿನೀ ಮಘಾ ಮೂಲಾ ಈ ನಕ್ಷತ್ರಗಳ ೧ನೇ ಚರಣದಲ್ಲಿ ಶಿಶುವು ಹುಟ್ಟಿದರೆ ತಂದೆಗೆ ಗಂಡ. ೨ನೇ ಚರಣದಲ್ಲಿ ತಾಯಿಗೆ ಗಂಡ. ೩ನೇ ಚರಣದಲ್ಲಿ ದ್ರವ್ಯಹಾನಿ. ೪ನೇ ಪಾದದಲ್ಲಿ ಶುಭ. ಆಶ್ಲೇಷಾ ಜ್ಯೇಷ್ಠಾ, ರೇವತೀ ನಕ್ಷತ್ರ೧ನೇ ಚರಣವು ಶುಭ, ೨ನೇ ಚರಣದಲ್ಲಿ ಧನನಾಶ. ೩ನೇ ಪಾದದಲ್ಲಿ ತಾಯಿಗೆ ಗಂಡ. ೪ನೇ ಚರಣದಲ್ಲಿ ತಂದೆಗೆ ಗಂಡ. ಜ್ಯೇಷ್ಠಾಂತ್ಯದಲ್ಲಿ ೨ ಘಳಿಗೆ ಮೂಲಾದಿಯಲ್ಲಿ ೨ಘಳಿಗೆ ಇವುಗಳು ಅಭುಕ್ತಮೂಲವೆನಿಸುತ್ತವೆ. ಇವುಗಳಲ್ಲಿ ಹುಟ್ಟಿದ ಮಗುವಿಗೂ ತಂದೆ ತಾಯಿಗಳಿಗೂ ಗಂಡ. ಪುಷ್ಯ ನಕ್ಷತ್ರ ೨, ೩ ನೇ ಚರಣ, ಉತ್ತರ ಫಲ್ಗುನೀ೧ನೇಚರಣ ಪೂರ್ವಾಷಾಢಾ ೩ನೇ ಚರಣದಲ್ಲಿ ಇವುಗಳಲ್ಲಿ ಗಂಡು ಜನಿಸಿದರೆ ತಂದೆಗೂ, ಹೆಣ್ಣು ಜನಿಸಿದರೆ ತಾಯಿಗೂ ಅನಿಷ್ಟವಾಗುವುದು.



ಪುಷ್ಯನಕ್ಷತ್ರಕ್ಕೆ ೩ತಿಂಗಳು ದೋಷ. ಕರುಸಹಿತ ಆಕಳಿನ ದಾನ ಉತ್ತರ ಫಲ್ಗುನಿಗೆ ೨ತಿಂಗಳು ದೋಷ. ಎಳ್ಳು ತುಂಬಿದ ಪಾತ್ರೆಯ ದಾನ, ಪೂರ್ವಾಷಾಢಕ್ಕೆ ೮ ತಿಂಗಳು ದೊಷ, ಬಂಗಾರ ಅಥವಾ ವಸ್ತ್ರದಾನ, ಚಿತ್ರಾಕ್ಕೆ ೬ ತಿಂಗಳು ದೋಷ. ಕುರಿ ಅಥವಾ ಕಂಬಳಿ ದಾನ, ಅಶ್ವಿನೀ ಮಘೇ ರೇವತಿಗಳಿಗೆ ೩ ತಿಂಗಳು ದೋಷ. ಬಂಗಾರ ನವಧಾನ್ಯ ವಸ್ತ್ರದಾನ, ಆಶ್ಲೇಷಕ್ಕೆ ೮ತಿಂಗಳೂ ಜ್ಯೇಷ್ಠಕ್ಕೆ ೧೬ ತಿಂಗಳೂ ಮೂಲಕ್ಕೆ ೮ ವರ್ಷಗಳೂ ದೋಷ. ಇವುಗಳಿಗೆ ಗೋಮುಖಪ್ರಸವ ಶಾಂತಿ ತತ್ತನ್ನ ಕ್ಷತ್ರಶಾಂತಿ ಮತ್ತು ನವಗ್ರಹದಾನಗಳನ್ನು ಮಾಡತಕ್ಕದ್ದು. ಶಾಂತಿ ಮಾಡಿದನಂತರವೇ ತಂದೆಯು ಶಿಶುವಿನ ಮುಖವನ್ನು ನೋಡಬೇಕು.

**ಸ್ತ್ರೀ ಜನ್ಮ ನಕ್ಷತ್ರ ದೋಷ ವಿಚಾರ :** ಮೂಲ ನಕ್ಷತ್ರದಲ್ಲಿ ಹುಟ್ಟಿದ ಸ್ತ್ರೀಯು ಮಾವನಿಗೂ ಆಶ್ಲೇಷಾ ನಕ್ಷತ್ರದವಳು ಅತ್ತೆಗೂ ದೋಷಕಾರಳು ಎಂದು ಸಾಮಾನ್ಯವಾಗಿ ಹೇಳಿದೆ ಆದರೂ ಮೂಲನಕ್ಷತ್ರ೧,೨,೩ ಪಾದಗಳಲ್ಲಿ ಹುಟ್ಟಿದರೆ ಮಾವನಿಗೆ, ಆಶ್ಲೇಷಾ ೨, ೩, ೪, ಪಾದಗಳಲ್ಲಿ ಹುಟ್ಟಿದರೆ ಅತ್ತೆಗೂ, ವಿಶಾಖಾ ನಕ್ಷತ್ರ ೪ನೇ ಪಾದದಲ್ಲಿ ಹುಟ್ಟಿದವಳು ಮೈದುನನಿಗೂ ಜ್ಯೇಷ್ಠಾ ನಕ್ಷತ್ರ ೪ನೇ ಪಾದದವಳು ಗಂಡನ ಅಣ್ಣನಿಗೂ, ದುಷ್ಫಲಪ್ರದಳಾಗುತ್ತಾಳೆ. ಮೇಲೆ ಹೇಳಿದ ನಕ್ಷತ್ರ ದೋಷವು ಸ್ತ್ರೀಯರಿಗೆ ಹೊರತು ಪುರುಷರಿಗೆ ಇಲ್ಲ. ಜನ್ಮ ಜಾತಕದಲ್ಲಿ ಶುಭಯೋಗವಿದ್ದರೆ ಈ ದೋಷಗಳಿಗೆ ಪ್ರಾಬಲ್ಯವಿರುವುದಿಲ್ಲ. ಮೇಲೆ ಹೇಳಿದ ನಕ್ಷತ್ರಗಳಿಂದ ಯಾವ ಭಾವಕ್ಕೆ ದೋಷವು ಯುಕ್ತವಾಗಿದೆಯೋ ಆ ಭಾವಗಳ ಅಧಿಪತಿಗಳು ೬ನೇ ಮನೆಯಲ್ಲಾಗಲೀ ಅಥವಾ ಶುಭಸ್ಥಾನಗಳಲ್ಲಾಗಲೀ ಇದ್ದರೆ ಶುಭಗ್ರಗಳಿಂದ ನೋಡಲ್ಪಟ್ಟಿದ್ದರೆ, ಬಲಶಾಲಿಗಳಾಗಿದ್ದರೆ, ಆ ಭಾವವಾಗಲೀ ಚಂದ್ರನಾಗಲೀ ಭಾವಾಧಿಪನಾಗಲೀ ಬಲಿಷ್ಠನಾಗಿದ್ದರೆ, ಆ ಭಾವಗಳಿಗೆ ಹೇಳಿರುವ ಎಲ್ಲಾ ದೋಷಗಳೂ ನಾಶವಾಗುವವು ಎಂದು ಹೇಳಿದೆ.

★



## ವಿವಾಹಾದಿ ಮುಹೂರ್ತಗಳಿಗೆ ಅಪವಾದ ಪ್ರಮಾಣಗಳು

ಉಕ್ತಾನುಕ್ತಾಶ್ಚಯೇ ದೋಷಾಸ್ತಾನ್ನಿಹಂತಿ ಬಲೀಗುರುಃ ।
ಕೇಂದ್ರ ಸಂಸ್ಥಃ ಸಿತೋವಾಪಿ ಪನ್ನಗಾನ್ ಗರುಡೋಯಥಾ ॥೧॥
ಕಾವ್ಯೇ ಗುರೌ ಸೌಮ್ಯೇ ವಾ ಯದಾ ಕೇಂದ್ರ ತ್ರಿಕೋಣಗೇ ।
ನಾಶಂ ಯಾಂತ್ಯಖಿಲಾ ದೋಷಾಃ ಪಾಪಾನಿವ ಹರೌಸ್ಮೃತೇ ॥೨॥

### ಸಪ್ತಮಾಷ್ಟಮ ಲಗ್ನದಲ್ಲಿ ಶನಿ - ರಾಹು, ಕೇತುಗಳಿದ್ದರೆ

ಉಪರಾಗಾದುಪರಿಗತೇ ವರ್ಷಾರ್ಧೇ ತನುಗತೇ ಶುಭೇ ಬಲಿನಿ ।
ಉದಯೇಽಪಿ ತಮೋ ಗ್ರಹಯೋಗಃ ಶುಭಃ ಶುಭಕರ್ಮಸುಗ್ರಾಹ್ಯಃ ॥೧॥
ಸ್ವೋಚ್ಚಸ್ವಕ್ಷೇತ್ರಗತಃ ಕವಿರ್ಗುರುರ್ವಾ ಯದಾಬಲೀ ಲಗ್ನೇ ।
ನತದಾದುಷ್ಯತಿ ದೃಷ್ಟಿರ್ಮದನಗತಸ್ಯಾರ್ಕಜಸ್ಯ ರಾಹೋರ್ವಾ ॥೨॥
ಕುರ್ವಂತಿ ಕ್ರಮಶಸ್ತಮೋಽರ್ಕತನಯಾವಾರೋಗ್ಯಮತ್ರಾಷ್ಟಮೇ ॥

### ಸಂಕ್ರಮಣದಲ್ಲಿ ವರ್ಜ್ಯಕಾಲ

ರವಿ ಸಂಕ್ರಮಣಾತ್ಪೂರ್ವಂ ಪರತಶ್ಚಾಪಿ ಷೋಡಶ ॥
ಘಟಿಕಾಶ್ಚ ವಿವರ್ಜ್ಯಾಸ್ಯುಃ ಸರ್ವೇಷು ಶುಭ ಕರ್ಮಸು ॥೧॥

### ರಾಹುಕಾಲ

ಮುಹೂರ್ತ ಗ್ರಂಥಗಳಲ್ಲಿ ಮುಹೂರ್ತಗಳಿಗೆ ತ್ಯಾಜ್ಯವೆಂದು ಹೇಳಲ್ಪಡುವ ಮಹಾದೋಷಗಳ್ಲಿ ರಾಹುಕಾಲದ ಸುದ್ದಿಯೇ ಇಲ್ಲ. ಆದ ಕಾರಣ ವಿವಾಹೋಪನಯನಾದಿ ಸಮಸ್ತ ಶುಭಕಾರ್ಯಗಳ ಮುಹೂರ್ತಗಳಿಗೂ ರಾಹುಕಾಲವನ್ನು ಯಾರೂ ಪರಿಗಣಿಸುವುದಿಲ್ಲ. ಸಂಸರ್ಗವಶಾತ್ ಇದೀಗ ನಮ್ಮೀ ಪ್ರಾಂತದಲ್ಲೂ ರಾಹುಕಲಾ ನೋಡುವ ಹವ್ಯಾಸ ಕೆಲವರಲ್ಲುಂಟಾಗಿದೆ. ಆದರೆ ಶಾಸ್ತ್ರ ವಿರಹಿತವಾದ ಸಂಪ್ರದಾಯ ಆಚರಣೆಯು ಧರ್ಮಾಭಿಮಾನಿ ಜನತೆಗೆ ಸರ್ವಥಾ ಭೂಷಣವಲ್ಲ ಹಾಗೂ ಶ್ರೇಯಸ್ಕರವಲ್ಲ.

**ಅಪರಾಹ್ಣ ಕಾಲದ ವಿವರ**

| ದಿವಾ ಮಾನ ಘಟಿ | ಅಪರಾಹ್ಣ ಕಾಲ ರಿಂದ ಘ. ವಿ. | ಅಪರಾಹ್ಣ ಕಾಲ ವರೆಗೆ ಘ. ವಿ. |
|---|---|---|
| ೨೮ | ೧೬-೪೮ | ೨೨-೨೪ |
| ೨೮। | ೧೬-೫೭ | ೨೨-೩೬ |
| ೨೮॥ | ೧೭-೧೬ | ೨೨-೪೮ |
| ೨೮।॥ | ೧೭-೧೫ | ೨೩-೦೦ |
| ೨೯ | ೧೭-೨೪ | ೨೩-೧೨ |
| ೨೯। | ೧೭-೩೩ | ೨೩-೨೪ |
| ೨೯॥ | ೧೭-೪೨ | ೨೩-೩೬ |
| ೨೯।॥ | ೧೭-೫೧ | ೨೩-೪೮ |
| ೩೦ | ೧೮-೦೦ | ೨೪-೦೦ |
| ೩೦। | ೧೮-೦೯ | ೨೪-೧೨ |
| ೩೦॥ | ೧೮-೧೮ | ೨೪-೨೪ |
| ೩೦।॥ | ೧೮-೨೭ | ೨೪-೩೬ |
| ೩೧ | ೧೮-೩೬ | ೨೪-೪೮ |
| ೩೧। | ೧೮-೪೫ | ೨೫-೦೦ |
| ೩೧॥ | ೧೮-೫೪ | ೨೫-೧೨ |
| ೩೧।॥ | ೧೯-೦೩ | ೨೫-೨೪ |
| ೩೨ | ೧೯-೧೨ | ೨೫-೩೬ |
| ೩೨। | ೧೯-೨೧ | ೨೫-೪೮ |

**ರಾಹುಕಾಲ ಮತ್ತು ಗುಳಿಗಕಾಲ**

ಇಲ್ಲಿ ಸೂರ್ಯನ ಉದಯಾಸ್ತಗಳು ೬ ಗಂಟೆಗೆ ಎಂಬ ಸ್ಥೂಲಮಾನದಾಗಿದೆ.

| ವಾರ | ರವಿ | ಚಂದ್ರ | ಕುಜ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|---|
| ರಾಹು ಘಂಟೆ | 4½-6 | 7½-9 | 3-4½ | 12-1½ | 1½-3 | 10½-12 | 9-10½ |
| ಗುಳಿಕ ದಿವಾ | 3-4½ | 1½-3 | 12-1½ | 10½-12 | 9-10½ | 7½-9 | 6-7½ |
| ಗುಳಿಕ ರಾತ್ರಿ | 9-10½ | 7½-9 | 6-7½ | 3-4½ | 1½-3 | 12-1½ | 10½-12 |

## ಅಂಗಾರಕ ದೋಷ ವಿಚಾರ

ವಿವಾಹವನ್ನು ಮಾಡುವುದಕ್ಕೆ ಮೊದಲು ವಧೂವರರ ಜಾತಕಗಳಲ್ಲಿ ಕುಜದೋಷವನ್ನು ಮುಖ್ಯವಾಗಿ ಗಮನಿಸಬೇಕು. ಜನ್ಮ ಲಗ್ನದಿಂದಲೂ ಚಂದ್ರ ಲಗ್ನ (ಜನ್ಮ ರಾಶಿ) ದಿಂದಲೂ ಶುಕ್ರನಿರುವ ರಾಶಿಯಿಂದಲೂ ಕುಜದೋಷವನ್ನು ನೋಡಬೇಕು. ವಧೂವರರಿಗೆ ಕುಜದೋಷವು ಸಮವಾಗಿರಬೇಕು. ಸ್ತ್ರೀಗಿಂತ ಪುರುಷನಿಗೆ ಸ್ವಲ್ಪ ಹೆಚ್ಚಾಗಿದ್ದರೂ ಬಾಧಕವಿಲ್ಲ. ಸ್ತ್ರೀಗೆ ಹೆಚ್ಚಾಗಿರಕೂಡದು.

ಲಗ್ನದಿಂದ ಚಂದ್ರನಿಂದ ಮತ್ತು ಶುಕ್ರನಿಂದ೧,೨,೪,೫,೭,೮,೧೨ ಈ ಸ್ಥಾನಗಳಲ್ಲಿ ಕುಜನಿದ್ದರೆ ಕುಜದೋಷವುಂಟು. ಚಂದ್ರನ ಮತ್ತು ರವಿಯ ಕ್ಷೇತ್ರಗಳಾದ ಕಟಕ ಮತ್ತು ಸಿಂಹ ಲಗ್ನಗಳಲ್ಲಿ ಹುಟ್ಟಿದ ಸ್ತ್ರೀ ಪುರುಷರಿಗೆ ಕುಜನು ದೋಷಕಾರಿಯಾಗುವುದಿಲ್ಲ. ಕುಜದೋಷವನ್ನು ನೋಡುವಾಗ ಕುಜನಿಗೆ ಬಲವೆಷ್ಟು ಎಂಬುದನ್ನು ಚೆನ್ನಾಗಿ ತಿಳಿದು ಹೇಳಬೇಕು. ವಧೂವರರ ಜಾತಕಗಳಲ್ಲಿ ಒಂದಕ್ಕೆ ಕುಜದೋಷವಿದ್ದು ಮತ್ತೊಂದಕ್ಕೆ ಇಲ್ಲದಿದ್ದರೆ ಹಾಗಿಲ್ಲದಿರುವ ಜಾತಕದಲ್ಲಿ ದ್ವಿತೀಯಚತುರ್ಥ ಪಂಚಮ ಸಪ್ತಮ ಅಷ್ಟಮ ಸ್ಥಾನಗಳಿಗೂ ಆ ಭಾವಾಧಿಪತಿಗಳಿಗೂ ಇತರ ಗ್ರಹಗಳ ದೋಷವಿದೆಯೇ ಎಂಬುದನ್ನು ನೋಡಬೇಕು. ಒಂದು ಜಾತಕಕ್ಕೆ ಯಾವ ಗ್ರಹದೋಷವೂ ಇಲ್ಲದ ಪಕ್ಷದಲ್ಲಿ ವಿವಾಹವನ್ನು ಮಾಡಕೂಡದು. ಇತರ ಗ್ರಹಗಳ ದೋಷವಿರುವ ಪಕ್ಷದಲ್ಲಿ ವಿವಾಹವನ್ನು ಮಾಡಬಹುದು.

ಚಂದ್ರನಿಂದ ಮತ್ತು ಶುಕ್ರನಿಂದ ಕುಜದೋಷವು ಸಮಾನ ಬಲವುಳ್ಳದ್ದು. ಲಗ್ನದಿಂದ ಕುಜದೋಷವು ಚಂದ್ರ ಶುಕ್ರರಿಂದ ಕುಜದೋಷಕ್ಕಿಂತ ಎರಡರಷ್ಟು ಬಲವುಳ್ಳದ್ದು.

## ಗೋಧೂಲೀ ಲಗ್ನಕ್ಕೆ ಪ್ರಮಾಣ

**ಗೋಪೈರ್ಯಷ್ಟ್ಯಾಽಹತಾನಾಂ ಖುರಪುಟದಲಿತಾ ಯಾತಿ ಧೂಲೀ ದಿನಾಂತೇ।**
**ಸೋದ್ವಾಹೇ ಸುಂದರೀಣಾಂ ವಿವಿಧ ಧನಸುತಾಽರೋಗ್ಯ ಸೌಭಾಗ್ಯಧಾತ್ರೀ॥**
**ತಸ್ಮಿನ್ಕಾಲೇ ನಋಕ್ಷಂ ನಚ ತಿಥಿಕರಣಂ ನೈವಲಗ್ನಂ ನಯೋಗಾಃ।**
**ಖ್ಯಾತಾಃ ಪುಂಸಾಂ ಸುಖಾರ್ಥಂ ಶಮಯತಿ ದುರಿತಾನುಚ್ಛ್ರಿತಂ ಗೋರಜಸ್ತು॥**
**ಲಗ್ನಶುದ್ಧಿರ್ಯದಾ ನಾಸ್ತಿ ಕನ್ಯಾ ಯೌವನಶಾಲೀನೀ॥**
**ತದಾ ವೈ ಸರ್ವವರ್ಣಾನಾಂ ಲಗ್ನಂ ಗೋಧೂಲಿಕಂ ಶುಭಂ॥**

**ಇತ್ಯಾದಿ ಪ್ರಮಾಣ ಪ್ರಕಾರ ವಿವಾಹಕ್ಕೆ**
**ಗೋಧೂಲೀ ಲಗ್ನವು ಶುಭವಾಗಿರುತ್ತದೆ.**

*ಹಾರ್ದಿಕ ಶುಭಾಶಯಗಳು*

*ಉತ್ತಮ ಆಯುರ್ವೇದ ಔಷಧಿಗಳಿಗಾಗಿ ಸಂದರ್ಶಿಸಿರಿ :*

**ಶ್ರೀನಿಧಿ ಮೆಡಿಕಲ್ಸ್**

**ಮಾರುತಿ ವೀಥಿಕಾ, ಉಡುಪಿ – 576 101.**
**ಫೋನ್ : 521476.**
(ಆದಿತ್ಯವಾರ ರಜೆ)



## ವಿವಾಹೋಪಯುಕ್ತ ವಿಷಯಗಳು

**ಗೊತ್ರ ಪ್ರವರ :**

ಬಹಳ ಜನರಿಗೆ ಗೊತ್ರ ತಿಳಿದಿದ್ದರೂ, ಪ್ರವರ ತಿಳಿಯದವರಿದ್ದಾರೆ. ಅವರಿಗೋಸ್ಕರ ಈ ಗೋತ್ರ ಪ್ರವರ ಪಟ್ಟಿಯನ್ನು ಕೆಳಗೆ ಕೊಟ್ಟಿದೆ.

| | ಗೊತ್ರ | ಪ್ರವರ |
|---|---|---|
| ೧) | ಅತ್ರಿ | ಆತ್ರೇಯ, ಅರ್ಚನಾಸನ, ಶ್ಯಾವಾಶ್ವೇತಿ, ತ್ರಯಾರ್ಷೇಯ ತ್ರಿಪ್ರವರಾನ್ವಿತ |
| ೨) | ಕಪಿ | ೧) ಅಂಗೀರಸಾ, ಮಹೀಯವೋ, ರುಕ್ಷವಯಸೇತಿ ೨) ಏಕಾರ್ಷೇ ಪ್ರವರಾನ್ವಿತ |
| ೩) | ಕಾಶ್ಯಪ | ೧) ಕಾಶ್ಯಪ, ಆವತ್ಸಾರ, ನೈಧ್ರುವ ೨) ಕಾಶ್ಯಪ, ವತ್ಸಾರ ಆಸಿತೇತಿ ೩) ಕಾಶ್ಯಪ, ಆವತ್ಸಾರ, ನೈಧ್ರುವ, ಶಾಂಡಿಲ್ಯ ರೇಭ, ರೈಭ, ಸಪ್ತಾರ್ಷ, ಪ್ರವರಾನ್ವಿತ (ಕಾಶ್ಯಪಗೋತ್ರ). |
| ೪) | ಕೌಂಡಿಣ್ಯ | ವಾಸಿಷ್ಠ, ಮೈತ್ರಾವರಣ, ಕೌಂಡಿಣ್ಯೇತಿ. |
| ೫) | ಕೌಶಿಕ | ವಿಶ್ವಾಮಿತ್ರ, ಮೈತ್ರಾವರಣ, ಕೌಂಡಿಣ್ಯೇತಿ. |
| ೬) | ಗಾರ್ಗ್ಯ | ಆಂಗೀರ, ಶೈನ್ಯ, ಗಾರ್ಗ್ಯೇತಿ |
| ೭) | ಜಮದಗ್ನಿ | ಭಾರ್ಗವ, ಚ್ಯವನ, ಆಪ್ನವ, ಔರ್ವ, ಜಾಮದಗ್ನೇತಿ |
| ೮) | ನಿತ್ಯುಂದನ | ಅಂಗೀರಸ, ಪೌರಕುತ್ಸ್ಯ, ತ್ರಾಪದಸ್ಯೇತಿ |
| ೯) | ಬಾಭ್ರವ್ಯ | ವಿಶ್ವಾಮಿತ್ರ, ದೇವರಾತ, ಔದಾಸೇತಿ, ತ್ರಯಾರ್ಷೇಯ, ತ್ರಿಪ್ರವರಾನ್ವಿತ |
| ೧೦) | ಭಾರದ್ವಾಜ | ಅಂಗೀರಸ, ಬಾರ್ಹಸ್ಪತ್ಯ, ಭಾರದ್ವಾಜೇತಿ |
| ೧೧) | ವಾಸಿಷ್ಠ | ವಾಸಿಷ್ಠ, ಇಂದ್ರಪ್ರಮುದ, ಭಾರದ್ವಾಜೇತಿ |
| ೧೨) | ವಿಷ್ಣುವೃದ್ಧ | ೧) ಅಂಗೀರಸ, ಪೌರಕುತ್ಸ್ಯ, ತ್ರಾಪದಸ್ಯೇತಿ ೨) ಬಾದರಾಯಣಸ್ಯೇತಿ |
| ೧೩) | ಶಾಂಡಿಲ್ಯ | ಶಾಂಡಿಲ್ಯ, ಅಸಿತ, ದೈಲೇತಿ |
| ೧೪) | ಅಂಗೀರಸ | ಅಂಗೀರಸ, ಅಂಬರೀಶ, ಯೌವನಾಶ್ವೇತಿ (ಹರೀತ ಸಸ್ಯೇತಿ) |
| ೧೫) | ಪಾರಾಶರ | ವಾಸಿಷ್ಠ, ಶಾಕ್ತ್ಯಪಾರಾಶರ್ಯೇತಿ |
| ೧೬) | ಮೌದ್ಗಲ | ಅಂಗೀರಸ, ಭಾರ್ಗ್ಯಾಶ್ವ, ಮೌದ್ಗಲ್ಯೇತಿ |
| ೧೭) | ಕುತ್ಸ | ಅಂಗೀರಸ, ಮಾಂಧಾಶ್ವ, ಕೌತ್ಸೇತಿ |
| ೧೮) | ಶೌನಕ | ಭಾರ್ಗವ, ಶೌನಹೋತ್ರ, ಗಾರ್ತ್ಸಮದೇತಿ |
| ೧೯) | ಉಪಮನ್ಯು | ವಾಸಿಷ್ಠ, ಇಂದ್ರಪ್ರಮುದ, ಭರದ್ವಸ್ವೇತಿ |
| ೨೦) | ನೈಧ್ರುವ | ಕಾಶ್ಯಪ, ಆವತ್ಸಾರ, ನೈಧ್ರುವೇತಿ, (ಕಾಶ್ಯಪಸ್ಯೇತಿ) |
| ೨೧) | ಶಾಲಾಕ್ಷ | ವಿಶ್ವಾಮಿತ್ರ, ಶಾಲಂಕಾಯನ, ಕೌಶಿಕೇತಿ |
| ೨೨) | ಗೌತಮ | ಅಂಗೀರಸ, ಆಯಾಸ್ಯ, ಗೌತಮ ಇತಿ |

---

೧) ಅತ್ರಿ ೨) ಅಂಗೀರಸ ಕುತ್ಸ ಮುದ್ಗಲ ೩) ಉಪಮನ್ಯು ಕೌಂಡಿಣ್ಯ ವಾಸಿಷ್ಠ ೪) ಕಾಶ್ಯಪ ನೈಧ್ರುವ ಶಾಂಡಿಲ್ಯ ೫) ಕುತ್ಸ ಕೇವಲಾಂಗೀರಸ ೬)ಕೌಂಡಿಣ್ಯ ಉಪಮನ್ಯು ವಾಸಿಷ್ಠ ೭) ಗೌತಮ ದ್ವಾದಶ ಪಾರ್ಥಿವ೧೦) ಜಾಮದಗ್ನ್ಯ ಗಾರ್ಗ್ಯ ವತ್ಸ ೧೧)ನೈಧ್ರುವ ಕಾಶ್ಯಪ ಶಾಂಡಿಲ್ಯ ೧೨) ಗೌತಮ ಪಾರ್ಥಿವ, ೧೩) ಪಾರ್ಥಿವ ಕೌಶಿಕ ಕೌಶಿಕ ವಿಶ್ವಾಮಿತ್ರ ಶಾಲಾಕ್ಷ ೧೪) ಬಾದರಾಯಣ ಎಲ್ಲ ಗೋತ್ರಗಳಿಗೂ ಬರುತ್ತದೆ. ೧೫) ಭಾರ್ಗವ ಜಾಮದಗ್ನ್ಯವತ್ಸ ೧೬) ಭಾರದ್ವಾಜ ಗಾರ್ಗ್ಯ ೧೭) ಮುದ್ಗಲ ಎಲ್ಲ ಗೋತ್ರಗಳಿಗೂ ಕಲಿಯುವುದು. ೧೮) ಲೋಹಿತಾಕ್ಷ ಕೌಶಿಕ ಪಾರ್ಥಿವ ಕೌಶಿಕ ವಿಶ್ವಾಮಿತ್ರ ೧೯) ವತ್ಸ ಜಾಮದಗ್ನ್ಯ ಭಾರ್ಗವ ೨೦) ವಾಸಿಷ್ಠ ಉಪಮನ್ಯು ಕೌಂಡಿಣ್ಯ ೨೧) ವೈನ್ಯ ಎಲ್ಲ ಗೋತ್ರಗಳಿಗೂ ಬರುತ್ತದೆ. ೨೨) ವಿಶ್ವಾಮಿತ್ರ ಕೌಶಿಕ ತ್ರಯೋದಶ ಪಾರ್ಥಿವ ಲೋಹಿತಾಕ್ಷ ಶಾಲಾಕ್ಷ ೨೩) ಶಾಂಡಿಲ್ಯ ಕಾಶ್ಯಪ ನೈಧ್ರುವ ೨೪) ಶಾಲಾಕ್ಷ ತ್ರಯೋದಶ ಪಾರ್ಥಿವ ಶಾಲಾಕ್ಷ ಲೋಹಿತಾಕ್ಷ ವಿಶ್ವಾಮಿತ್ರ.

೧ ರಿಂದ ೨೪ರ ವರೆಗಿನ ಗುಂಪಿನಲ್ಲಿಯ ಪರಸ್ಪರ ಗೋತ್ರಗಳು ಕೂಡುವುದಿಲ್ಲ.

## ಜನನ ಕಾಲಕ್ಕೆ ದುಷ್ಟ ತಿಥಿನಕ್ಷತ್ರಾದಿಗಳು

**ಕೃಷ್ಣ ಚತುರ್ದಶೀ ಜನನ ಫಲ :** ಚತುರ್ದಶಿಯ ಆದ್ಯಂತ ಘಟಿಗಳನ್ನು ಆರು ಭಾಗ ಮಾಡಿ ಅವುಗಳ ಪೈಕಿ೧ನೇ ಭಾಗದಲ್ಲಿ ಜನನವಾದರೆ ಶುಭ. ಎರಡನೆ ಭಾಗದಲ್ಲಿ ಜನನವಾದರೆ ತಂದೆಗೆ ಅರಿಷ್ಠ. ೩ನೇ ಭಾಗದಲ್ಲಾದರೆ ತಾಯಿಗೂ, ೪ನೇ ಭಾಗದಲ್ಲಾದರೆ ಸೋದರಮಾವನಿಗೂ ಅರಿಷ್ಠ. ೫ನೇ ಭಾಗದಲ್ಲಿ ವಂಶಾರಿಷ್ಠ. ೬ನೇ ಭಾಗದಲ್ಲಿ ಧನನಾಶವು.

**ಅಮಾವಾಸ್ಯಾ ಜನನ ಫಲ :** ಮೇಲಿನಂತೆಯೇ ಅಮಾವಾಸ್ಯೆಯನ್ನು ಎಂಟು ಭಾಗ ಮಾಡಿ ಅವುಗಳಲ್ಲಿ ಸುರುವಿನ ಒಂದಂಶಕ್ಕೆ ಸಿನೀವಾಲಿ ಎಂದೂ ಮುಂದಿನ ಐದಂಶಗಳಿಗೆ **ದರ್ಶ**ವೆಂದೂ ಕಡೆಯ ಎರಡಂಶಗಳಿಗೆ ಕುಹೂ ಎಂದೂ ಹೆಸರು. ಸಿನೀವಾಲಿ ಸಮಯದಲ್ಲಿ ಸ್ತ್ರೀಯರು ಪ್ರಸವಿಸಿದರೂ, ಎಮ್ಮೆ, ಆನೆ, ಕುದುರೆ ವಗೈರೆ ಪ್ರಾಣಿಗಳು ಪ್ರಸವಿಸಿದರೂ ಸಂಪತ್ತು ನಾಶವಾಗುವುದು. ದರ್ಶದಲ್ಲಿ ಜನನವಾದರೆ ತಂದೆ ತಾಯಿಗಳಿಗೆ ದಾರಿದ್ರ್ಯ. ಕುಹೂ ಸಮಯದಲ್ಲಿ ಜನನವಾದರೆ ಹೆಚ್ಚು ಅನರ್ಥ.

**ಮೂಲಾಕ್ಶ್ಯಾದಿ ಜನನ ಫಲ :** ಮೂಲ ನಕ್ಷತ್ರದ ೧ನೇ ಪಾದದಲ್ಲಿ ಜನನವಾದರೆ ತಂದೆಗೂ, ೨ನೇ ಪಾದದಲ್ಲಿ ತಾಯಿಗೂ ಅರಿಷ್ಟ. ೩ನೆ ಪಾದದಲ್ಲಾದರೆ ಧನನಾಶವು. ೪ನೇ ಪಾದದಲ್ಲಾದರೆ ಶುಭವು. **ಆಶ್ಲೇಷಾ ನಕ್ಷತ್ರ**ದ೧ನೇ ಪಾದದಲ್ಲಿ ಶುಭ; ೨ನೇ ಪಾದದಲ್ಲಿ ಧನನಾಶ; ೩ನೆ ಪಾದದಲ್ಲಿ ತಾಯಿಗೂ, ೪ನೇ ಪಾದದಲ್ಲಿ ತಂದೆಗೂ ಅರಿಷ್ಟ. **ಜ್ಯೇಷ್ಠಾನಕ್ಷತ್ರ**ದ ಕಡೆಯ ೧ ಘಳಿಗೆ ಮತ್ತು ಮೂಲ ನಕ್ಷತ್ರದ ಸುರುವಿನ ೫ ಘಳಿಗೆ ಕೂಡಿ ೬ ಘಳಿಗೆಗಳ ಕಾಲಕ್ಕೆ **ಅಭುಕ್ತಮೂಲ**ವೆಂದು ಹೆಸರು. ಈ ಸಮಯದಲ್ಲಿ ಹುಟ್ಟಿದ ಮಗುವನ್ನು ತಂದೆಯು ಎಂಟು ವರ್ಷದ ವರೆಗೆ ನೋಡಬಾರದೆಂದಿರುವ ಮೂಲಕ ಬಹಳ ಅಷ್ಟ ಫಲವಿರುವುದೆಂದು ತಿಳಿಯತಕ್ಕದ್ದು ಮತ್ತು ಚಿತ್ರೆಯ ಪೂರ್ವಾರ್ಧ, ಪುಷ್ಯದ ಮಧ್ಯದ ೨ ಭಾಗಗಳು ಪೂರ್ವಾಷಾಢಾದ ೩ನೇ ಪಾದ, ಉತ್ತರೆಯ ೧ನೆ ಪಾದ ಇವುಗಳಲ್ಲಿ ಜನನವಾದರೂ ದುಷ್ಟ ಫಲವು ಹೇಳಲಾಗಿದೆ. ಉತ್ತರಾನಕ್ಷತ್ರದಲ್ಲಿ ಜನಿಸಿದ ಸ್ತ್ರೀಯರಿಗೆ ಸಾರಾವಳಿ ಮುಂತಾದ ಗ್ರಂಥಗಳಲ್ಲಿ ಒಳ್ಳೆಯ ಫಲವು ಹೇಳಲ್ಪಟ್ಟಿದ್ದರಿಂದ ಸ್ತ್ರೀಯರಿಗೆ ಉತ್ತರಾನಕ್ಷತ್ರವು ಅನಿಷ್ಟವೆಂಬ ಮಾತು ಪ್ರಮಾಣವಿರುದ್ಧವಾಗಿದೆ.

**ಗಂಡಾಂತರ ದೋಷಗಳು :** ರೇವತಿ, ಆಶ್ಲೇಷ, ಜ್ಯೇಷ್ಠಗಳ ಅಂತ್ಯದ ಐದು ಘಳಿಗೆಗಳು ಮತ್ತು ಅಶ್ವಿನಿ, ಮಾಘೆ, ಮೂಲಗಳ ಸುರುವಿನ ಐದು ಘಳಿಗೆಗಳು ನಕ್ಷತ್ರ ಗಂಡಾಂತ. ಅದರಂತೆ ಪಂಚಮಿ, ದಶಮಿ, ಹುಣ್ಣಿಮೆ, ಅಮಾವಾಸ್ಯೆ ಈ ತಿಥಿಗಳ ಕಡೆಯ ಎರಡೂ ಘಳಿಗೆ ಮತ್ತು ಷಷ್ಠಿ, ಏಕಾದಶಿ, ಪಾಡ್ಯ ತಿಥಿಗಳ ಮೊದಲಿನ ಎರಡು ಘಳಿಗೆ ಸಹ ತಿಥಿ ಗಂಡಾಂತ. ಕರ್ಕಟಕ, ವೃಶ್ಚಿಕ, ಮೀನ ಲಗ್ನಗಳ ಅಂತ್ಯದ ಅರ್ಧಘಟಿ ಹಾಗೂ ಮೇಷ, ಸಿಂಹ ಧನುರ್ಲಗ್ನಗಳ ಆದಿ ಅರ್ಧಘಟಿ ಕೂಡ ರಾಶಿಗಂಡಾಂತ. ಈ ಮೂರು ತರದ ಗಂಡಾಂತಗಳಲ್ಲಿ ಜನನವಾದರೂ ದುಷ್ಟಫಲವಿರುವುದು.

**ಏಕನಕ್ಷತ್ರ ದೋಷ :** ಮಗುವಿಗೂ ತಂದೆ, ತಾಯಿ ಸಹೋದರನಿಗೂ ಒಂದೇ ನಕ್ಷತ್ರವಾದರೆ ಏಕನಕ್ಷತ್ರ ದೋಷವುಂಟಾಗುವುದು. ಇವುಗಳಲ್ಲಿ ಜನನ ಕಾಲಕ್ಕೆ ವ್ಯತೀಪಾತ, ವೈಧೃತಿ, ಚಂದ್ರ-ಸೂರ್ಯಗ್ರಹಣ. ಸಂಕ್ರಾಂತಿ, ವಿಷಘಟಿ ವಗೈರೆ ಪ್ರಾಪ್ತವಾದರೂ ದುಷ್ಟಫಲವು ಹೇಳಲ್ಪಟ್ಟಿದೆ.

**ಪಂಚಮಾರಿಷ್ಟ :** ಜನ್ಮಲಗ್ನದಿಂದ ಐದನೆ ಸ್ಥಾನದಲ್ಲಿ ರವಿಯಿದ್ದರೆ ತಂದೆಗೆ ಅರಿಷ್ಟ, ಚಂದ್ರನಿದ್ದರೆ ತಾಯಿಗೂ, ಕುಜನಿದ್ದರೆ ಒಡಹುಟ್ಟಿದವರಿಗೂ, ಬುಧನಿದ್ದರೆ ಸೋದರಮಾವನಿಗೂ ಗುರುವಿದ್ದರೆ ತಾಯಿಯ ತಂದೆಗೂ ಶುಕ್ರನಿದ್ದರೆ ತಾಯಿಯ ಅಕ್ಕತಂಗಿಯರಿಗೂ ಅರಿಷ್ಟವಿರುವುದು. ಶನಿ, ರಾಹು,ಕೇತುಗಳಿದ್ದರೆ ಮಗುವಿಗೇ ಅರಿಷ್ಟವೆಂದು ತಿಳಿಯತಕ್ಕದ್ದು.

**ಅರಿಷ್ಠಫಲ ಪರಿಹಾರ :** ಅಶೌಚವು ಮುಗಿದ ನಂತರ ಗೋಪ್ರಸವ ಶಾಂತಿ ಮೂಲಕ ಆಯಾ ತಿಥಿನಕ್ಷತ್ರಾದಿ ದೋಷಗಳಿಗೆ ಹೇಳಲ್ಪಟ್ಟ, ಶಾಂತಿಯನ್ನು ಮಾಡಿದ್ದಲ್ಲಿ ಅರಿಷ್ಟವು ಪರಿಹಾರವಾಗಿ ಆಯುರಾರೋಗ್ಯಗಳು ಅಭಿವೃದ್ಧಿಯಾಗುವುದೆಂದು ಪ್ರಮಾಣವಚನಗಳಿರುವವು.

## ತೈಲಾಭ್ಯಂಗಕ್ಕೆ

| ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| ತಾಪ | ಕಾಂತಿ | ಮರಣ ಭಯ | ಸಂಪತ್ತು | ಧನನಾಶ | ವಿಪತ್ತು | ಸಂಪತ್ತು ಸಕಲ ಭೋಗ ಭಾಗ್ಯ |

ಸೂರ್ಯ ಸಂಕ್ರಮಣ ದಿನಗಳು ವ್ಯತೀಪಾತಾದಿಯೋಗಗಳು, ಅಮಾವಾಸ್ಯಾದಿ ಪರ್ವದಿನಗಳೂ, ಉಪವಾಸವ್ರತಾದಿಗಳೂ ವರ್ಜ್ಯಗಳಾಗಿರುತ್ತವೆ. ಸ್ತ್ರೀಯರಿಗೆ ಕುಜವಾರ ಮತ್ತು ಶುಕ್ರವಾರ ಶುಭಪ್ರದವು.

**ನಿತ್ಯ ಕ್ಷೌರಕ್ಕೆ:**

| ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| ಭಯ | ದೇಹಕಾಂತಿ | ಮರಣ ಭಯ | ರಾಜ ಸನ್ಮಾನ | ವಿಜಯ | ಲೋಕಜನತೆಯ ಪ್ರೇಮ | ರೋಗ |

ರಾತ್ರಿ ಕ್ಷೌರ ವರ್ಜ್ಯವು. ಕರ್ಮಾಂಗವಾದ ಕ್ಷೌರಕ್ಕೆ ವಾರದೋಷವಿಲ್ಲ.

**ವಿ.ಸೂ.: ಗುರುವಾರ ಕ್ಷೌರ ನಿಷೇಧವೆಂಬುದು ಅಂಧ ಪರಂಪರೆಯ ಮಾತಾಗಿದ್ದು ಅದು ಶಾಸ್ತ್ರ ಸಮ್ಮತವಲ್ಲ. ಗುರುವಾರ ಕ್ಷೌರಕ್ಕೆ ಮಾಡಿಸಿದರೆ ಅವರಿಗೆ ವಿಜಯವಾಗುವುದು.**

## ಜ್ಯೋತಿಷ್ಯ ಸಾಮಾನ್ಯ ವಿಷಯಗಳು :

**೧. ಶುಭಾಶುಭ ಕಾಲಗಳು ಹಾಗೂ ಶಕುನಗಳು :**

**ತಾರಾಬಲ :** ಜನ್ಮನಕ್ಷತ್ರ ಮೊದಲು ಇಷ್ಟಕಾಲದ ನಕ್ಷತ್ರದ ವರೆಗೆ ( ಎರಡೂ ಸೇರಿ) ಲೆಕ್ಕಮಾಡಿ೯ ರಿಂದ ಭಾಗಿಸಿ ಬಂದ ಶೇಷವು೧ ಆದರೆ ಜನ್ಮತಾರೆ. ೨- ಸಂಪತ್ತಾರೆ, ೩-ವಿಪತ್ತಾರೆ, ೪-ಕ್ಷೇಮತಾರೆ, ೫-ಪ್ರತ್ಯಕ್‌ತಾರೆ, ೬-ಸಾಧಕತಾರೆ, ೭-ವಧತಾರೆ, ೮-ಮಿತ್ರತಾರೆ, ೯-ಅಥವಾ ೦ ಬಂದರೆ ಮೈತ್ರ ತಾರೆ. ೨,೪,೬,೮,೯ ಈ ತಾರೆಗಳು ಒಳ್ಳೆಯವು.

**ತಾರಾಶಾಂತಿ :** ಅನಿವಾರ್ಯ ಪಕ್ಷದಲ್ಲಿ ಜನ್ಮತಾರೆಗೆ ಶಾಕ (ತರ್ಕಾರಿ), ೩ನೇ ತಾರೆಗೆ ಬೆಲ್ಲ, ೫ನೇ ತಾರೆಗೆ ಉಪ್ಪು, ೭ನೇ ತಾರೆಗೆ ಎಳ್ಳು, ಚಿನ್ನ, ವಸ್ತ್ರ ಮೊದಲಾದವುಗಳನ್ನು ದಾನ ಮಾಡಿದರೆ ತಾರಾ ದೋಷವು ಪರಿಹಾರವಾಗುತ್ತದೆ.

**ಚಂದ್ರಬಲ :** ಜನ್ಮರಾಶಿಯಿಂದ ಇಷ್ಟಕಾಲದಲ್ಲಿ ಚಂದ್ರನಿರುವ ರಾಶಿಯವರೆಗೂ (ಎರಡೂ ಸೇರಿ) ಲೆಕ್ಕ ಮಾಡಿ ಬಂದ ಮೊತ್ತವು ೧-ದೇಹಸೌಖ್ಯ, ೨-ಕಲಹ, ೩-ದ್ರವ್ಯಲಾಭ, ೪-ರೋಗಭಯ, ೫-ಕಾರ್ಯವಿಕಲ್ಪ, ೬-ಶತ್ರುನಾಶ, ೭-ಸೌಖ್ಯವೃದ್ಧಿ, ೮- ಆರೋಗ್ಯವೃದ್ಧಿ, ೯-ಕಾರ್ಯತಾಮಸ, ೧೦- ಉದ್ಯೋಗವೃದ್ಧಿ, ೧೧- ಇಷ್ಟಾರ್ಥಸಿದ್ಧಿ, ೧೨-ಧನವ್ಯಯ.

ಶುಕ್ಲಪಕ್ಷದಲ್ಲಿ ೨,೫,೯ ಇವುಗಳೂ ಕೃಷ್ಣ ಪಕ್ಷದಲ್ಲಿ ೪,೮,೧೨ ಇವುಗಳೂ ಉತ್ತಮವೆಂದು ಕೆಲವರ ಅಭಿಮತ.

**ಚಂದ್ರ ಶಾಂತಿ :** ಅನಿರ್ವಾಹ ಪಕ್ಷದಲ್ಲಿ ಚಂದ್ರಗ್ರಹಪೂಜೆ, ಚಂದ್ರಮಂತ್ರ ಜಪ, ಅಕ್ಕಿದಾನ ಇವುಗಳನ್ನು ಮಾಡಿದರೆ ದೋಷವು ಪರಿಹಾರವಾಗುತ್ತದೆ.

**ಶುಕ್ಲಪಕ್ಷದಲ್ಲಿ ತಾರಾಬಲವನ್ನೂ ಕೃಷ್ಣಪಕ್ಷದಲ್ಲಿ ಚಂದ್ರಬಲವನ್ನೂ ಮುಖ್ಯವಾಗಿ ಗಮನಿಸಬೇಕು.**

**ಪಂಚಕ ನೋಡುವ ಕ್ರಮ :** ಇಷ್ಟಕಾಲಕ್ಕೆ ಪ್ರತಿಪದಾದಿ (ಶುಕ್ಲಪಕ್ಷದ ಪಾಡ್ಯ ಮೊದಲು) ತಿಥಿಗಳನ್ನೂ ಮೇಷಾದಿ ಲಗ್ನಗಳನ್ನೂ ಕೂಡಿಸಿ, ಬಂದ ಮೊತ್ತವನ್ನು ೯ ರಿಂದ ಭಾಗಿಸಲು ಶೇಷವು೧ ಬಂದರೆ ಮೃತ್ಯು, ೨-ಅಗ್ನಿ, ೪-ರಾಜ, ೬-ಚೋರ, ೮-ರೋಗಪಂಚಕ. ಇವು ಅಶುಭಗಳು.

ಚೋರ, ರೋಗಪಂಚಕಗಳನ್ನು ರಾತ್ರಿಯಲ್ಲೂ, ರಾಜ ಅಗ್ನಿ ಪಂಚಕಗಳನ್ನು ಹಗಲಿನಲ್ಲೂ, ಮೃತ್ಯುಪಂಚಕವನ್ನು ಹಗಲು - ರಾತ್ರಿಗಳಲ್ಲೂ ಬಿಟ್ಟು ಬಿಡಬೇಕು.

**ಪಂಚಕ ಶಾಂತಿ :** ಅನಿರ್ವಾಹ ಪಕ್ಷದಲ್ಲಿ ಮೃತ್ಯು ಪಂಚಕಕ್ಕೆ ದೀಪ, ಅಗ್ನಿ ಪಂಚಕಕ್ಕೆ ತೈಲ, ರಾಜ ಪಂಚಕಕ್ಕೆ ಲಿಂಬೆ, ಚೋರ ಪಂಚಕಕ್ಕೆ ಲೋಹ, ರೋಗಪಂಚಕಕ್ಕೆ ಧಾನ್ಯ ಇವುಗಳನ್ನು ದಾನ ಮಾಡಿದರೆ ದೋಷವು ಪರಿಹಾರವಾಗುತ್ತದೆ.

ವಿವಾಹ, ಉಪನಯನ, ವ್ರತಚತುಷ್ಟಯ, ಚೌಲಗಳಿಗೆ ಆಯಾ ತಿಂಗಳುಗಳ ಆರಂಭದಿಂದಲೂ; ಯಾತ್ರೆ, ಗೃಹಪ್ರವೇಶ, ರಾಜದರ್ಶನಗಳಿಗೆ ಆಯಾ ಪಕ್ಷಗಳ ಆರಂಭದಿಂದಲೂ ತಿಥಿಯನ್ನು ಲೆಕ್ಕ ಮಾಡಬೇಕು.

**ಲಗ್ನ ತ್ಯಾಜ್ಯ ಕಾಲ :** ಮೇಷ, ವೃಷಭ, ಕನ್ಯಾ, ಧನುರ್ಲಗ್ನಗಳ ಆದಿಭಾಗದಲ್ಲೂ, ಮಿಥುನ, ಸಿಂಹ, ತುಲಾ, ಕುಂಭ ಲಗ್ನಗಳ ಮಧ್ಯಭಾಗದಲ್ಲೂ, ಮೀನ, ಮಕರ, ಕರ್ಕ, ವೃಶ್ಚಿಕಗಳ ಅಂತ್ಯಭಾಗದಲ್ಲೂ ಅರ್ಧ ಘಳಿಗೆಯ ಕಾಲ ತ್ಯಾಜ್ಯವು. ಈ ಕಾಲವನ್ನು ಬಿಟ್ಟು ಶುಭಕಾರ್ಯವನ್ನು ಮಾಡಬೇಕು.

**ಋತುಕಾಲ :** ಸೋಮ, ಬುಧ, ಗುರು, ಶುಕ್ರವಾರಗಳೂ, ದ್ವಿತೀಯಾ, ತೃತೀಯಾ, ಪಂಚಮೀ, ದಶಮೀ, ಏಕಾದಶೀ, ತ್ರಯೋದಶೀ ತಿಥಿಗಳೂ; ಅಶ್ವಿನೀ, ರೋಹಿಣೀ, ಮೃಗಶಿರಾ, ಪುಷ್ಯ, ಉತ್ತರಾ, ಹಸ್ತಾ, ಚಿತ್ರಾ, ಸ್ವಾತಿ, ವಿಶಾಖಾ, ಅನುರಾಧಾ, ಮೂಲಾ, ಉತ್ತರಾಷಾಢಾ, ಶ್ರವಣಾ, ಧನಿಷ್ಠಾ, ಶತಭಿಷಾ, ಉತ್ತರಾಭಾದ್ರಪದಾ, ರೇವತಿ ಈ ನಕ್ಷತ್ರಗಳೂ; ವೃಷಭ, ಮಿಥುನ, ಕರ್ಕಟ, ಕನ್ಯಾ, ತುಲಾ, ಧನುಸ್ಸು, ಮೀನ ಲಗ್ನಗಳೂ; ಪ್ರಾತಃಕಾಲವೂ, ಪೂರ್ವಾಹ್ನವೂ, ಮಧ್ಯಾಹ್ನ ಕಾಲವೂ, ಪೂರ್ವರಾತ್ರಿಯೂ ಪ್ರಥಮ ರಜೋದರ್ಶನಕ್ಕೆ ಶುಭಕಾಲಗಳು.



**ಆಯುಷ್ಕರ್ಮ :** ದ್ವಿತೀಯಾ, ತೃತೀಯಾ, ಪಂಚಮೀ, ಸಪ್ತಮೀ, ದಶಮೀ, ತ್ರಯೋದಶೀ ತಿಥಿಗಳೂ, ಸೋಮ, ಬುಧ, ಗುರುವಾರಗಳೂ; ಅಶ್ವಿನೀ, ಮೃಗಶಿರಾ, ಪುನರ್ವಸು, ಪುಷ್ಯ, ಹಸ್ತಾ, ಚಿತ್ರ, ಸ್ವಾತಿ, ಜ್ಯೇಷ್ಠಾ, ಶ್ರವಣ, ಧನಿಷ್ಠಾ, ಶತಭಿಷಾ, ರೇವತಿ ನಕ್ಷತ್ರಗಳೂ; ಪೂರ್ವಾಹ್ನವೂ, ಶುಭಲಗ್ನವೂ ಶ್ರೇಷ್ಠವಾದವು. ಶುಭಕಾಲದಲ್ಲಿ ಶಾಸ್ತ್ರೋಕ್ತರೀತ್ಯಾ ಕ್ಷೌರಮಾಡಿಸಿಕೊಳ್ಳುವುದರಿಂದ ಆಯುಷ್ಯಾಭಿವೃದ್ಧಿಯೂ ಅಶುಭ ಕಾಲದಲ್ಲಿ ಮಾಡಿಸಿಕೊಳ್ಳುವುದರಿಂದ ತನಗೂ ತನ್ನ ಕುಟುಂಬಕ್ಕೆ ಸೇರಿದವರಿಗೂ ಆಯುಃಕ್ಷೀಣವು ಉಂಟಾಗುವುದರಿಂದ ಈ ಕರ್ಮಕ್ಕೆ ಆಯುಷ್ಕರ್ಮ ಎಂದು ಹೆಸರು. ಫಲವು ಅದೃಷ್ಟಫಲವಾದುದರಿಂದ ಹಿಂದೂ ಶಾಸ್ತ್ರಕ್ಕೆ ಕಟ್ಟುಪಡುವವರೆಲ್ಲರೂ ಇದಕ್ಕೆ ಮುಖ್ಯವಾಗಿ ಗಮನವನ್ನು ಕೊಡಬೇಕು. ಅಣ್ಣ - ತಮ್ಮಂದಿರೂ, ತಂದೆ - ಮಕ್ಕಳೂ ಒಂದೇ ದಿವಸ ಮಾಡಿಕೊಳ್ಳಬಾರದು. ಅನಿವಾರ್ಯವಾಗಿಯೂ ಶಾಸ್ತ್ರೋಕ್ತ ಕರ್ಮಾಂಗವಾಗಿಯೂ ಅಶುಭ ಕಾಲದಲ್ಲಿ ಮಾಡಿಸಿಕೊಳ್ಳುವುದರಿಂದ ಹಿಂದಿನ ದೋಷವು ಪರಿಹಾರವಾಗುವುದೆಂಬುದು ಶಾಸ್ತ್ರ ಸಮ್ಮತವು. ಮಾಧ್ವರಿಗೆ ದಶಮೀ ಮತ್ತು ಗುರುವಾರ ನಿಷೇಧ.

**ಶುಭಶಕುನಗಳು :** ಶುಭ್ರವಸ್ತ್ರ, ಬಂಗಾರ, ತುಂಬಿದ ಕೊಡ, ವಾದ್ಯಧ್ವನಿ, ಶಂಖ, ಕನ್ನಡಿ, ಭತ್ತದ ಅರಳು, ಕುದುರೆ, ಆನೆ, ಆಕಳು, ಅಗ್ನಿ, ಸುಗಂಧದ್ರವ್ಯಗಳು, ಬಿಳಿಯ ಎತ್ತು, ವೇಶ್ಯಾಸ್ತ್ರೀ, ಚಾಮರ, ಮೀನುಗಳು, ಗೋರೋಚನ, ದರ್ಭೆ, ಗೋಮಯ, ಮಣ್ಣು, ಸ್ನೇಹಿತ, ಚಿಗರಿ, ಶವ, ಅಗಸ, ಗರಿಕೆ ಹುಲ್ಲಿನ ಹೊರೆ, ಬ್ರಾಹ್ಮಣ, ಸಾಸಿವೆ, ಮೊಸರುಗಡಿಗೆ, ಈ ಪದಾರ್ಥಗಳು ಶುಭ, ಹಂಸಪಕ್ಷಿ, ಸಂಬಾರಕಾಗೆ, ಮುಂಗುಸಿ, ನವಿಲು, ಹಂಸ, ಮೇಕೆ, ಕತ್ತೆಯ ಧ್ವನಿ ಇವುಗಳು ಯಾವಾಗಲೂ ಶುಭವನ್ನು ಕೊಡುತ್ತವೆ.

**ಅಪಶಕುನಗಳು :** ಭಸ್ಮ, ಅಸ್ಥಿ, ಕಟ್ಟಿಗೆ, ಉಪ್ಪು, ಕಾಲಮರಿ, ಕಮ್ಮಾರ, ಹಿಂಡೆ, ಔಷಧ, ಕೃಷ್ಣ, ಧಾನ್ಯ, ಮಜ್ಜಿಗೆ, ಹತ್ತಿ, ಕೆಂಪು - ಹೂಗಳು, ಚರ್ಮ, ಬೆಲ್ಲ, ಎಣ್ಣೆ, ಕಬ್ಬಿಣ, ಕೆಸರು ಕತ್ತೆ, ಒಂಟೆ, ಮಹಿಷ, ಬರಿಯ ಕೊಡ, ಪ್ರಾಣಿಗಳ ಶಿರಃಕಂಪ, ಸನ್ಯಾಸಿ, ಸರ್ಪ, ಕಪ್ಪೆ, ಹಲ್ಲಿ, ಹಂದಿ, ಮೊಲ, ಬೆಕ್ಕು - ನಾಯಿಗಳ ಜಗಳ, ಪಶುಗಳ ಸೀನು, ಬೆಂಕಿ ಹತ್ತಿದ ಮನೆ ಇವುಗಳು ಅನಿಷ್ಟ ಫಲಗಳನ್ನು ಕೊಡುತ್ತವೆ.

**ಸಾಮಾನ್ಯ ಎಲ್ಲಾ ಶುಭಕರ್ಮಗಳಲ್ಲಿಯೂ ನಿಷಿದ್ಧ ತಿಥಿ ವಾರಾದಿಗಳು :**

೧) ಶುಕ್ಲ ಪ್ರತಿಪತ್ ಉಭಯ ಪಕ್ಷಗಳ ೯, ೬, ೪, ೧೪ ಮತ್ತು ಪೂರ್ಣಿಮಾ, ಅಮಾವಾಸ್ಯೆ, ವೃದ್ಧಿ, ಕ್ಷಯ ತಿಥಿಗಳು. ೨) ರವಿ, ಶನಿ, ಕುಜವಾರಗಳು ಮತ್ತು ೩) ಅವರ ಕಾಲಹೋರಾಗಳು ೪) ಭರಣಿ, ಕೃತ್ತಿ, ಆರ್ದ್ರಾ, ಆಶ್ಲೇಷಾ, ಪೂ. ಫ., ಪೂ.ಷಾ., ಪೂ. ಭಾ., ಚಿತ್ರಾ, ಜ್ಯೇಷ್ಠಾ, ವಿಶಾಖಾ, ಶತತಾರಾ ನಕ್ಷತ್ರಗಳು ೫) ಆಷಾಢ ಭಾದ್ರಪದ ಪುಷ್ಯ ೬) ಕರ್ಕಟ, ಕನ್ಯಾ, ಧನು, ಕುಂಭ ಮಾಸಗಳು ೭) ಗುರು ಶುಕ್ರಾಸ್ತಗಳು ೮) ಸಂಕ್ರಮಣ, ಯುಗಾದಿ ಮನ್ವಾದಿಗಳು ೯) ರಾಹುಕಾಲ, ಗುಳಿಕಕಾಲಗಳು ೧೦) ವ್ಯತೀಪಾತ ವೈಧೃತಿ ಭದ್ರಾಕರಣ ಮಹಾಪಾತಗಳು ೧೧) ನಕ್ಷತ್ರ ತ್ಯಾಜ್ಯಗಳು ೧೨) ದಗ್ಧಯೋಗಗಳು ಈ ೧೨ ಮಹಾದೋಷಗಳು ನಿಷಿದ್ಧವಾದವುಗಳು.

**ನಿಷ್ಕ್ರಮಣಕ್ಕೆ :** ಉ.ಫ., ಉ.ಷಾ., ಉ.ಭಾ., ರೇವತೀ, ರೋಹಿಣೀ, ಅಶ್ವಿನೀ, ಹಸ್ತ, ಪುಷ್ಯ, ಅನು, ಮೃಗಶಿರ, ಚಿತ್ರಾ, ಪುನರ್ವಸು, ಸ್ವಾತೀ ನಕ್ಷತ್ರಗಳು ಶುಭಕರ.

**ಲಗ್ನವಾದ ಮೇಲೆ ಮೊದಲ ವರ್ಷದಲ್ಲಿ ಗೃಹಪ್ರವೇಶಕ್ಕೆ ದೋಷ :** ಲಗ್ನವಾದ ಮೇಲೆ ಮೊದಲು ಆಷಾಢಮಾಸದಲ್ಲಿ ವಧೂ ಗಂಡನ ಮನೆಯಲ್ಲಿದ್ದರೆ ಅತ್ತೆಗೆ ದೋಷ. ಕ್ಷಯ ಮಾಸದಲ್ಲಿದ್ದರೆ ತನಗೆ ದೋಷ. ಜ್ಯೇಷ್ಠ ಮಾಸದಲ್ಲಿದ್ದರೆ ಭಾವನಿಗೆ ದೋಷ. ಪುಷ್ಯಮಾಸದಲ್ಲಿದ್ದರೆ ಮಾವನಿಗೆ ದೋಷ. ಅಧಿಕಮಾಸದಲ್ಲಿದ್ದರೆ ಪತಿಗೆ ದೋಷ. ಚೈತ್ರ ಮಾಸದಲ್ಲಿ ತಂದೆಯ ಮನೆಯಲ್ಲಿದ್ದರೆ ತಂದೆಗೆ ದೋಷ. ಇವರು ಇಲ್ಲದಿದ್ದರೆ ಭಯವಿಲ್ಲ.

**ಕ್ರಯವಿಕ್ರಯಕ್ಕೆ :** ರೇವತೀ, ಭರಣೀ, ಅಶ್ವಿನೀ, ಶ್ರವಣ, ಚಿತ್ರಾ, ವಿಶಾಖಾ, ಪೂರ್ವ ಉತ್ತರಾತ್ರಯ ಕೃತ್ತಿಕಾ, ಆಶ್ಲೇಷಾ ನಕ್ಷತ್ರಗಳು ಶುಭಕರ.

**ಗೃಹ ನಿರ್ಮಾಣಕ್ಕೆ :** ರೋಹಿಣೀ, ಅಶ್ವಿನೀ, ಉ.ಫ., ಉ.ಷಾ., ಉ.ಭಾ., ರೇವತೀ, ಮೂಲ, ಚಿತ್ರಾ, ಶತತಾರಾ, ಸ್ವಾತೀ, ಧನಿಷ್ಠಾ, ಪುಷ್ಯ ನಕ್ಷತ್ರಗಳು ಶುಭಕರ.

## ಪ್ರಶ್ನೆ ಹೇಳಲಿಕ್ಕೂ ಜಾತಕಫಲ ಹೇಳಲಿಕ್ಕೂ ಸುಲಭವಾದ ಗ್ರಹಪ್ರಕರಣ

| ಗ್ರಹ | ರವಿ | ಚಂದ್ರ | ಕುಜ | ಬುಧ | ಗುರು | ಶುಕ್ರ | ಶನಿ | ರಾಹು | ಕೇತು | ಪ್ರಯೋಜನ |
|---|---|---|---|---|---|---|---|---|---|---|
| ಬಣ್ಣ | ಕೆಂಪು | ಬಿಳೀ | ಅತಿಕೆಂಪು | ಪಚ್ಚ | ಹಳದಿ | ಚಿತ್ರ | ಕಪ್ಪು | ಹೊಗೆ | ವಿಚಿತ್ರ | ನಷ್ಟದ್ರವ್ಯ ವ ಪ್ರಸೂತಿಕಾ ವಸ್ತ್ರವರ್ಣ ನಷ್ಟದ್ರವ್ಯ ಲಾಭ ದ್ರವ್ಯ ಹೇಳಲಿಕ್ಕೆ ಕಳ್ಳರ ದಾರಿ, ಪ್ರಸೂತಿಕಾ ಗ್ರಹಹೇಳಲಿಕ್ಕೆ |
| ದ್ರವ್ಯ | ತಾಮ್ರ | ರತ್ನ | ಚಿನ್ನ | ಹಿತ್ತಾಳೆ | ಬೆಳ್ಳಿ | ಮುತ್ತು | ಕಬ್ಬಿಣ | ಸೀಸ | ಕಂಚು | |
| ದಿಕ್ಕು | ಮೂಡು | ವಾಯುವ್ಯ | ತೆಂಕು | ಬಡಗು | ಈಶಾನ್ಯ | ಆಗ್ನೇಯ | ಪಶ್ಚಿಮ | ನೈರುತ್ಯ | ದಿಕ್‌ವಿದಿಕ್ಕು | |
| ಸ್ಥಾನ | ದೇವಸ್ಥಾನ | ಜಲಸ್ಥಾನ | ಬೆಂಕಿರುವ | ಕ್ರೀಡಾಗ್ರಹ | ಖಜಾನೆ | ಮಲಗುವ ಸ್ಥಾನ | ಮಲಿನಸ್ಥಾನ | ನಾಗವನ | ಅಡವಿ | |
| | ಅಡವಿ | | ಪರ್ವತ | ನಗರ | ಪಟ್ಟಣ | ನೀರಿದ್ದ ಜಾಗ | ಅಡವಿ | ನಾಗವನ | ಅಡವಿ | |
| ಜಾತಿ | ಕ್ಷತ್ರಿಯ | ವೈಶ್ಯ | ಕ್ಷತ್ರಿಯ | ವೈಶ್ಯ | ಬ್ರಾಹ್ಮಣ | ಬ್ರಾಹ್ಮಣ | ಶೂದ್ರ | ಅತಿನೀಚ | ಸಂಕರ | ಕಳ್ಳ ನಷ್ಟದ್ರವ್ಯ ಪ್ರಸೂತಿ ಸ್ಥಳ ಹೇಳಲಿಕ್ಕೆ ಚೋರಾದಿಗಳ ಜಾತಿ ಹೇಳಲಿಕ್ಕೆ ಸ್ತ್ರೀ ಪುರುಷ ಪ್ರಕೃತಿ ಹೇಳಲಿಕ್ಕೆ ಚೋರಾದಿಗಳ ಪ್ರಾಯ ಹೇಳಲಿಕ್ಕೆ |
| ಲಿಂಗ | ಪು | ಸ್ತ್ರೀ | ಪೂ | ನಪುಂಸಕ | ಪು | ಸ್ತ್ರೀ | ನಪುಂಸಕ | ... ... ... | ... ... ... | |
| | ಪ್ರೌಢ | ಬಾಲೆ | ತರುಣ | ಕುಮಾರ | ಪ್ರೌಢ | ಅತೀ ತರುಣ | ವೃದ್ಧ | ... ... ... | ... ... ... | |
| ವಯಸ್ಸು | ೫೦-೭೦ | ೦-೫ | ೧೬-೩೦ | ೫-೧೫ | ೩೦-೫೦ | ೧೬ | ೭೦ | ... ... ... | ... ... ... | |
| ಶರೀರ | ರಕ್ತಶ್ಯಾಮ | ಗೌರ | ರಕ್ತಗೌರ | ಹಸುರು | ಗೌರ | ಶ್ಯಾಮಲ | ಕಪ್ಪು | ... ... ... | ... ... ... | |
| ವರ್ಣ | ಕೆಂಪೂಕಪ್ಪು | ಬಿಳುಪುಹಳದಿ | ತಾವರೆಯಂತೆ | ಎಳೆಗರಿಕೆ ಹಾಗೆ | ಬಂಗಾರವರ್ಣ | ಹಳದಿ ಬಿಳುಪು ಕಪ್ಪು | .... | ... ... ... | ... ... ... | |
| ವಸ್ತ್ರ | ದಪ್ಪ | ಹೊಸತು | ಸುಟ್ಟ | ಒದ್ದೆ | ಸಾಧಾರಣ | ಘಟ್ಟಿ | ಹರಕು | ... ... ... | ... ... ... | |
| ಕಾಲ | ೬ತಿಂಗಳು | ೨ಘಳಿಗೆ | ೧ದಿನ | ೨ತಿಂಗಳು | ೧ತಿಂಗಳು | ೧೫ದಿನ | ೧ ವರ್ಷ | ೮ ತಿಂಗಳು | ೩ತಿಂಗಳು | ಸೂತಿಕಾ ವ ಕಳ್ಳ ಉಟ್ಟುಕೊಂಡ ಭಸ್ಮ ಲಾಭ ಲಾಭ ಹೇಳಲಿಕ್ಕೆ ಸವುಯ ಯಾವ ಸ್ವಭಾವದವ ಯಾವ ವಿದ್ಯೆ ಕಲಿಯುವವನು ಯಾವ ರಸದಲ್ಲಿ ಪ್ರೀತಿ ಉಳ್ಳವನು ಈ ತರದ ದೇಹಪ್ರಕೃತಿ ಪ್ರಶ್ನ ಲಗ್ನಗ್ರಹದಿಂದ ಬಾಧೆ ಹೇಳಲಿಕ್ಕೆ ಬಾಧ ಪರಿಹಾರಕ್ಕೆ |
| ಸ್ವಭಾವ | ಸಾತ್ವಿಕ | ಸಾತ್ವಿಕ | ತಾಮಸ | ರಾಜಸ | ಸಾತ್ವಿಕ | ರಾಜಸ | ತಾಮಸ | | | |
| ವಿದ್ಯಾ | ವೈದ್ಯ | ಜೋತಿಷ | ಶಸ್ತ್ರ | ಶಿಲ್ಪ | ವ್ಯಾಕರಣ | ಸಂಗೀತ | ಯವನಮತ | ಗಾರುಡ | ಮಾಂತ್ರಿಕ | |
| ರಸಗಳು | ಖಾರ | ಉಪ್ಪು | ಕಹಿ | ಷಡ್ರಸ | ಶೀ | ರುಳಿ | ಒಗರು | ... ... ... | ... ... ... | |
| ರೋಗ | ಪಿತ್ಥ | ವಾತ | ಉಷ್ಣ | ಶ್ವಾಸ | ಕಫ | ಮೂತ್ರಕಟ್ಟು | ವಾತಜ್ವರ | ವಿಷ | ಶೂಲ | |
| ಉಪಹತಿ | ಭೂತ | ದುರ್ಗಾ | ಭೂತ | ಗಂಧರ್ವ | ಬ್ರಹ್ಮರಾಕ್ಷಸ | ಯಕ್ಷಿಣಿ | ಪ್ರೇತ | ಭೂತ | ಕೃತ್ರಿಮ | |
| ದೇವತೆ | ಶಿವ | ಗೌರೀ | ಸ್ಕರದ | ವಿಷ್ಣು | ಈಶ್ವರ | ಲಕ್ಷ್ಮೀ | ತ್ರಿಮೂರ್ತಿ | ಸರ್ಪ | ಗಣಪತಿ | |



## ನವಗ್ರಹರು ಜನ್ಮಾದಿ ದ್ವಾದಶ ರಾಶಿಗಳಲ್ಲಿ ಚಾರರೀತ್ಯಾ ಬಂದಾಗ ಕೊಡುವ ಶುಭಾಶುಭ ಫಲಗಳು

| ಸ್ಥಾನ | ಜನ್ಮ | ದ್ವಿತೀಯಾ | ತೃತೀಯ | ಚತುರ್ಥ | ಪಂಚಮ | ಷಷ್ಠ | ಸಪ್ತಮ | ಅಷ್ಟಮ | ನವಮ | ದಶಮ | ಏಕಾದಶ | ದ್ವಾದಶಿ |
|---|---|---|---|---|---|---|---|---|---|---|---|---|
| ರವಿ | ಆಯಾಸ | ವಿತ್ತನಾಶ | ಶತ್ರುನಾಶ | ಕ್ಲೇಶ | ಭೀತಿ | ರೋಗನಾಶ | ಅಧ್ವಾನ | ರೋಗ | ವ್ಯಸನ | ಕರ್ಮಸಿದ್ಧಿ | ಮಾನಲಾಭ | ಪ್ರವಾಸ |
| ಚಂದ್ರ | ಭೋಗ | ದ್ರವ್ಯನಾಶ | ಜಯ | ಭಯ | ಶೋಕ | ಶತ್ರುನಾಶ | ಸುಖ | ಅನಿಷ್ಟ | ರೋಗ | ಇಷ್ಟಸಿದ್ಧಿ | ಸಂತೋಷ | ವ್ಯಯ |
| ಕುಜ | ನಾಶ | ವಿತ್ತನಾಶ | ಸ್ಥಾನಲಾಭ | ಕ್ಲೇಶ | ಭೀತಿ | ತಾಮ್ರಲಾಭ | ಭಾರ್ಯಾಕಲಹ | ರೋಗ | ವ್ಯಸನ | ಭಂಗ | ಸುಖಲಾಭ | ಧನಲಾಭ |
| ಬುಧ | ವಿತ್ತನಾಶ | ಸಂಪತ್ತು | ಶತ್ರುಭಯ | ಧನಲಾಭ | ಪುತ್ರಕಲಹ | ಜಯ | ಅನಿಷ್ಠ | ಪುತ್ರಲಾಭ | ವಿಘ್ನ | ಸುಖ | ಪುಷ್ಟಿ | ಅಪಜಯ |
| ಗುರು | ದುಃಖ | ಧನಲಾಭ | ಸ್ಥಾನನಾಶ | ಬಂಧನಕ್ಲೇಶ | ಪುತ್ರಲಾಭ | ಶತ್ರುಪೀಡೆ | ಭೋಗ | ರೋಗ | ಸುತಲಾಭ | ಧನನಾಶ | ಸ್ಥಾನಲಾಭ | ದುಃಖ |
| ಶುಕ್ರ | ಭೋಗ | ಧನಲಾಭ | ಸಂಪತ್ತು | ಸುಖ | ಪುತ್ರಲಾಭ | ವಿಪತ್ತು | ಸ್ತ್ರೀಪೀಡೆ | ಸಂಪತ್ತು | ಸ್ತ್ರೀಸುಖ | ಕಲಹ | ಅಭಿವೃದ್ಧಿ | ಲಾಭ |
| ಶನಿ | ನಾನಾರೋಗ | ಧನಲಾಭ | ಧನಲಾಭ | ಸುಖಹಾನಿ | ಧನಹಾನಿ | ಶತ್ರುನಾಶ | ಅಧ್ವಾನ | ಅತಿದುಃಖ | ಧರ್ಮನಾಶ | ದಾರಿದ್ರ | ಧನಲಾಭ | ವಿತ್ತನಾಶ |
| ರಾಹುಕೇತು | ಭಯ | ಕಲಹ | ಸೌಭಾಗ್ಯ | ಮಾನಹಾನಿ | ಬುದ್ಧಿನಾಶ | ಸುಖ | ರಾಜಭಯ | ವಿತ್ತನಾಶ | ಸಂತಾಪ | ಕಲಹ | ಸ್ತ್ರೀಲಾಭ | ಸರ್ವನಾಶ |

### ಗ್ರಹದೋಷ ಪರಿಹಾರಕ್ಕಾಗಿ ದಾನಕೊಡತಕ್ಕ ದ್ರವ್ಯಗಳು ಮತ್ತು ಆರಾಧ್ಯ ದೇವತೆ ವಗೈರೆಗಳ ವಿವರ

| ಗ್ರಹ | ರವಿ | ಚಂದ್ರ | ಕುಜ | ಬುಧ | ಗುರು | ಶುಕ್ರ | ಶನಿ | ರಾಹು | ಕೇತು |
|---|---|---|---|---|---|---|---|---|---|
| ಆರಾಧ್ಯ ದೇವತೆ | ಶಂಭು | ದುರ್ಗೆ | ಸ್ಕಂದ | ವಿಷ್ಣು | ರುದ್ರ | ಲಕ್ಷ್ಮೀ | ತ್ರಿಮೂರ್ತಿ | ಸ್ಕಂದ | ಗಣಪತಿ |
| ಪೂಜಾಪುಷ್ಪ | ಕೆಂಪು | ಬಿಳಿ | ರಕ್ತ | ಶ್ಯಾಮ | ಹಳದಿ | ಬಿಳಿ | ನೀಲ | ನೀಲ | ನೀಲ |
| ಜಪಸಂಖ್ಯೆ | ೭ಸಾವಿರ | ೧೧ಸಾವಿರ | ೧೦ಸಾವಿರ | ೪ಸಾವಿರ | ೧೯ಸಾವಿರ | ೧೬ ಸಾವಿರ | ೨೩ಸಾವಿರ | ೧೮ ಸಾವಿರ | ೧೭ಸಾವಿರ |
| ರತ್ನದಾನ | ಮಾಣಿಕ್ಯ | ಮುತ್ತು | ಹವಳ | ಪಚ್ಚೆ | ಪುಷ್ಯರಾಗ | ವಜ್ರ | ನೀಲ | ಗೋಮೋಧಕ | ವೈಢೂರ್ಯ |
| ವಸ್ತ್ರದಾನ | ಕೆಂಪು | ಬಿಳಿ | ರಕ್ತ | ಹಸುರು | ಹಳದಿ | ಬಿಳಿ | ಕಪ್ಪು | ಚಿತ್ರ | ಚಿತ್ರ |
| ಧಾನ್ಯದಾನ | ಗೋಧಿ | ಅಕ್ಕಿ | ತೊಗರಿ | ಹೆಸರು | ಕಡಲೆ | ಅವರೆ | ಎಳ್ಳು | ಉದ್ದು | ಹುರುಳಿ |
| ಪಶುದಾನ | ಕಪಿಲಧೇನು | ಬಿಳಿವೃಷಭ | ರಕ್ತವೃಷಭ | ಅಶ್ವ | ಶ್ವೇತಾಶ್ವ | ಶ್ವೇತಾಶ್ವ | ಕೃಷ್ಣಧೇನು | ಆಡು | ಆನೆ |
| ರಸದಾನ | ಬೆಲ್ಲ | ತುಪ್ಪ | ಬೆಲ್ಲ | ತುಪ್ಪ | ಸಕ್ಕರೆ | ತುಪ್ಪ | ತೈಲ | ತೈಲ | ತೈಲ |

### ತಾರಾಬಲ ಚಂದ್ರಾಷ್ಟಮಗಳನ್ನು ನೋಡುವ ಕ್ರಮ

ಹುಟ್ಟಿದ ನಕ್ಷತ್ರಕ್ಕೆ ಜನ್ಮ ನಕ್ಷತ್ರವೆಂತಲೂ, ಹತ್ತನೇ ನಕ್ಷತ್ರಕ್ಕೆ ದ್ವಿಜನ್ಮವೆಂತಲೂ, ಹತ್ತೊಂಬತ್ತನೇ ನಕ್ಷತ್ರಕ್ಕೆ ತ್ರಜನ್ಮವೆಂತಲೂ ಹೆಸರು. ಜನ್ಮ, ದ್ವಿಜನ್ಮ, ತ್ರಿಜನ್ಮ ತಾರೆಗಳಿಂದ ಮುಂದಿನ ನಕ್ಷತ್ರಗಳಿಗೆ ಕ್ರಮವಾಗಿ ಸಂಪತ್ತಾರೆ, ವಿಪತ್ತಾರೆ, ಪ್ರತ್ಯರತಾರೆ, ಸಾಧಕತಾರೆ, ವಧತಾರೆ, ಮೈತ್ರತಾರೆ, ಎಂಬುದಾಗಿ ಹೇಳಲ್ಪಟ್ಟಿದೆ. ಜನ್ಮ ಕಾಲದಲ್ಲಿ ಚಂದ್ರನು ಇರುವ ರಾಶಿಗೆ ಜನ್ಮ ರಾಶಿಯೆಂಬ ಹೆಸರಿದ್ದು ಅದರಿಂದ೮ನೇ ರಾಶಿಯಲ್ಲಿ ಚಂದ್ರನಿರುವಾಗ ಚಂದ್ರಾಷ್ಟಮ ದೋಷವು ಸಂಭವಿಸುತ್ತದೆ. ಜನ್ಮ ರಾಶಿ ಹಾಗೂ ಅಷ್ಟಮರಾಶಿಗಳ ಅಧಿಪತಿಯು ಒಬ್ಬನೇ ಗ್ರಹನಾಗಿದ್ದರೆ ಅಥವಾ ಆ ಎರಡು ರಾಶ್ಯಧಿಪತಿಗಳು ಅನ್ಯೋನ್ಯ ಮಿತ್ರರಾಗಿದ್ದರೆ ಅಂಥವರಿಗೆ ಎಂದೂ ಚಂದ್ರಾಷ್ಟಮ ದೋಷವಿಲ್ಲವೆಂದು ಪ್ರಮಾಣವಿರುತ್ತದೆ. ಪ್ರತಿಯೊಂದು ಕಾರ್ಯಕ್ಕೂ ತಾರಾಬಲ ಚಂದ್ರಾಷ್ಟಮಗಳನ್ನು ನೋಡತಕ್ಕದ್ದು.